
ಕಲ್ಯಾಣ ಕಿರಣ

ಜೂನ್ - 2005

10 ರೂ.



ಕಲ್ಯಾಣ ಪರ್ವ ವಿಶೇಷ ಸಂಚಿಕೆ



ಬಸವಣ್ಣನವರ ಬಹುಮುಖ ವ್ಯಕ್ತಿತ್ವ



ಗುರುಲಿಂಗ ಜಂಗಮಕ್ಕೆ ಆಧಾರ ಬಸವಣ್ಣ
ಪಾದೋದಕ ಪ್ರಸಾದಕ್ಕೆ ಆಧಾರ ಬಸವಣ್ಣ
ಸರ್ವಾಪತ್ತಿಗಾಧಾರ ಬಸವಣ್ಣ,
ಸ್ವರ್ಗ ಮರ್ತ್ಯ ಪಾತಾಳಕ್ಕೆ ಬಸವಣ್ಣನ ಚೈತನ್ಯವಲ್ಲದಿಲ್ಲ.
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ
ಎನುತಿರ್ದಾತನಂಬಿಗ ಚೌಡಯ್ಯ.

(ಅಂಬಿಗರ ಚೌಡಯ್ಯ)

ಹೇಗೆ ಬಣ್ಣಿಸಲಿ ಬಸವಾ ನಿನ್ನಘನ ನಿಲುವಾ ?
ತ್ಯಾಗ-ಯೋಗಗಳ ದಿವ್ಯ ಸಂಗಮವಾ ||ಪ||

ಅವತಾರವನು ನೋಡೆ ದೇವಕರುಣೆಯ ಕಂದ
ಭುವಿಯ ಬೆಳಗಲು ಬಂದ ಪರಮ ಆನಂದ
ಮನುಕುಲದ ವೃಕ್ಷದಲ್ಲಿ ಅರಳಿರುವ ದಿವ್ಯ ಸುಮ
ದೀನದಲಿತೋದ್ಧಾರಗೈದ ಘನ ಮಹಿಮ ||1||

ಆಕಾರದಲಿ ನೋಡೆ ಚಿನ್ಮಯ ಚೆಲುವನು
ಕಂಗಳಲಿ ಧರಿಸಿಹೆ ಕರುಣೆಯ ಭಾವವನು
ನುಡಿಪರುಷ ನಡೆಪರುಷ ಸಾಧಿಸಿದ ಪುರುಷನು
ಶರಣ ಜನ ಸಮುದಯಕೆ ತರುವೆ ನೀ ಹರ್ಷವನು ||2||

ಭಕ್ತಿ ಸಿರಿಯಲಿ ನೋಡೆ ಭಕ್ತಿ ಭಂಡಾರಿ
ಯುಕ್ತಿ ಸಂಪದದಲ್ಲಿ ಬಹು ಬಗೆಯ ಮೇಧಾವಿ
ಮುಕ್ತಿ ಸಂಪದವೀವ ಮೋಕ್ಷದಾಯಕ ಗುರುವು
ಸರ್ವಾಂಗ ಪರಿಪೂರ್ಣವೈ ನಿನ್ನ ನಿಲುವು ||3||

ಸಾಹಿತ್ಯ ಕ್ಷೇತ್ರದಲಿ ಸಾರ್ವಭೌಮನು ನೀನು
ಸಮತೆಯ ಕಿರಣವನು ಹರಿಸಿರುವ ಭಾನು
ಎಲ್ಲ ನನ್ನವರೆಂದು ಆದರಿಸಿದ ಹೃದಯಿ
ಎಲ್ಲರೆದೆಗಳ ತುಂಬಿ ನಿಂತಿರುವ ತಾಯಿ ||4||

ಕರ್ತನ ದೇವತ್ವ ಮಾನವರ ಭ್ರಾತೃತ್ವ
ವಿಶ್ವಧರ್ಮದ ಸೂತ್ರ ಸಾರಿದ ಧರ್ಮಪಿತ
ಬಸವಣ್ಣ ಬಸವಪ್ಪ ಬಸವರಸ ಬಸವಯ್ಯ
ಸಚ್ಚಿದಾನಂದನನು ತೋರಿಸಿದ ಎನ್ನಯ್ಯ ||5||

-ಮಾತಾಜಿ

ಕಲ್ಯಾಣ ಕಿರಣ

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 500ರೂ
ಸಂಚಿಕೆ 3 ಜೂನ್ 2005 ವಾರ್ಷಿಕ ಚಂದಾ 50/-ರೂ.



ಜೂನ್ 30ರಂದು ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ
11ನೆಯ ಲಿಂಗೈಕ್ಯ ಸಂಸ್ಮರಣೆಯನ್ನು
ಆಚರಿಸಲಾಗುತ್ತಿದೆ.

KALYANA KIRANA-Reg No.19988/70. Monthy Magazine printed and published by B. Shambulingaiah, at Prabhudeva Printing Press, Basava Gangotri, Kumbalagodu,Bangalore-560074.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790
ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಗುರು ಸ್ಮರಣೆ





ಈ ಬಗೆಯ ನಿಲುವ ಇನ್ನಾವ ಜಂಗಮನೊಳು ಕಾಣೆ
ಬಸವ ಕರುಣೆಯ ಕಿರಣ ಗುರು ಲಿಂಗಾನಂದರಲಲ್ಲದೆ ||ಪ||

ಹರಿವ ಗಂಗೆಯ ತೆರದಿ ಜಗದ ಬಯಲಲಿ ಚರಿಸಿ
ವರ ಭಕ್ತಿ-ಜ್ಞಾನಗಳ ಬೆಳೆ ತೆಗೆದ ಗುರುವೆ।
ಬಸವ ಧರ್ಮದ ಪ್ರಭೆಯ ಪುನಃ ಬೆಳಗಿದ ಯೋಗಿ
ಬಸವ ಸಾಮ್ರಾಜ್ಯವನ್ನು ಕಟ್ಟಿದ ಮಹತ್ಯಾಗಿ ||1||

ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು।
ಧಾರವಾಡದಿ ಜ್ಞಾನ ಸಂಪದವ ಸಂಚಯಿಸಿ
ಚರಿಪ ಮಾರುತವಾಗಿ ಸುಳಿದ ಜ್ಞಾನದಾಸೋಹಿ ||2||

ಮಲ್ಲಪ್ಪ ಕಲ್ಲಮ್ಮ ದಂಪತಿಯ ಶಿಶುವಾಗಿ
ಚೆಲುವಿನಾ ಕಾಯವನು ಧರಿಸಿದ ಶಿವದೇಹಿ।
ಸಂಗಮೇಶನೆಂಬ ದಿವ್ಯ ನಾಮದಿ ಬೆಳೆದು
ಆದೆ ಲಿಂಗಾನಂದ ಬಸವ ಕರುಣೆಯ ಪಡೆದು ||3||

ಮಹಿಳಾಗುರು ಪೀಠವಂ ಸ್ಥಾಪಿಸಿದ ಮಹಾಗುರು
ಮಹಮನೆಯ ಆಸರೆಯ ನೀಡಿದ ಕಲ್ಪತರು।
ಕೂಡಲ ಸಂಗಮದ ಬಸವ ಧರ್ಮದ ಪೀಠ
ಏರಿ ಜಗದ್ಗುರುವಾಗಿ ಬೆಳಗಿದ ಸುವಿರಾಗಿ ||4||

ರಾಷ್ಟ್ರ ಪ್ರೇಮದ ಕಣಿಯೆ ಸತ್ಯನಿಷ್ಠೆಯ ಕಲಿಯೆ
ರಾಷ್ಟ್ರೀಯ ಬಸವ ದಳ ಸ್ಥಾಪಿಸಿದ ತತ್ತ್ವವಾದಿ।
ಪ್ರವಚನದ ಪಟುವಾಗಿ ಜ್ಞಾನ ನೀಡಿದ ಮೂರ್ತಿ
ವಚನ ವಾಙ್ಮಯ ಕೀರ್ತಿ ಪಸರಿಸಿದ ಗುರು ಜ್ಯೋತಿ||5||

ಚೈತನ್ಯ ಚಿಲುಮೆಯೆ ಸತ್ಯ ಚಿಂತನ ನಿಧಿಯೆ
ಜಾತಿವಾದವ ಜರಿದ ವಿಶ್ವಪ್ರೇಮದ ಸುಧೆಯೆ।
ಶರಣ ಧರ್ಮದ ದಿವ್ಯ ವರರತ್ನ ತಾವು
ಎಂದು ಬಸವಾತ್ಮಜೆಯು ನಿತ್ಯ ನೆನೆಯುವೆ ನಾನು ||6||

-ಮಾತಾಜಿ

ವೀರಶೈವವಾದಿಗಳ ಪೀಕಲಾಟ

ಏಪ್ರಿಲ್ ತಿಂಗಳ ಒಂದು ದಿವಸ ; ಜರ್ಮನಿಯ ಮ್ಯುನಿಚ್ ವಿಶ್ವವಿದ್ಯಾಲಯದಿಂದ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಸಾಧಿಸಿ, ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರಂ ಎಂಬ ಸಂಸ್ಕೃತ ಗ್ರಂಥದ ಬಗ್ಗೆ ಅಧ್ಯಯನ ನಡೆಸಿರುವ ಓರ್ವ ಜರ್ಮನ್ ಮಹಿಳೆ ಬಂದು ಕೆಲವು ಪ್ರಶ್ನೆಗಳನ್ನು ಪಟ್ಟಿ ಮಾಡಿಕೊಟ್ಟಳು. ತಾನು ಮೈಸೂರು ವೀಕ್ಷಿಸಲು ಹೋಗಿ ಬರುವುದಾಗಿಯೂ ನಂತರ ಬಂದು ಕಾಣುವುದಾಗಿಯೂ ಹೇಳಿದಳು.

ಬಹಳ ಹಿಂದೆ ಸುಮಾರು 1970ರಲ್ಲಿ ನಾನು ಆ ಪುಸ್ತಕ ಓದಿದ್ದೆ. ಈಗೊಮ್ಮೆ ಓದಿ, ಉತ್ತರಿಸುವುದು ಸರಿಯಾದೀತೆಂದು ನನ್ನ ಪುಸ್ತಕ ಸಂಗ್ರಹದಲ್ಲಿ ಹುಡುಕಿದೆ; ಸಿಕ್ಕಿತು. ಸಂಪಾದಕರು ಆಸ್ಥಾನ ವಿದ್ವಾನ್ ಪಂಡಿತ ವೈ.ನಾಗೇಶ್ ಶಾಸ್ತ್ರಿಗಳು. ಬಳ್ಳಾರಿ; ಪ್ರಕಾಶಕರು ಧಾರವಾಡ ಮುರುಘಾಮಠದ ಶ್ರೀನಿ.ಪ್ರ.ಮೃತ್ಯುಂಜಯ ಸ್ವಾಮಿಗಳು. ಪ್ರಕಟವಾದ ವರ್ಷ 1958.

ಲಿಂಗಾಯತ ಜನರು, ಮಠಾಧೀಶರು, ಸಾಹಿತಿಗಳು, ಶಾಸ್ತ್ರಿಗಳು ಯಾರೋ ಅಪ್ಪನನ್ನು ಹುಡುಕುವ ದಿಶೆಯಲ್ಲಿ, ತಮಗೆ ಸಂಬಂಧವೇ ಇರದ 'ವೀರಶೈವ' ಪದವನ್ನು ತಂದು ಲಿಂಗಾಯತ ಸಮಾಜದ ಮನೆಯೊಳಕ್ಕೆ ಕಸವನ್ನು ತುಂಬಿಕೊಳ್ಳಲು ಎಷ್ಟು ವ್ಯರ್ಥ ಸಾಹಸ ಮಾಡಿದ್ದಾರೆ ಎಂದು ಅನ್ನಿಸುತ್ತದೆ.

ಮೊಗ್ಗೆಯ ಮಾಯಿದೇವರ ಇನ್ನೊಂದು ಮಹತ್ವಪೂರ್ಣ ಕೃತಿ ಶತಕ ತ್ರಯ. ಅದನ್ನು ಬರೆಯುವ ವೇಳೆಗೆ ಅವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿ ಶರಣ ಮಾರ್ಗಿಗಳಾಗಿದ್ದಾರೆ. ಶತಕ ತ್ರಯದಲ್ಲಿ ಅದನ್ನು ಅತ್ಯಂತ ಸ್ಪಷ್ಟವಾಗಿ ಬಿಂಬಿಸಿಬಿಟ್ಟಿದ್ದಾರೆ. ಆದರೆ ಶಿವಾನುಭವ ಸೂತ್ರಂ ಬರೆಯುವಾಗ (1430) ಅವರ ಕಿವಿಯ ಮೇಲೆ ಲಿಂಗ-ಅಂಗ, ಷಟಸ್ಥಲ ಮುಂತಾದ ಶರಣ ಸಂಸ್ಕೃತಿಯ ಪದಗಳು ಕಿವಿಯ ಮೇಲೆ ಬಿದ್ದು, ಪ್ರಸ್ತುತ ಕೃತಿಯಲ್ಲಿ ಬಳಕೆಯಾಗಿದ್ದರೂ ವಚನ ಸಾಹಿತ್ಯದಲ್ಲಿ ಬಿಂಬಿತವಾಗುವ ಷಟಸ್ಥಲದ ಜೀವಂತಿಕೆ ಇಲ್ಲಿ ಕಾಣಬರದು. ಮುರುಘಾಮಠದ ಪ್ರಕಟಣೆ ಟೀಕಾರ್ಥ(Commentary) ಸಹಿತವಾಗಿದ್ದು ಅದು ಮುದ್ರಿಸಲ್ಪಡುವಾಗ ಅಥವಾ ಅದಕ್ಕೆ ಆಕರ ಗ್ರಂಥವಾಗಿರುವ ತಾಡಓಲೆಯ ಗ್ರಂಥದಲ್ಲಿ ಶ್ರೀಗುರುಬಸವಲಿಂಗಾಯ ನಮಃ ಇದೆಯಾದರೂ, ಇಡೀ ಕೃತಿಯಲ್ಲಿ ಎಲ್ಲೆಲ್ಲೂ ಗುರು ಬಸವಣ್ಣನವರ ಉಲ್ಲೇಖ ಇಲ್ಲ; ಆದರೆ ಶತಕ ತ್ರಯದಲ್ಲಿ ಆರಂಭದ ಶ್ಲೋಕದಿಂದಲೇ ಬಸವಣ್ಣನವರನ್ನು ಮತ್ತು ಚನ್ನಬಸವಣ್ಣ-ಅಲ್ಲಮಪ್ರಭುದೇವರನ್ನು ಸ್ತುತಿಸಲಾಗಿದೆ.

ಶಿವಾನುಭವ ಸೂತ್ರದಲ್ಲಿ 3ನೇ ಶ್ಲೋಕದಲ್ಲಿ ಮಲಪ್ರಭಾ ತಟದಲ್ಲಿರುವ ಐಪುರಿ ಕ್ಷೇತ್ರವನ್ನು ಕವಿ ಸ್ತುತಿಸುವನು. ಈ ವಿಧಿಯು ಶುದ್ಧಶೈವದ ಪರಿಕ್ರಮವೇ ಹೊರತು ಶರಣಧರ್ಮದ ಪರಿಕ್ರಮವಲ್ಲ. ಇನ್ನೊಂದು ಸೋಜಿಗದ ಸಂಗತಿ ಎಂದರೆ ಮೊಗ್ಗೆಯ ಮಾಯಿದೇವರ ಮೂಲ ಸಂಸ್ಕೃತ ಶ್ಲೋಕದಲ್ಲಿ ಶಿವ, ಶೈವ ಎಂದು ಇರುವಲ್ಲಿ, ಕೆಳಗೆ ಕನ್ನಡದಲ್ಲಿ ವ್ಯಾಖ್ಯಾನ ಬರೆದು ವ್ಯಾಖ್ಯಾನದಲ್ಲಿ ಕೃತಕವಾಗಿ ವೀರಶೈವ ಪದವನ್ನು ಸೇರಿಸಲಾಗಿದೆ. ಪಂಚಪೀಠದ ಆಚಾರ್ಯರುಗಳು ಅಷ್ಟೇ ಅಲ್ಲ ವಿರಕ್ತರು ಸಹ ಲಿಂಗಾಯತ ಧರ್ಮಕ್ಕೆ ಪ್ರಾಚೀನತೆ ಕಲ್ಪಿಸಲು ವೀರಶೈವವನ್ನು ಎಳೆದು ತಂದಿದ್ದಾರೆ. ಲಿಂಗಾಯತರನ್ನು ವೀರಶೈವರೆಂದು ಗುರುತಿಸಿಕೊಳ್ಳಲು ಹರ(ಯಮ)ಸಾಹಸವನ್ನೇ ಮಾಡಿದ್ದಾರೆ. ಶಂಕರಾಚಾರ್ಯರದು ಬ್ರಹ್ಮಾದ್ವೈತವಾದರೆ ವೀರಶೈವರದು ಶಿವಾದ್ವೈತ ಎಂದು ಗುರುತಿಸಿಕೊಳ್ಳುತ್ತಾರೆ. ಇದನ್ನು ಶಕ್ತಿವಿಶಿಷ್ಟಾದ್ವೈತ ಎನ್ನುತ್ತಾರೆ.

1. ಅದ್ವೈತ ಸಿದ್ಧಾಂತವನ್ನು ಬಸವಾದಿ ಪರಂಪರೆಯವರು ಅತ್ತ ಇರಲಿ ಸ್ವತಃ ಶೈವಾಗಮಗಳು ಅಥವಾ ಶೈವ ಪರಂಪರೆಯವರು ಸಹ ಒಪ್ಪುವುದಿಲ್ಲ. ವೇದಾಂತಿಗಳು (ಪರ) ಬ್ರಹ್ಮ ಎಂದು ಯಾವ ಪರವಸ್ತುವನ್ನು ಸಂಬೋಧಿಸುವರೋ ಅದನ್ನೇ ಆಗಮಿಕರು (ಪರ)ಶಿವ ಎನ್ನುವರು. ಆದ್ದರಿಂದ ಬ್ರಹ್ಮಾದ್ವೈತ-ಶಿವಾದ್ವೈತ ಪರಿಕಲ್ಪನೆಯಲ್ಲಿ ಬೇರೆಯಾಗವು. ಶೈವ ಪರಂಪರೆಯ ಎಲ್ಲ ಶಾಖೆಗಳು

ಜೀವ-ಶಿವ, ಪಶು-ಪತಿ-ಪಾಶ ಎಂಬ ವ್ಯತ್ಯಾಸ ಒಪ್ಪುವುದರಿಂದಲೇ ಶೈವ ಪರಂಪರೆ ಭಕ್ತಿ ಪ್ರಧಾನ ಎನಿಸಿದೆ. ವೇದಾಂತ, ಅದ್ವೈತ ಸಿದ್ಧಾಂತದ ಪ್ರಭಾವಕ್ಕೆ ಒಳಗಾದವರು ಮಾತ್ರ ವಚನ ಸಾಹಿತ್ಯದಲ್ಲೂ ಅದ್ವೈತ ಸಿದ್ಧಾಂತ ಹುಡುಕಲು ಹೋಗುವರು. ಬಹುಪಾಲು ಜನರಿಗೆ, ಸಾಹಿತಿಗಳಿಗೆ ಸಹಿತ ಅದ್ವೈತ ಸಿದ್ಧಾಂತ ಮತ್ತು ಅದ್ವೈತಾನುಭವದ ವ್ಯತ್ಯಾಸ ಗೊತ್ತಿರದೆ ವಚನ ಸಾಹಿತ್ಯವೂ ಅದ್ವೈತವನ್ನು ಹೇಳುತ್ತದೆ ಎಂದು ಬ್ರೇಕ್ ಇಲ್ಲದೆ ಗಾಡಿ ಬಿಡುತ್ತಾರೆ. ಶ್ರೀ ವೈ.ನಾಗೇಶ್ ಶಾಸ್ತ್ರಿಗಳು ಅದನ್ನೇ ಮಾಡಿದ್ದಾರೆ.

2. ಮಗ್ಗೆಯ ಮಾಯಿದೇವರು ತಮ್ಮ ಪಠ್ಯದಲ್ಲಿ ಶ್ರೀವೀರವ್ರತ ಎಂದು ಬಳಸಿದ್ದಾರೆ(ಪುಟ-6) ಅದಕ್ಕೆ ಕೊಟ್ಟಿರುವ ಕನ್ನಡ ವ್ಯಾಖ್ಯಾನದಲ್ಲಿ ಶ್ರೀ ಶಾಸ್ತ್ರಿಗಳು ''ವೀರಶೈವ ವ್ರತ'' ಎಂದು ಬರೆಯುತ್ತಾರೆ (ದುರ್)ಉದ್ದೇಶ ಪೂರ್ವಕವಾಗಿ ತಿರುಚಿದ್ದಾರೋ ಅಜ್ಞಾನದಿಂದ ತಿರುಚಿದ್ದಾರೋ ತಿಳಿಯದು ವೀರವ್ರತ ಬೇರೆ, ವೀರಶೈವ ವ್ರತ ಬೇರೆ! ಕೆಲವರು ಕಟ್ಟುನಿಟ್ಟಾದ ಶಿವ ಭಕ್ತಿ ಮಾಡಲು ವೀರವ್ರತ ಸ್ವೀಕರಿಸುತ್ತಿದ್ದರು. ಉದಾಹರಣೆಗೆ, (ಸ್ಥಾವರ) ಲಿಂಗದರ್ಶನವಿಲ್ಲದೆ ನೀರೂ ಕುಡಿಯುವುದಿಲ್ಲ ಎಂಬುದು ಒಂದು ನಿಯಮ. ಪ್ರಾಣ ಹೋಗುತ್ತಿದ್ದರೂ ಅವರು ಲಿಂಗದ ಗುಡಿ ಸಿಗದೆ ಇದ್ದರೆ ಆಹಾರ-ನೀರು ಸ್ವೀಕರಿಸುತ್ತಿರಲಿಲ್ಲ. ಧರ್ಮಪಿತ ಬಸವಣ್ಣನವರ ಒಂದು ವಚನದಲ್ಲಿ 'ವೀರವ್ರತಿ' ಎಂಬ ಪದ ಬಳಕೆಯಾಗಿದೆ.

3. ''ಜಯಂತಿ ಪರಮ ಶೈವಃ'' ಎಂಬ ಪದಪುಂಜವು 23ನೇ ಶ್ಲೋಕದಲ್ಲಿ ಬಳಕೆಯಾಗಿದೆ. ಆತನು ''ಪರಮಶೈವ.'' ಆದರೆ ಟೀಕಾಕಾರರು ಕನ್ನಡದಲ್ಲಿ ಪರಮ ವೀರಶೈವನಾದ ಮಾಯಿದೇವ ಎನ್ನುತ್ತಾರೆ. ಶ್ಲೋಕ 27-28ರಲ್ಲಿ ''ಶಿವ ಸಿದ್ಧಾಂತ ತಂತ್ರಂ'' ಎಂದು ಮಾಯಿದೇವರು ಬಳಸುತ್ತಾರೆ. ನಾಗೇಶ ಶಾಸ್ತ್ರಿಗಳು ವೀರಶೈವ ಸಿದ್ಧಾಂತ ಎಂದು ವ್ಯಾಖ್ಯಾನದಲ್ಲಿ ಬಳಸುತ್ತಾರೆ ಅಂದರೆ ಮಾಯಿದೇವರು ಶಿವಾನುಭವ ಸೂತ್ರಂ ರಚಿಸುವಾಗ ದೀಕ್ಷೆಹೊಂದಿ ಲಿಂಗಾಯತನಾಗುವುದಿರಲಿ, ವೀರಶೈವನೂ ಆಗಿರದೆ ಶಿವಸಿದ್ಧಾಂತ ತಂತ್ರಾನುಸಾರಿಯಾದ ಶುದ್ಧ ಶೈವರಾಗಿದ್ದರು ಎಂಬ ಭಾವ ಉಂಟಾಗುತ್ತದೆ.

ಲಿಂಗಾಯತ ಧರ್ಮೀಯ ಶಾಸ್ತ್ರಿ ಪಂಡಿತರು ಸುಮ್ಮಸುಮ್ಮನೆ ತಮ್ಮನ್ನು ವೀರಶೈವರೆಂದು ಕರೆದುಕೊಂಡು ಬಹಳ ಗೊಂದಲಕ್ಕೆ ಒಳಗಾಗಿದ್ದಾರೆ. ಅಭಿಮನ್ಯು ಚಕ್ರವ್ಯೂಹದೊಳಗೆ ಹೋಗಿ ನಂತರ ಬರಲಾರದೆ ಹತನಾದಂತಹ ಪರಿಸ್ಥಿತಿ ಈ ವೀರಶೈವವಾದಿಗಳದ್ದಾಗಿದೆ. ವಚನ ಸಾಹಿತ್ಯ ದಿಕ್ಸೂಚಿಯಾಗಿ ಸಿಕ್ಕಿರದಿದ್ದರೂ ಸುಮಾರು 150-200 ವರ್ಷಗಳ ಹಿಂದೆ ಲಿಂಗಾಯತರಲ್ಲಿ ಅವೈದಿಕ ಆಚರಣೆ ರೂಢಿಯಲ್ಲಿ ಬಂದಿದ್ದವು. ಇವರು ಪಂಚಸೂತಕ ಆಚರಿಸುತ್ತಿರಲಿಲ್ಲ; ವಿಧವಾ ವಿವಾಹಕ್ಕೆ ಅವಕಾಶವಿತ್ತು. ಶಾಸ್ತ್ರಿ ಪಂಡಿತರು ಕೃತಕವಾಗಿ ವೀರಶೈವವನ್ನು ತಂದು ಸೇರಿಸಿದ್ದಲ್ಲದೆ ವೀರಶೈವವು ಅವೈದಿಕವಲ್ಲ. ಆಗಮೋಕ್ತ ಎಂದು ವೀರಶೈವರೇ ಅಲ್ಲದ ಲಿಂಗಾಯತರ ತಲೆಗೆ ತುಂಬ ತೊಡಗಿ ಗೊಂದಲ ಉಂಟುಮಾಡಿದ್ದಾರೆ. ಅಂಥ ಸನ್ನಿವೇಶದಲ್ಲೇ ಕಷ್ಟಪಟ್ಟು ವೀರಶೈವ ಪದವನ್ನು ಮಗ್ಗೆಯ ಮಾಯಿದೇವರ ಶಿವಾನುಭವ ಸೂತ್ರಂ ಗ್ರಂಥದ ವ್ಯಾಖ್ಯಾನದಲ್ಲಿ ತೂರಿಸಿದ್ದಾರೆ.

ಮಗ್ಗೆಯ ಮಾಯಿದೇವರ ಷಟ್‌ಸ್ಥಲ

ಮಗ್ಗೆಯ ಮಾಯಿದೇವರು 1450ನೆಯ ಕಾಲಮಾನದವರು. ಶಿವಾನುಭವ ಸೂತ್ರಂ ಬರೆಯುವ ಕಾಲಕ್ಕೆ ಬಸವ ಧರ್ಮದ ಪ್ರಭಾವಕ್ಕೆ ನೇರವಾಗಿ ಒಳಗಾಗಿಲ್ಲವಾದರೂ ಅವರ ಕಿವಿಯ ಮೇಲೆ ವಚನ ಸಾಹಿತ್ಯದ ಪ್ರಕ್ರಿಯೆ ಪದಗಳು ಬಿದ್ದಿರಲೇ ಬೇಕು. ಹೀಗಾಗಿ ಷಟಸ್ಥಲದ ಪ್ರಸ್ತಾಪ ಮಾಡುತ್ತಾರಾದರೂ ಪರಿಕಲ್ಪನೆಗಳು ಬಹಳ ನಿರ್ಜೀವಗೊಂಡಿವೆ. ವಚನ ಸಾಹಿತ್ಯದಲ್ಲಿ ಬರುವ ಷಟಸ್ಥಲಕ್ಕೂ ಇಲ್ಲಿಯದಕ್ಕೂ ಹೋಲಿಕೆಯೇ ಇಲ್ಲ. 8 ಅಧಿಃಕರಣಗಳಿಂದ ಕೂಡಿದ ಈ ಕೃತಿಯಲ್ಲಿ 1.ಮಾಯಿದೇವರ ವಂಶಪಾರಂಪರ್ಯ ಕ್ರಮ. 2.ಸ್ಥಲ ನಿರ್ದೇಶ 3. ಲಿಂಗಸ್ಥಲ ನಿರೂಪಣ

4. ಅಂಗಸ್ಥಲ ನಿರೂಪಣ 5. ಲಿಂಗಾಂಗ ಸಂಯೋಗ ವಿಧಿ 6. ಸರ್ವಾಂಗಲಿಂಗ ಸಾಹಿತ್ಯ, 7. ಅರ್ಪಣ ಸದ್ಭಾವ 8.ಕ್ರಿಯಾ ವಿಶ್ರಾಂತಿ ಎಂದು ಪ್ರಸ್ತಾಪವಾಗುತ್ತವೆ.

ಈ ತತ್ತ್ವಗಳನ್ನು ಅಳವಡಿಸಿಕೊಂಡ ಸಾಧಕನನ್ನು ಮಾಯಿದೇವರು ಶಿವಾಚಾರ್ಯ ಎಂದಿದ್ದಾರೆಯೇ ವಿನಾ 'ಶರಣ' ಎಂದು ಕರೆದಿಲ್ಲ. ವಚನ ವಾಙ್ಮಯದ ಜೀವಾಳವೇ 'ಶರಣ' ಎಂಬುದನ್ನು ನಾವೆಲ್ಲ ಅರಿತಿದ್ದೇವೆ. ಅಧ್ಯಾಯ 2, ಶ್ಲೋಕ 1-2 ರಲ್ಲಿ ದೇವದೇವನಾದ ಯಾವ ಶಿವನಿಂದ ಹೇಳಲ್ಪಟ್ಟಿದೋ ಆ ವಿಷಯವನ್ನು ಇಲ್ಲಿ ಹೇಳುತ್ತೇನೆ ಎನ್ನುತ್ತಾನೆ ಮಾಯಿದೇವ. ಆದೆ ವಚನ ವಾಙ್ಮಯದಲ್ಲಿ ಬರುವ ಷಟಸ್ಥಲ "ಸಂಗನ ಬಸವಣ್ಣನಿಂದ ಬಂದ ಬೆಳೆ" ಎನ್ನುತ್ತಾರೆ ಶರಣರು.

ಮಾಯಿದೇವರು ಶಕ್ತಿಯು ಪ್ರವೃತ್ತಿಪರ, ಭಕ್ತಿಯು ನಿವೃತ್ತಿಪರ ಎಂದು ಹೇಳುತ್ತ ಭಕ್ತಿಯಿಂದ ಪ್ರಪಂಚ ಲಯವೂ ಆಗುವುದು ಎನ್ನುತ್ತಾರೆ. ಭಕ್ತಿಯು ವ್ಯಕ್ತಿಗತ, ಇದರಿಂದ ವೈಯಕ್ತಿಕವಾಗಿ ಬಿಡುಗಡೆ ಆದೀತೇ ವಿನಾ ಪ್ರಪಂಚ ಎಂಬ ವಸ್ತುನಿಷ್ಠ ತತ್ತ್ವವು ನಾಶವಾಗುವುದಿಲ್ಲ. ಇಂಥ ವಿವರಣೆಗಳಿಂದಲೇ ವಿದೇಶಿ ಸಂಶೋಧಕರಿಗೆ ಸಂದೇಶ-ಗೊಂದಲ ಉಂಟಾಗುವುದು.

ಮಾಯಿದೇವರು ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗ ಕುರಿತು ಪ್ರಸ್ತಾಪಿಸುತ್ತಾರೆ. ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾಲಿಂಗ ಎಂಬ ಷಡ್‌ವಿಧ ಲಿಂಗಗಳ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ಆದರೆ ಇವು ಯಾಂತ್ರಿಕವಾಗಿ ಉಲ್ಲೇಖಿಸಲ್ಪಟ್ಟಿವೆಯೇ ಹೊರತು ವಚನ ಶಾಸ್ತ್ರದಲ್ಲಿ ಕಾಣಬರುವ ಜೀವಂತಿಕೆ ಇಲ್ಲಿಲ್ಲ.

ಕೃತಿಯ ಆರಂಭದಲ್ಲಿ ಮಾಯಿದೇವರು ಈ ಎಲ್ಲ ಶಬ್ದಗಳು ಬಹಳ ಪುರಾತನವೆಂದು. ಶಿವೋಕ್ತವೆಂದು, ವೇದಾಗಮಗಳಲ್ಲಿ ಹೇಳಲ್ಪಟ್ಟಿರುವುದು ಎಂದು ಹೇಳಿ, ಪುರಾತನತೆಯ ಮುದ್ರೆ ಒತ್ತಲು ಯತ್ನಿಸಿದ್ದಾರೆ. ಆದರೆ ನಂತರ ಬರೆದ ಶತಕತ್ರಯದಲ್ಲಿ ಬಸವ ಪುರಾತರಾಚರಿಸಿ ತೋರಿದ ಮಾರ್ಗ ಎಂದು ಸ್ಪಷ್ಟಪಡಿಸುತ್ತಾರೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲಗಳ ವಿಚಾರವನ್ನು ಅಷ್ಟೇ ಅಸ್ಪಷ್ಟವಾಗಿ ಹೇಳಿರುವುದಲ್ಲದೆ ಭಕ್ತಸ್ಥಲದಿಂದ ಆರಂಭಿಸಿ ಐಕ್ಯಕ್ಕೆ ಹೋಗುವ ಬದಲು ಐಕ್ಯದಿಂದ ಭಕ್ತಸ್ಥಲಕ್ಕೆ ಬರುತ್ತಾರೆ.

ಮಾಯಿದೇವರು ಮಹಾಶೈವ, ಪರಮಶೈವ ಪದಗಳನ್ನು ಬಳಸುತ್ತಾರೆ (ಶ್ಲೋ 37-39) ಆಗಮಗಳು, ಅದರಲ್ಲಿ ಪ್ರತಿಪಾದಿತವಾಗುವ ಶೈವ ಮಾರ್ಗವು ವೇದಾಂತದಂತೆ ಶುಷ್ಕಜ್ಞಾನವಾಗಿ ಉಳಿಯದೆ ಭಕ್ತಿಪ್ರಧಾನವೂ ಆಗಿರುವುದೆಂಬುದು ಗಮನಾರ್ಹ. ಹೀಗಾಗಿ ಶೈವ ಪಂಥಗಳಲ್ಲಿ ದೀಕ್ಷೆ, ಶಕ್ತಿಪಾತಕ್ರಿಯೆ ಮುಂತಾದವು ಬಹಳ ಮಹತ್ವದ ಸ್ಥಾನವನ್ನು ಪಡೆಯುತ್ತವೆ. ವೇಧಾ, ಮಂತ್ರ, ಕ್ರಿಯಾ ಎಂಬ ತ್ರಿವಿಧ ದೀಕ್ಷೆಗಳು ಶೈವ ಮಾರ್ಗದಲ್ಲಿ ಬಹುಮುಖ್ಯ. ಶೈವ ಮಾರ್ಗದ ಉಪದೇಶದಲ್ಲಿ ಗುರುವು ಲಿಂಗವನ್ನು ಕ್ರಿಯಾದೀಕ್ಷೆಯಿಂದ ಕೊಡುತ್ತಾನೆ. ಆದರೆ ಅದು ಯಾವ ಲಿಂಗ? ಅದನ್ನು ಮಾಯಿದೇವರು ಸ್ಪಷ್ಟಪಡಿಸುವುದಿಲ್ಲ. ಮೂಲಶ್ಲೋಕದಲ್ಲಿ ಲಿಂಗಂ ಎಂದಿರುವಲ್ಲಿ ಕನ್ನಡ ವ್ಯಾಖ್ಯಾನದಲ್ಲಿ ಶ್ರೀ ನಾಗೇಶ ಶಾಸ್ತ್ರಿಗಳು ಇಷ್ಟಲಿಂಗ ಎಂದು ಬರೆಯುತ್ತಾರೆ.

ಒಂದು ವೇಳೆ ಮಾಯಿದೇವರು ಶತಕ ತ್ರಯವನ್ನು ಬರೆದು ಅದರಲ್ಲಿ ಶ್ರೀಗುರು ಬಸವಣ್ಣನವರನ್ನು, ಶರಣರನ್ನೂ ಸ್ತೋತ್ರ ಮಾಡದೆ ಇದ್ದರೆ, ಶಿವಾನುಭವ ಸೂತ್ರಂ ಪುಸ್ತಕ ಬಸವ ಪೂರ್ವದ್ದು ಇದರಲ್ಲಿ ಷಟಸ್ಥಲವಿದೆ ಎಂದು ವೀರಶೈವವಾದಿ ಪಂಡಿತರು ಸಾಧಿಸಲು ಪ್ರಯತ್ನಿಸುತ್ತಿದ್ದರು. ಮಾಯಿದೇವರ ಕಾಲನಿರ್ಣಯವೂ ಆಗಿರುವುದರಿಂದ ಸುಳ್ಳು ಹೇಳಲು ಸಾಧ್ಯವಾಗುತ್ತಿಲ್ಲ. ಆದರೆ ಮಾಯಿದೇವರ ಸಂಸ್ಕೃತ ಶ್ಲೋಕಗಳಲ್ಲಿ 'ಲಿಂಗ' ಇದ್ದರೆ ವ್ಯಾಖ್ಯಾನದಲ್ಲಿ ಇಷ್ಟಲಿಂಗ ಎಂದು ಬರೆಯುವ ಪ್ರಯತ್ನವನ್ನು ಶ್ರೀನಾಗೇಶ ಶಾಸ್ತ್ರಿಗಳು ಮಾಡಿದ್ದಾರೆ. ಮನೆಯಲ್ಲಿ ಸಮೃದ್ಧವಾಗಿ ಹೈನವಿದ್ದಾಗ ಹಾಲು ಕಾಯಿಸಿ ಬೆಣ್ಣೆ- ತುಪ್ಪ ಮಾಡಿಕೊಳ್ಳುವ ಬದಲು ಊರೆಲ್ಲ ತಿರುಗಿ ಡಾಲ್ಡಾ ತಂದಂತೆ ವೀರಶೈವವಾದಿ ಶಾಸ್ತ್ರಿ ಪಂಡಿತರು ವಚನ ಸಾಹಿತ್ಯದಂತಹ ಧರ್ಮ ಸಂಹಿತೆ ಬಿಟ್ಟು, ಸಂಸ್ಕೃತ ಗ್ರಂಥಗಳ ಆಧಾರ ಹುಡುಕಲು, ಸನಾತನತೆ ಸ್ಥಾಪಿಸಲು ಬಹಳ

ಹೆಣಗುವುದನ್ನು ಕಂಡರೆ ನಗುವೂ ಬರುತ್ತದೆ, ದುಃಖವೂ ಆಗುತ್ತದೆ.

ಆದ್ದರಿಂದ ಎಲ್ಲ ಗೊಂದಲ ಪರಿಹಾರವಾಗಲು ಇರುವ ಮಾರ್ಗವೆಂದರೆ ವಚನ ಸಾಹಿತ್ಯದ ಅಧ್ಯಯನ ಪಾರಾಯಣ, ಚಿಂತನ ಮಾತ್ರ ★

(ಇಂಥ ಲೇಖನ ಬರೆಯಲು ನನಗೆ ಸ್ವಭಾವತಃ ಆಸಕ್ತಿ ಇಲ್ಲ. ಆದರೆ ಅನಿವಾರ್ಯವಾಗಿ ವೀರಶೈವವಾದಿಗಳ ಟೊಳ್ಳುತನ ಬಯಲು ಮಾಡಲು ಬರೆಯಬೇಕಾಗುತ್ತಿದೆ. ಇದೇ ದೃಷ್ಟಿಕೋನದಿಂದಲೇ, ನಮ್ಮ ಧರ್ಮ-ಸಮಾಜಗಳಿಗೆ ಯಾವುದೇ ರೀತಿ ಸಂಬಂಧಿಸಿರದ ಸಿದ್ಧಾಂತ ಶಿಖಾಮಣಿ ಕುರಿತು ಸಹ ಬರೆಯಲು ನನಗೆ ಆಸಕ್ತಿ ಇಲ್ಲ ;ಆದರೆ ಕೆಲವು ಬಸವ ತತ್ತ್ವಾಭಿಮಾನಿಗಳಿಂದ ಆ ಕೃತಿಯ ಸಿದ್ಧಾಂತ ಮಾಡಬೇಕೆಂದು ಒತ್ತಡ ಬರುತ್ತಿದೆ. ನೋಡೋಣ.)

-ಮಾತಾಜಿ

ಅಪೂರ್ವ ಔದಾರ್ಯ

ಮಹಾರಾಷ್ಟ್ರದ ಗಡಹಿಂಗ್ಲಾಜದಲ್ಲಿ ದಿ.22-4-2005 ರಂದು ಮದುವೆ ಕಾರ್ಯಕ್ರಮ. ಶರಣ.ಮಲ್ಲಪ್ಪ ರಾಮಪ್ಪ ನೇವಡೆಯವರ ಮಗ ಉದಯನ ಮದುವೆ. ರಾಷ್ಟ್ರೀಯ ಬಸವ ದಳದ ಸಂಘಟನೆಯಲ್ಲು ಶರಣ.ನೇವಡೆಯವರ ಪಾತ್ರ ಹಿರಿದು. ನಮ್ಮ ಶರಣ ಬಂಧುಗಳ ಮದುವೆ ಎಂದರೆ ವೈಭವಯುತವಾದ ಒಂದು ಖಾಸಗಿ ಸಮಾರಂಭವಲ್ಲ; ಒಂದು ಚಿಕ್ಕ ಶರಣ ಸಮ್ಮಿಳನ. ಮಹಾರಾಷ್ಟ್ರ ಮತ್ತು ಬೆಳಗಾಂ ಜಿಲ್ಲೆಯ ಶರಣರಿಗೆ, ರಾಷ್ಟ್ರೀಯ ಬಸವ ದಳದವರಿಗೆ ಪರಸ್ಪರ ಭೇಟಿಯಾಗಲು ಒಂದು ಉತ್ತಮ ಅವಕಾಶ ಎಂದು ನಾನು ಒಪ್ಪಿಕೊಂಡಿದ್ದೆ.

ವಿವಾಹವು ಸಾಂಗವಾಗಿ ನೆರವೇರಿತು. ಪ್ರಸಾದ ಪೂರೈಸಿದೆವು. ಭೇಟಿಯಾಗ ಬಯಸಿದ ಬಸವ ದಳಗಳವರೂ ಭೇಟಿಯಾದರು. ನಾವು ಹೊರಟು ನಿಂತೆವು. ನೇವಡೆಯವರು ಬಿಡಲೇ ಇಲ್ಲ. ಮದುವೆಯಲ್ಲಿ ಬಂದ ಆಯಿರಿ(ಕೊಡುಗೆ)ಗಳ ಕವರ್ ಬಿಚ್ಚಿ ಪಟ್ಟಿ ಮಾಡಿ, ಜೋಡಿಸುತ್ತಿದ್ದರು. "ಇದೊಳ್ಳೆ ತಾಪತ್ರಯವಾಯಿತಲ್ಲ...." ಎಂದುಕೊಂಡೆವು. ಶರಣ.ಕೃಷ್ಣಪ್ಪ ಮುಸಳೆ, ನೀಲಜಿ ಗ್ರಾಮದ ರಾಷ್ಟ್ರೀಯ ಬಸವ ದಳದವರು ಎಲ್ಲ ಬೇಗನೆ ಎಣಿಸಿ ಲೆಕ್ಕ ಬರೆದರು. 'ಇವರು ದುಡ್ಡು ಎಣಿಸಲು ನಮ್ಮ ಸಮಯ ಏಕೆ ಹಾಳುಮಾಡುತ್ತಿದ್ದಾರೆ? ಎಂದು ಅಂದುಕೊಳ್ಳುತ್ತಿದ್ದೆ. ನೇವಡೆ ಮಲ್ಲಪ್ಪ ಶರಣರು ಹೇಳಿದರು. " ಆಹ್ವಾನ ಪತ್ರಿಕೆಯಲ್ಲಿ ಯಾರೂ ಆಯಿರಿ ತರಬಾರದು ಎಂದು ಮುದ್ರಿಸಲು ಆಲೋಚಿಸಿದ್ದೆ. ಆದರೆ ನೀಲಜಿ ಗ್ರಾಮದ ಬಸವ ದಳದ ಹುಡುಗರು, "ನೀವು ತನ್ನಿ ಎಂದು ಜನರಿಗೆ ಯಾರೂ ಹೇಳುವುದಿಲ್ಲ; ತರಬೇಡಿ ಎಂದು ಹೇಳುವುದೇಕೆ ? ಅದೇನು ಕೊಡುವರೋ ಕೊಡಲಿ ಅದನ್ನು ಬಸವ ಧರ್ಮಪೀಠಕ್ಕೆ ಕಾಣಿಕೆಯಾಗಿ ಸಲ್ಲಿಸಿರಿ. " ಎಂದು. ನನಗೂ ಇದು ಸರಿ ಎನ್ನಿಸಿತು." ಎಂದು ಹೇಳಿ, ನನಗೆ ಇಪ್ಪತ್ತು ಸಾವಿರ ರೂ ಆಯಿರಿ ಬಂದುದು, ತಮ್ಮ ವೈಯಕ್ತಿಕ ಕಾಣಿಕೆ 25,000 ಕೊಟ್ಟು ನಮಸ್ಕರಿಸಿದರು. ನನಗಂತೂ ಆಶ್ಚರ್ಯ-ಆನಂದ ಉಂಟಾದವು. ಕೆಲವೊಮ್ಮೆ ನಮ್ಮ ಡೀಸೈಲ್ ಖರ್ಚು ಆದಷ್ಟು ಕೊಡದೆ ಇರುವ ಉದಾರಿ(?) ಭಕ್ತರೂ ಇರುತ್ತಾರೆ. ಆಗ ಕೃಷ್ಣಪ್ಪಣ್ಣ ಅವರು "ನೀವು ಏತಕ್ಕಾದರೂ ಇವರ ಹೆಸರು ಹಾಕಬೇಕು" ಎಂದರು. ಆಗ ಮಲ್ಲಪ್ಪಣ್ಣ " ಬೇಡವೇ ಬೇಡ, ಜನರು ಕೊಟ್ಟ ಆಯಿರಿ. ಜೊತೆಗೆ ಗುರು ಕಾಣಿಕೆ. ಅದಕ್ಕೆ ಹೆಸರಿನ್ನೇಕೆ ?" ಎಂದು ನಿರಾಕರಿಸಿದರಷ್ಟೇ ಅಲ್ಲ, "ದಯವಿಟ್ಟು ಈ ಕೋಣೆಯಲ್ಲಿರುವ ಎಣಿಸಿರುವ ನಾಲ್ಕಾರು ಜನಕ್ಕೆ ಬಿಟ್ಟು ಯಾರಿಗೂ ಈ ವಿಷಯ ತಿಳಿಸಬೇಡಿರಿ. " ಎಂದರು.

ಅವರ ಬೇಡಿಕೆಯ ಎಲ್ಲೆ ದಾಟಿ ಈ ವಿಷಯ ಕಲ್ಯಾಣ ಕಿರಣದಲ್ಲಿ ಪ್ರಕಟಿಸುತ್ತಿದ್ದೇನೆ. ಶರಣ ಮಲ್ಲಪ್ಪಣ್ಣ ಮೌನ ದಾನಿ. ಅವರ ಧರ್ಮಶ್ರದ್ಧೆ, ನಿರಹಂಭಾವ, ಔದಾರ್ಯ ಅಭಿನಂದನೀಯವಿರುವಾಗ ಮುಚ್ಚಿಡಲು ಮನಸ್ಸಾದರೂ ಹೇಗೆ ಬಂದೀತು ?! ಅವರ ಆದರ್ಶವು ಅಪರೂಪದ್ದು, ಅನುಕರಣೀಯವಲ್ಲವೆ ?.

-ಮಾತಾಜಿ

ಲಿಂಗಾಯತ ಧರ್ಮೀಯರಿಗೆ ನಿಜಾಂಶಗಳ ಅರಿವಿರಲಿ

ಲಿಂಗಾಯತ ಧರ್ಮದಲ್ಲಿ ಗುರುಗಳು
ಎಷ್ಟಾದರೂ ಇರಲಿ,
ವಿಶ್ವಗುರು ಬಸವಣ್ಣನವರೇ ಧರ್ಮಪಿತರು
ಎಂಬ ಅರಿವು ಇರಲಿ.
ಜಗದ್ಗುರುಗಳು ಜಗತ್ತಿನಲ್ಲಿ
ಎಷ್ಟಾದರೂ ಇರಲಿ,
ಬಸವಣ್ಣನವರೇ ವಿಶ್ವಗುರು
ಎಂಬ ಅಭಿಮಾನವಿರಲಿ.
ಧರ್ಮಶಾಸ್ತ್ರಗಳು ವಿಶ್ವದಲ್ಲಿ
ಎಷ್ಟಾದರೂ ಇರಲಿ,
ವಚನ ಸಾಹಿತ್ಯವೇ ಪರಮಶ್ರೇಷ್ಠ ಧರ್ಮಸೂತ್ರ
ಎಂಬ ಅರಿವು ಇರಲಿ.
ಜಗತ್ತಿನಾದ್ಯಂತ ತೀರ್ಥಕ್ಷೇತ್ರಗಳು
ಎಷ್ಟಾದರೂ ಇರಲಿ,
ಕೂಡಲಸಂಗಮ ಮತ್ತು ಬಸವಕಲ್ಯಾಣಗಳೇ
ಲಿಂಗದೇವನ ಶರಣರ ನಿಜದಿವ್ಯಧಾಮಗಳು
ಎಂಬ ಭಾವನೆ ಹೃದಯದಲ್ಲಿ ತುಂಬಿರಲಿ.
ದೇವಾದಿ ದೇವತೆಗಳು ಪ್ರಪಂಚದಲ್ಲಿ
ಎಷ್ಟಾದರೂ ಇರಲಿ,
ಲಿಂಗದೇವರೇ ಸಕಲ ಜೀವಾತ್ಮರಿಗೆ ನಿಜವಾದ
ದೇವರು ಎಂಬ ಸಿದ್ಧಾಂತದಲ್ಲಿ ನಂಬಿಗೆ ಇರಲಿ
ಧರ್ಮವನ್ನು ಕುರಿತು ಹೇಳುವವರು ಜಗತ್ತಿನಲ್ಲಿ
ಎಷ್ಟಾದರೂ ಇರಲಿ,
ಬಸವಾದಿ ಶರಣರೇ ನಮಗೆ ಆದರ್ಶಪ್ರಾಯರು
ಎಂಬ ನಿಜ ಧರ್ಮಪ್ರಜ್ಞೆ ಸದಾ ಜಾಗೃತವಾಗಿರಲಿ.
ಜಾತಿಮತ-ಪಂಥಗಳು ಲೋಕದಲ್ಲಿ
ಎಷ್ಟಾದರೂ ಇರಲಿ,
ಲಿಂಗಾಯತ ಮಾತ್ರ ಏಕೈಕ ವಿಶ್ವಧರ್ಮ
ಎಂಬ ನಿಜಜ್ಞಾನವಿರಲಿ.
ಹೊಗಳುವವರು ಮತ್ತು ನಿಂದಿಸುವವರು
ಲೋಕದಲ್ಲಿ ಎಷ್ಟಾದರೂ ಇರಲಿ,
ಅವರಿಬ್ಬರೂ ಬಸವ ಭಕ್ತರ ಪರಮ ಬಂಧುಗಳು
ಎಂಬ ತಿಳುವಳಿಕೆ ಇರಲಿ.

ಆಂತರಿಕ ಭಿನ್ನಾಭಿಪ್ರಾಯಗಳು
ಎಷ್ಟಾದರೂ ಇರಲಿ,
"ಲಿಂಗಾಯತರೆಲ್ಲರೂ ಒಂದೇ" ಎಂಬ
ವಿಶಾಲ ಭಾವನೆ ಇರಲಿ.
ಪೂಜೆ-ಪ್ರಾರ್ಥನೆ-ಧ್ಯಾನಗಳೆಂಬ
ಇತ್ಯಾದಿ ಆಚರಣೆಗಳು, ಎಷ್ಟಾದರೂ
ಇರಲಿ,
ಕಾಯಕ ಮತ್ತು ದಾಸೋಹಗಳೇ ಪ್ರಮುಖ
ಕರ್ತವ್ಯಗಳೆಂಬ ಸುಜ್ಞಾನವಿರಲಿ.
ಬಸವ ಧರ್ಮದ ಪ್ರವಚನಕಾರರು
ಎಷ್ಟಾದರೂ ಇರಲಿ,
ಲಿಂಗಾನಂದ ಅಪ್ಪಾಜಿಯವರೇ
"ಪ್ರವಚನ ಪಿತಾಮಹರು" ಎಂಬ
ಮೂಲ ಜ್ಞಾನವಿರಲಿ.
ಬಸವ ಧರ್ಮದ ಗುರುಗಳು ಜಗತ್ತಿನಲ್ಲಿ
ಎಷ್ಟಾದರೂ ಇರಲಿ,
ಜಗದ್ಗುರು ಮಾತೆ ಮಹಾದೇವಿಯವರೇ
ಬಸವ ಧರ್ಮದ ಪ್ರಮುಖ ರೂವಾರಿಗಳು
ಎಂಬ ಸದ್ಭಾವನೆ ಇರಲಿ.
ಬಸವೋತ್ತರ ಯುಗದ ಶರಣರು
ಜಗತ್ತಿನಲ್ಲಿ ಎಷ್ಟಾದರೂ ಇರಲಿ,
ರಾಷ್ಟ್ರೀಯ ಬಸವ ದಳವೇ ನಿಜ
ಶರಣರ ಬಳಗ ಎಂಬ ಅಭಿಮಾನವಿರಲಿ
ಸೃಷ್ಟಿಕರ್ತ ಲಿಂಗದೇವರಿಗೆ ಜಯವಾಗಲಿ
ಶ್ರೀ ಗುರು ಬಸವಣ್ಣನವರಿಗೆ ಜಯವಾಗಲಿ
ರಾಷ್ಟ್ರೀಯ ಬಸವ ದಳಕ್ಕೆ ಜಯವಾಗಲಿ
ಸಕಲ ಬಸವ ಭಕ್ತರಿಗೆ ಜಯವಾಗಲಿ

-ವಚನ ಸಂಪದಾ ಇನಾಮದಾರ್
ರಾ.ಬ.ದಳ, ರಾಯಚೂರ್

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ
810ನೆಯ ಲಿಂಗೈಕ್ಯ ದಿನಾಚರಣೆ



ಬುಧ (ಚನ್ನ)ವಾರ ದಿ. 10-8-2005 ರಂದು ಬೆಳಿಗ್ಗೆ 10-00
ಬೆಂಗಳೂರು ನಗರದ
ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣಜೀವಾಳ

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಅಶುಭವಲ್ಲ ಶುಭವೂ ಅಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲಿಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು, ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಗುತ್ತು ಸಭಾಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಅವಧಿಯಲ್ಲಿ ಬಸವಣ್ಣನವರ ಸಮಗ್ರ ವಚನಗಳನ್ನು 12 ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ವಿಶ್ವಗುರು ಬಸವಣ್ಣನವರ 810ನೆಯ ಲಿಂಗೈಕ್ಯ ದಿನಾಚರಣೆ

ಬುಧ (ಚನ್ನ) ವಾರ ದಿ. 10-8-2005ರಂದು ಬೆಳಿಗ್ಗೆ 10-00

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 810ನೆಯ ಲಿಂಗೈಕ್ಯ ದಿನವು ಬುಧ (ಚನ್ನ) ವಾರ ದಿ.10-8-2005ರಂದು ಒದಗಿ ಬಂದಿದೆ.

ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು. ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು. ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಗುರು(ಪ್ರಭು)ವಾರ ದಿ.11-8-2005ರಂದು ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಸರ್ವರಿಗೂ ಆದರದ ಸುಸ್ವಾಗತ ★

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು
ಪೀಠಾಧ್ಯಕ್ಷರು, ಬಸವ ಕಲ್ಯಾಣ

ಬಸವ ಶಕ್ತಿಯ ಆಗಮನ

ಬಸವ ಶಕ್ತಿಯು ಧರೆಗೆ ಬಂದಿತು
ಮಾತಾಜಿ ಆಕೃತಿ ತಾನು ಕೂಡಿತು
ಬಸವಾತ್ಮಜೆಯಾಗಿ ರೂಪು ತಾಳಿತು
ಅಪ್ಪ ಬಸವನ ಆದರ್ಶ ಪಡೆಯಿತು
ಸಕಲ ಜೀವಾತ್ಮರ ಲೇಸನೆ ಬಯಸಿತು
ತುಂಬು ಹೃದಯದಿ ಎಲ್ಲರ ಕರೆಯಿತು
ಶರಣರ ಸಂಕುಲ ಶರಣ ಮೇಳದಿ ಕೂಡಿ
ಮರ್ತ್ಯದ ಮಹಾಮನೆ ರೂಪು ತಾಳಿತು
ಇಲ್ಲಿ ಸಲ್ಲುವ ಅಲ್ಲಿಯೂ ಸಲ್ಲುವ
ಅನುಪಮ ನಾಣ್ಯವ ತಾನು ನೀಡಿತು
ಕುರುಡಗೆ ಕಣ್ಣು ಹೆಳವಗೆ ಕಾಲು
ಬಳಲಿದ ಜೀವಿಗೆ ಆಸರೆ ನೀಡಲು
ಕೆಸರಲಿ ಆಡುವ ಕಂದನ ಕಂಡ
ಮುಮ್ಮಲ ಮರುಗಿ ಕೈ ಹಿಡಿದೆತ್ತಿ
ಜ್ಞಾನದ ಜಲದಲಿ ಕಂದನ ಮೀಯಿಸಿ
ಆತ್ಮಾನಂದವ ಜನ ಪಡೆದಿಹರು
ಕೊರಡದು ಕೊನರಿತು ಬರಡು ಹಯನಾಯಿತು
ಬಸವ ತತ್ತ್ವದ ಸುರಿಮಳೆಯಾಯಿತು
ಮತಿಯ ಪಾತ್ರೆಯೊಳು ತುಂಬುತ ತುಂಬುತ
ಸುಜ್ಞಾನದರಿವೆಯ ತೊಡಿಸಿದಿರಿ
ಸದ್ಗುಣದೊಡವೆಯ ಮುದದಿ ಧರಿಸಿ
ಬಸವ ಪಥದಿ ಸಾಗ ಬಿಟ್ಟಿರಿ
ಬಸವ ಬಸವ ಎನ್ನುತ ಸಾಗಿದ
ಕಂದನ ಬಸವಣ್ಣ ಬಿಗಿದಪ್ಪಿದ
ಎಂತಹ ಭಾಗ್ಯವ ಕರುಣಿಸಿದಿರಿ ನೀವು
ಮಾತೆಯೆ ನಿಮ್ಮ ಕರಸಂಜಾತೆಗೆ
ಅನುಪಮ ಅಪ್ರತಿಮ ಸಚ್ಚಿದಾನಂದ ಸತಿ
ಜಗದೊಳಾರು ನಿಮಗೆ ಸಾಟಿಯೇ ತಾಯೆ
ವಚನ ತತ್ತ್ವವೆಂಬ ಚಿದ್ರತ್ನ ಗಣಿಯೊಳ
ಲಿಂಗದೇವನೆಂಬ ಮಾಣಿಕ್ಯ ತೋರಿದ
ಸತ್ಯಾನ್ವೇಷಣೆಯ, ಅನುಪಮ ಚತುರೆ
ಷಟಸ್ಥಲ ಪರಿಣತೆ ಶ್ರೀ ಮಾತಾಜಿ
ಏನು ಹೇಳಲಿ ತಾಯಿ ಶರಣರ ಆನಂದ
ಬಸವಾತ್ಮಜೆಯ ಕುಡಿಗಳ ಸಂಭ್ರಮ
ಹೇಳಲು ಪದಗಳು ಸಾಲದಾಗಿವೆ
ಸಚ್ಚಿದಾನಂದ ಪ್ರಿಯೆ ನಿಮ್ಮ ಕರುಣೆ ಅಪಾರ

- ಶಾರದ ಬಸವರಾಜು, ಭದ್ರಾವತಿ
ರಾಷ್ಟ್ರೀಯ ಬಸವ ದಳ

ನೆನೆವೆನಯ್ಯಾ ಬಸವಣ್ಣ,
ನಿಮ್ಮ ಚರಣವೆನ್ನ ಮನದಲ್ಲಿ ಸಾಹಿತ್ಯವಹನ್ನಕ್ಕ
ನೋಡುವೆನಯ್ಯಾ ಬಸವಣ್ಣ,
ನಿಮ್ಮ ಮೂರ್ತಿ ಎನ್ನನವಗವಿಸುವನ್ನಕ್ಕ,
ಪೂಜಿಸುವೆನಯ್ಯಾ ಬಸವಣ್ಣ
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ
ನಿಮ್ಮ ಆಹ್ವಾನಿಸುವೆನಯ್ಯಾ ಬಸವಣ್ಣ
ಅನಿಮಿಷ ನಿಮಿಷ ನಿಮಿಷಗಳಿಲ್ಲವೆಂದೆನಿಸುವನ್ನಕ್ಕ
ನಿಮ್ಮ ಧ್ಯಾನಿಸುವೆನಯ್ಯಾ ಬಸವಣ್ಣ
ಜ್ಞಾನಜ್ಞಾನವಿಲ್ಲವೆನಿಸುವನ್ನಕ್ಕ.
ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣ
ಅಹಂ ಸೋಹಂ ಎಂಬ ಶಬ್ದವುಳ್ಳನ್ನಕ್ಕ
ಬಸವಣ್ಣಾ ಎಂದು ಹಾಡುವೆನಯ್ಯಾ,
ಎನ್ನ ತನುವಿನ ಗಮನ ನಿರ್ಗಮನವಹನ್ನಕ್ಕ
ಬಸವಣ್ಣಾ ಬಸವಣ್ಣಾ ಬಸವಣ್ಣಾ
ಎನುತಿರ್ದೆನಯ್ಯಾ,
ಕಲಿದೇವರದೇವನೆಂಬ ಶಬ್ದವುಳ್ಳನ್ನಕ್ಕ.

-ಮಡಿವಾಳ ಮಾಚಿದೇವರು

ಶ್ರಾವಣ ಮಾಸದಲ್ಲಿ ಬಸವ ಜ್ಯೋತಿ ಕಾರ್ಯಕ್ರಮ

ರಾಷ್ಟ್ರೀಯ ಬಸವ ದಳಗಳು ಇರುವಲ್ಲಿ ಶ್ರಾವಣ ಪ್ರತಿಪದೆಯಿಂದ ಭಾದ್ರಪದ ತೃತೀಯದವರೆಗೆ ಸಂಜೆ ಬಸವ ಜ್ಯೋತಿ ಕಾರ್ಯಕ್ರಮಗಳನ್ನು ಮನೆಮನೆಯಲ್ಲಿ ಏರ್ಪಡಿಸಬೇಕು. 33 ದಿವಸ ಪೂರ್ತಿ ಇದು ನಡೆದು ಚೌತಿಯ ದಿನ ಸಾಮೂಹಿಕವಾಗಿ ಸಮಾರೋಪ ಸಮಾರಂಭ ನಡೆಯಬೇಕು. ರಾಷ್ಟ್ರೀಯ ಬಸವ ದಳ ಅಥವಾ ಬೇರಾವುದೇ ಬಸವ ತತ್ತ್ವವಾದಿ ಸಂಘಟನೆಗಳು ಇಲ್ಲದಲ್ಲಿ ಜನರು ವೈಯಕ್ತಿಕವಾಗಿಯಾದರೂ ತಮ್ಮ ತಮ್ಮ ಮನೆಯಲ್ಲಿ ಬಸವ ಜ್ಯೋತಿಯನ್ನು ಏರ್ಪಡಿಸಬೇಕು. ಭಾದ್ರಪದ ಚೌತಿಯಂದು ರಾಷ್ಟ್ರೀಯ ಬಸವ ದಳಗಳವರು ಬಸವ ಜ್ಯೋತಿಯ ಸಮಾರೋಪ ಸಮಾರಂಭ ಮಾಡಿ, ಪೂಜ್ಯ ಶ್ರೀ ಲಿಂಗಾನಂದ ಜಗದ್ಗುರುಗಳ ಜಯಂತಿಯನ್ನು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ಆಚರಿಸಬೇಕು.

ಬಯಲ ರೂಪ ಮಾಡಿದ ಶರಣ

ಬಯಲು ರೂಪ ಮಾಡಬಲ್ಲಾತನೆ ಶರಣನು, ಆ ರೂಪ ಬಯಲು ಮಾಡಬಲ್ಲಾತನೆ
ಲಿಂಗಾನುಭಾವಿ ನೋಡ, ಬಯಲು ರೂಪ ಮಾಡಲರಿಯದಿದ್ದಡೆ ಎಂತು ಶರಣನೆಂಬೆ
ಆ ರೂಪ ಬಯಲು ಮಾಡಲರಿಯದಿದ್ದಡೆ ಎಂತು ಲಿಂಗಾನುಭಾವಿಯೆಂಬೆ
ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಪುಂಟೆ ಲಿಂಗದೇವ ॥

ಇದು ಬಸವಣ್ಣನವರ ವಚನ. ಬಯಲು ರೂಪ ಮಾಡಬಲ್ಲಾತ ಅಂದರೆ ಬಯಲಿಗೆ ರೂಪ ಕೊಟ್ಟಾತ ಎನ್ನುತ್ತಾರೆ ಬಸವಣ್ಣನವರು, ಬಯಲು ಅಂದರೆ ಏನು ? ಇದಕ್ಕೆ ಚನ್ನಬಸವಣ್ಣನವರು ಹೀಗೆ ಹೇಳುತ್ತಾರೆ. ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ, ಬಯಲು ನಿರಾಕಾರ, ಮೂರ್ತಿ ಸಾಕಾರ, ನಮ್ಮ ಕಣ್ಣಿಗೆ ಕಾಣುವ ಬ್ರಹ್ಮಾಂಡ ಸಾಕಾರ, ಇದೇ ಸಾಕಾರದ ಬ್ರಹ್ಮಾಂಡವ ಸೃಷ್ಟಿ ಮಾಡಿ ಎಲ್ಲಾ ಚಟುವಟಿಕೆಗಳಿಂದ ಆಟ ಆಡಿಸುವ ಚೈತನ್ಯ ಶಕ್ತಿಯೇ ಬಯಲು, ನಿರಾಕಾರ, ಎಂಭತ್ತನಾಲ್ಕು ಲಕ್ಷ ಜೀವರಾಶಿಗಳ, ಪಂಚಭೂತಗಳ ಶರೀರ ಸಾಕಾರ . ಅದೇ ಪಂಚಭೂತಗಳ ಶರೀರದಲ್ಲಿದ್ದುಕೊಂಡು, ಎಲ್ಲಾ ಚಟುವಟಿಕೆಗಳಿಂದ ಆಟ ಆಡಿಸುವ ಚೈತನ್ಯ ಶಕ್ತಿಯೇ ಬಯಲು ನಿರಾಕಾರ, ಈ ಬಯಲು ನಿರಾಕಾರ ಚೈತನ್ಯ ಶಕ್ತಿಯೇ ಸೃಷ್ಟಿಕರ್ತ ಪರಮಾತ್ಮ. ಈ ಬಯಲು ನಿರಾಕಾರ ಅಂದರೆ ಏನೂ ಇಲ್ಲದ ಬಯಲಲ್ಲ. ಬ್ರಹ್ಮಾಂಡದ ಒಳ ಹೊರಗೂ ಇಂಬಿಲ್ಲದಂತೆ ತುಂಬಿ ತುಳುಕುವ ಬಯಲು. ಉದಾ : ಈ ಬ್ರಹ್ಮಾಂಡದ ಕಲ್ಲು ಮಣ್ಣಿನಿಂದ ಹಿಡಿದು ಗಿಡ-ಮರ, ಪಶು-ಪಕ್ಷಿ, ಕ್ರಿಮಿ-ಕೀಟಾದಿಗಳಿಂದ ಮಾನವರಿಗೆ ಸೃಷ್ಟಿಕರ್ತ ಪರಮಾತ್ಮನ ಚೈತನ್ಯ ಇರುವುದರಿಂದಲೆ ಈ ಬ್ರಹ್ಮಾಂಡ ಚಟುವಟಿಕೆಯಿಂದಿರುವುದು. ಆ ಸೃಷ್ಟಿಕರ್ತ ಪರಮಾತ್ಮನ ಚೈತನ್ಯ ಶಕ್ತಿ ಇಲ್ಲದಿದ್ದರೆ ಈ ಬ್ರಹ್ಮಾಂಡ ಸತ್ತ ಶವದಂತೆ. ಆದ್ದರಿಂದ ಈ ಬ್ರಹ್ಮಾಂಡದ ಎಲ್ಲಾ ಚೈತನ್ಯದ ಪೂರ್ಣಾಂಶವೇ ಸೃಷ್ಟಿಕರ್ತ ಪರಮಾತ್ಮನ ತುಂಬಿ ತುಳುಕುವ ಬಯಲು. ಆದ ಕಾರಣ ಶರಣರು ಸೃಷ್ಟಿಕರ್ತ ಪರಮಾತ್ಮನ ಬಯಲು ನಿರಾಕಾರ, ನಿರ್ಗುಣ, ನಿತ್ಯ ನಿರಂಜನ ಇನ್ನೂ ಅನೇಕ ತರದಲ್ಲಿ ಕರೆದಿದ್ದಾರೆ. ಬಸವಣ್ಣನವರು ಬರುವುದಕ್ಕಿಂತ ಮುಂಚೆ ಯುಗ ಯುಗಾಂತರಗಳಿಂದಲೂ ಬ್ರಹ್ಮ, ವಿಷ್ಣು, ರುದ್ರ ಇನ್ನು ಅನೇಕರು ಹುಟ್ಟಿ ಸತ್ತಿರ ತಕ್ಕಂತವರ ಮೂರ್ತಿಗಳನ್ನು ಮಾಡಿ ವೈಭವೀಕರಿಸಿ ಪೂಜಿಸುತ್ತಿದ್ದವರು ಸಾಕಷ್ಟು ಮಂದಿ ಕಾಣ ಸಿಗುತ್ತಾರೆ. ಬಯಲು ನಿರಾಕಾರ ಸೃಷ್ಟಿಕರ್ತ ಪರಮಾತ್ಮ ತತ್ತ್ವಾಧಾರಿತ ಕುರುಹಾಗಿ ಇಷ್ಟಲಿಂಗವನ್ನು ಮೊಟ್ಟಮೊದಲಿಗೆ ಕೊಟ್ಟವರೆಂದರೆ ಬಸವಣ್ಣನವರು. ಇದಕ್ಕೆ ಈ ವಚನವೇ ಸಾಕ್ಷಿ.

ಕೃತ ಯುಗ, ತ್ರೇತಾ ಯುಗ, ದ್ವಾಪರ ಯುಗ, ಕಲಿಯುಗಂಗಳು
ಭವ ರಾಟಾಳದಲ್ಲಿ ತಿರುಗುತ್ತಿಪ್ಪಲ್ಲಿ ಅನಂತ ಕೋಟ್ಯಾನು ಕೋಟಿ
ಯುಗಂಗಳು ಮಡಿದು ಹೋದವು.
ಅನಂತ ಜಲ ಪ್ರಳಯಂಗಳು ಸರಿದು ಹೋದವು
ಇದರೊಳಗೆ ಆವ ಲೋಕದಲ್ಲಿ ಆವ ಯುಗದಲ್ಲಿ
ಪ್ರಾಣ ಲಿಂಗ, ಲಿಂಗ ಪ್ರಾಣವೆಂಬ ಭೇದವನರುಹಿದವರಾರು ಹೇಳಾ
ಗಂಗೆ, ಗೌರಿ ವಲ್ಲಭರು ಮೊದಲಾದ ಅನಂತ ಕೋಟಿ ರುದ್ರಾದಿಗಳೆಲ್ಲರು
ಪ್ರಾಣ ಲಿಂಗದ ಸಂಬಂಧದ ಹೊಲಬನರಿಯದೆ ಆಣೆ ಮಾಡಿ
ಚತುರ್ವಿಧ ಫಲ ಪ್ರಾಪ್ತಿಗೆ ಒಳಗಾದರು
ಲಿಂಗಾಚಾರದ ವಿಚಾರವನರಿಯದೆ ಜಗವೆಲ್ಲಾ ಕೆಟ್ಟು ಹೋಹುದೆಂದು
ಪರಮ ಪುರುಷಾರ್ಥ ಕಾರಣವಾಗಿ ಮರ್ತ್ಯದಲ್ಲಿ ಅವತರಿಸಿ
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆಂಬ ಪಂಚಾಚಾರ
ಸ್ಥಲವ ನೆಲೆಗೊಳಿಸಿ ಷಡುಸ್ಥಲವೆಂಬ ಮಹಾನುಭಾವವ

ಕರತಳಾಮಲಕವಾಗಿ ಸ್ಥಿತಿಗೊಳಿಸಿ ಪ್ರಾಣ ಲಿಂಗ ಲಿಂಗ ಪ್ರಾಣವೆಂಬ
ಭೇದವನೆನಗೆ ತಿಳುಹಿ, ಎನ್ನ ಭ್ರಾಂತಿ ಸೂತಕವ ಬಿಡಿಸಿ
ಲಿಂಗೈಕ್ಯವೆಂಬುದೆನಗೆ ತೋರಿದೆಯಾಗಿ ನಿನ್ನಿಂದ ನಾನು
ಸಂಗನ ಬಸವಣ್ಣನೆಂಬ ಹೆಸರು ಪಡೆದೆನು ಲಿಂಗದೇವ ನೀ ಸಾಕ್ಷಿಯಾಗಿ .

ಎಷ್ಟೆಷ್ಟೋ ಯುಗಂಗಗಳುರುಳಿದರೂ, ಎಷ್ಟೆಷ್ಟೋ ಜಲಪ್ರಳಯಂಗಗಳಾದರೂ ಕೋಟ್ಯಾನು ಕೋಟಿ ಬ್ರಹ್ಮಾಂಡಗಳು ಲಯವಾಗಿ ಹೋದರೂ ಆವ ಯುಗದಲ್ಲಿ ಆವ ಲೋಕದಲ್ಲಿ ಪ್ರಾಣವೆಂಬುದನರುಹಿದವರಾರು ಹೇಳಿರೋ ಎಂದು ನಿರ್ದಿಷ್ಟವಾಗಿ ಕೇಳುತ್ತಾರೆ ಬಸವಣ್ಣನವರು. ದೇವರೆಂದು ತಿಳಿದಿರುವ ಗಂಗೆ ಗೌರಿವಲ್ಲಭರಾದಿಯಾಗಿ ಅನಂತ ಕೋಟಿ ರುದ್ರಾದಿಗಳೆಲ್ಲರೂ ಪ್ರಾಣಲಿಂಗದ ಹೊಲಬನರಿಯದೆ ಚತುರ್ವಿಧ ಫಲ ಪ್ರಾಪ್ತಿಗೆ ಒಳಗಾದರು, ಲಿಂಗಾಚಾರದ ವಿಚಾರವನರಿಯದೆ ಜಗವೆಲ್ಲ ಕೆಟ್ಟು ಹೋಗುವುದೆಂದು, ಸೃಷ್ಟಿಕರ್ತ ಪರಮಾತ್ಮನ ಸುತ್ತಿಸಿ ಶರಣಾಗಿದ್ದಾರೆ ಬಸವಣ್ಣನವರು. ಸೃಷ್ಟಿಕರ್ತ ಪರಮಾತ್ಮ ಬಸವಣ್ಣನವರಿಗೆ ಪ್ರಾಣಲಿಂಗ ಲಿಂಗಪ್ರಾಣವೆಂಬುದನ್ನು ತಿಳುಹಿ ಅನುಗ್ರಹಿಸಿದ ನಂತರವೇ ನಿರಾಕಾರ ಸೃಷ್ಟಿಕರ್ತ ಪರಮಾತ್ಮನ ಸಾಕಾರದ ಕುರುಹಾಗಿ ತತ್ವಾಧಾರಿತವಾಗಿ ಇಷ್ಟಲಿಂಗವನ್ನು ರೂಪಿಸಿ ಕೊಟ್ಟದ್ದರಿಂದಲೇ ಬಯಲಿಗೆ ರೂಪ ಕೊಟ್ಟಾತ, ಬಯಲು ರೂಪ ಮಾಡಿದಾತ ಶರಣ, ಆದ್ದರಿಂದ ಶರಣ ಎಂಬ ಪದ ಮೊಟ್ಟಮೊದಲಿಗೆ ಸೃಷ್ಟಿಯಾದದ್ದೆ ಬಸವಣ್ಣನವರಿಂದ ಅಂದಾಗ ಮೊಟ್ಟ ಮೊದಲನೆಯ ಶರಣರು ಬಸವಣ್ಣನವರು. ಆದ್ದರಿಂದ ಶರಣ ಪದ ತತ್ವಾಧಾರಿತ ವಿಶಿಷ್ಟವಾಗಿದೆ ಎಂಬುದು ಪ್ರತಿಯೊಬ್ಬರೂ ಗಮನಿಸಬೇಕಾಗಿದೆ. ನಂತರ ಬಸವಣ್ಣನವರು ಬಯಲು ನಿರಾಕಾರ ಸೃಷ್ಟಿಕರ್ತ ಪರಮಾತ್ಮನ ಕುರುಹಾಗಿ ಸ್ಥಾಪಿಸಿದ ಇಷ್ಟಲಿಂಗವಿಡಿದು ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಈ ಲಿಂಗಾಯತ ಧರ್ಮವಿಡಿದು ಪರಮಾತ್ಮನ ಸಾಕ್ಷಾತ್ಕಾರ ಪಡೆಯಲು ತತ್ವಾಧಾರಿತವಾದ ಕೆಲವು ಮಾರ್ಗಗಳನ್ನು ರೂಪಿಸಿದರು. ಅವೆಂದರೆ ಅಷ್ಟಾವರಣ: ಈ 8 ಆಚಾರಗಳನ್ನು ಪ್ರಾಣವಾಗಿ ಮಾಡಿ ಷಟ್‌ಸ್ಥಲಗಳನ್ನು ಆತ್ಮವಾಗಿ ಮಾಡಿ ಪಂಚಾಚಾರವೆಂಬ 5 ಆಚಾರಗಳನ್ನು ಪ್ರಾಣವಾಗಿ ಮಾಡಿ ಷಟ್‌ಸ್ಥಲಗಳನ್ನು ಆತ್ಮವಾಗಿ ರೂಪಿಸಿ ಇವೆಲ್ಲವುಗಳ ಬೆಂಬಳಿವಿಡಿದು ಇಷ್ಟಲಿಂಗದ ಮುಖಾಂತರ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡ ಬಸವಣ್ಣನವರು ಇತರರಿಗೂ ಮಾರ್ಗದರ್ಶಕರಾದರೆಂದೇ ಶೂನ್ಯ ಪೀಠಾಧೀಶ ಅಲ್ಲಮಪ್ರಭು ದೇವರು, ಚಿನ್ಮಯ ಜ್ಞಾನಿ ಚನ್ನ ಬಸವಣ್ಣನವರು, ಶಿವಯೋಗಿ ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ, ಹಡಪದ ಹಪ್ಪಣ್ಣ, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ, ನೀಲಗಂಗಮ್ಮ ಲಕ್ಷಮ್ಮ ಡೋಹಾರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಸಮಗಾರ ಹರಳಯ್ಯ, ಬ್ರಾಹ್ಮಣ ಮಧುವರಸ ಇಂತ ಅನೇಕ ಲಕ್ಷೋಪ ಲಕ್ಷ ಶರಣರು ಜಾತಿ-ಮತ-ಪಂಥ ವರ್ಣ ವರ್ಗ,ಲಿಂಗ ಭೇದವಿಲ್ಲದೆ ಬಂದು ಲಿಂಗಾಯತ ಧರ್ಮವಿಡಿದು, ಪರಮಾತ್ಮನಲ್ಲಿ ಒಡವೆರೆದು ಒಂದಾದರು. ಆದ್ದರಿಂದಲೇ ಮಡಿವಾಳ ಮಾಚಿದೇವ ಬಸವಣ್ಣನವರನ್ನು ಕೊಂಡಾಡಿರುವುದು.

ಶಿವ ತಾನೀತ ಮರ್ತ್ಯ ಲೋಕವ ಪಾವನವ ಮಾಡಲು,
ಗುರು ತಾನೀತ ಎನ್ನ ಭವರೋಗವ ವೇಧಿಸಲು,
ಭಕ್ತ ತಾನೀತ ಎನಗೆ ವಿಸ್ತಾರವಾಗಿ.
ಎನಗೆ ಜಂಗಮ ತಾನೀತ ಅನಾದಿ ಸಂಸಿದ್ಧ ಘನಮಹಿಮನಾಗಿ,
ಲಿಂಗ ತಾನೀತ ಎನಗೆ ಪ್ರಾಣಲಿಂಗ ತಾನಾಗಿ.
ಎನ್ನ ವಿಸ್ತಾರ ತಾನೀತ ಎನ್ನ ನಿಲುಕಡೆಯು ತಾನಾಗಿ.
ಎನಗೆ ಸರ್ವಸ್ವಾಯತವ ಮಾಡಿದ ಮಹಿಮ ತಾನೀತ ಕಾಣಾ,
ಕಲಿದೇವರದೇವ, ನಿಮ್ಮ ಬಸವಣ್ಣ.

-ಬಸವಣ್ಣನವರ ವಚನ

ನಿರಾಕಾರ ಸೃಷ್ಟಿಕರ್ತ ಪರಮಾತ್ಮನಿಗೆ ಸಾಕಾರದ ಕುರುಹಾಗಿ ಇಷ್ಟಲಿಂಗ ಕೊಟ್ಟದ್ದರಿಂದಲೆ ಈ ಮರ್ತ್ಯ ಲೋಕವೆಲ್ಲ ಪಾವನವಾಗಿ ತಾನೇ ದೇವರಾದರು ಬಸವಣ್ಣನವರು.

ಅದೇ ಇಷ್ಟಲಿಂಗವಿಡಿದು ಲಿಂಗಾಯತ ಧರ್ಮದ ಸೂತ್ರವ ರೂಪಿಸಿದ್ದರಿಂದಲೇ ತಾನೇ ಲಿಂಗಾಯತ ಧರ್ಮದ ಗುರುವಾದರು ಬಸವಣ್ಣನವರು.

ಅದೇ ಇಷ್ಟಲಿಂಗವಿಡಿದು ಪೂಜಿಸಿ ಧ್ಯಾನಿಸಿ ಸೃಷ್ಟಿಕರ್ತ ಪರಮಾತ್ಮನೊಳು ಬೆರೆಯುವ ಪರಿ ತೋರಿ ತಾವು ಲಿಂಗದೇವನಲ್ಲಿ ಬೆರೆದಿರಲೆಂದೇ ಲಿಂಗವಾದರು ಬಸವಣ್ಣನವರು,

ಜಾತಿ-ಮತ-ಪಂಥ, ವರ್ಣ-ವರ್ಗ-ಲಿಂಗ ಭೇದವಿಲ್ಲದೆ ಸರ್ವರಿಗೂ ಅದೇ ಇಷ್ಟ ಲಿಂಗವ ಕೊಟ್ಟು ಲಿಂಗಾಯತ ಧರ್ಮದ ಸೂತ್ರವಿಡಿದು ಲಕ್ಷೋಪ ಲಕ್ಷ ಜನರನ್ನು ಪಾವನ ಮಾಡಿದ್ದರಿಂದಲೇ ಜಂಗಮರಾದರು ಬಸವಣ್ಣನವರು.

ಬಸವಣ್ಣನವರು ಆತ್ಮ ಸಂಕೇತವಾದ ಆರು ಸ್ಥಲಗಳನ್ನು ಏರಿ ಪರಮಾತ್ಮನ ಸೇರುವ ಸ್ಥಿತಿಗೆ ತಲುಪಿದ್ದರೂ ಇತರರನ್ನು ತನ್ನಂತೆ ಮಾಡಲು ಮತ್ತೆ ಭಕ್ತಸ್ಥಲಕ್ಕೆ ಬಂದು ಭಕ್ತರಾದರು ಬಸವಣ್ಣನವರು.

ಆಗ ಬಸವಣ್ಣನವರು ಹೇಳಿದ ಮಾತು ನಾನೊಬ್ಬನೇ ಭಕ್ತ ಉಳಿದವರೆಲ್ಲ ಜಂಗಮ ಲಿಂಗ ಎಂದು. ಬಸವಣ್ಣನವರು ಭಕ್ತ ಸ್ಥಲಕೆ ಬಂದು ತನ್ನಂತೆ ಇತರರನ್ನು ಮಾಡಿವರೆಂದೇ 770 (ಏಳುನೂರು ಎಪ್ಪತ್ತು ಜನ) ಅಮರ ಗಣಂಗಳಾಗಿರುವುದು ಎಂಬುದನ್ನು ನಾವು ಗಮನಿಸಬೇಕು. ಬಯಲು ನಿರಾಕಾರ ಸೃಷ್ಟಿಕರ್ತ ಪರಮಾತ್ಮನಿಗೆ ಸಾಕಾರದ ಕುರುಹಾಗಿ ಇಷ್ಟಲಿಂಗವ ಕೊಟ್ಟದ್ದರಿಂದಲೆ ಬಯಲು ರೂಪ ಮಾಡಿದಾತ ಬಯಲಿಗೆ ರೂಪ ಕೊಟ್ಟಾತ ಶರಣ ಬಸವಣ್ಣನವರು. ಇನ್ನು ರೂಪ ಬಯಲು ಮಾಡಿದಾತ ಲಿಂಗಾನುಭಾವಿ.

ಬಯಲು ನಿರಾಕಾರ ಸೃಷ್ಟಿಕರ್ತ ಪರಮಾತ್ಮನ ಸಾಕಾರದ ಕುರುಹಾಗಿ ಇಷ್ಟಲಿಂಗವ ಕೊಟ್ಟ ಬಸವಣ್ಣನವರು ಅದೇ ಸಾಕಾರದ ಇಷ್ಟಲಿಂಗವಿಡಿದು ಪೂಜೆ, ಧ್ಯಾನ, ತ್ರಾಟಕಯೋಗದಿಂದ ತಮ್ಮ ಕುಂಡಲಿನಿ ಶಕ್ತಿಯನ್ನು ಆಧಾರ ಚಕ್ರದಿಂದ ಮೇಲೇರಿಸಿದಾಗ ಆತ್ಮ ಚೇತನದ ವಿಶೇಷ ಬೆಳಕು ಮೇಲೇರಿದಂತೆ ಮೇಲಿನಿಂದ ಪರಮಾತ್ಮ ಪರಂಜ್ಯೋತಿಯ ವಿಶೇಷ ಬೆಳಕು ಕೆಳಗಿಳಿದು ಆ ಚಿಕ್ಕ ಜ್ಯೋತಿಯನ್ನು ಅಡಗಿಸಿಕೊಳ್ಳುತ್ತಿದೆ. ಅಂದಾಗ ರೂಪುಳ್ಳ ಇಷ್ಟಲಿಂಗವಿಡಿದು ರೂಪು ಇರದ ನಿರಾಕಾರ ಸೃಷ್ಟಿಕರ್ತ ಪರಮಾತ್ಮನ ಚೇತನದಲ್ಲಿ ತಮ್ಮ ಆತ್ಮ ಚೇತನವನ್ನು ವಿಲೀನಗೊಳಿಸಿ ರೂಪ ಬಯಲು ಮಾಡಿದ ಲಿಂಗಾನುಭವಿ ಬಸವಣ್ಣನವರು. ಆದ್ದರಿಂದ ಬಯಲು ರೂಪ ಮಾಡಿದ ಬಸವಣ್ಣನವರು ರೂಪ ಬಯಲು ಮಾಡಿದಾತ ಲಿಂಗಾನುಭಾವಿ. ಇಷ್ಟಲಿಂಗ ಬಸವಣ್ಣನವರು ಕೊಟ್ಟ ಕೊಡುಗೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

-ಟಿ.ಚಲುವಪ್ಪ, ಚಳ್ಳಕೆರೆ.

ಎನ್ನ ಅರಿವಿನ ಕಣ್ಣ ಕತ್ತಲೆಯ ಕಳೆಯಬಲ್ಲಡೆ
ಸಂಗನ ಬಸವಣ್ಣನಲ್ಲದೆ ಮತ್ತಾರನೂ ಕಾಣೆನು
ಎನ್ನ ಭಾವವ ನಿರ್ಭಾವದಲ್ಲಿ ನಿಲ್ಲಿಸಿ ನಿಶ್ಶೂನ್ಯವ ಮಾಡಿ
ಪರಮಸುಖದೊಳಿರಿಸುವಡೆ,
ಅಲ್ಲಮಪ್ರಭುದೇವರಲ್ಲದೆ ಮತ್ತಾರನೂ ಕಾಣೆನು.
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ ಬಸವ-ಪ್ರಭುದೇವರ ಶ್ರೀಪಾದಕ್ಕೆ
ಶರಣೆಂದು ಬದುಕಿದೆನು.

-ಚನ್ನ ಬಸವಣ್ಣನವರ ವಚನ

ಸಮಸ್ಯೆ ? ಸಮಾಧಾನ ...!

?. ಶರಣ ಸಿದ್ಧರಾಮಪ್ಪ ಲಖಮಣ, ಗುಲಬರ್ಗಾ

ಬಸವಣ್ಣನವರ ವಚನಗಳನ್ನು ಆಳವಾಗಿ ಅಭ್ಯಸಿಸಿ ಅವರ ವಚನಗಳಿಗೆ ಕೂಡಲ ಸಂಗಮದೇವಾ ಮುದ್ರಿಕೆ ಸರಿಯಲ್ಲ, 'ಲಿಂಗದೇವ' ತಾತ್ತ್ವಿಕವಾಗಿ ಸೂಕ್ತ ಎಂದು ತಾವು ಬದಲಾವಣೆ ಮಾಡಿದ್ದು ನಮಗೆ ಬಹಳ ಹಿಡಿಸಿದೆ. ನಾವೆಲ್ಲ ಆಚರಣೆಯಲ್ಲಿ ತಂದುಬಿಟ್ಟಿದ್ದೇವೆ. ಆದರೆ 'ಲಿಂಗದೇವ' ವಚನಾಂಕಿತವನ್ನು ಅಥವಾ ಪದವನ್ನು ಇತರ ಪದ್ಯ, ತ್ರಿಪದಿ ಇತ್ಯಾದಿಗಳಲ್ಲಿ ಬಳಸಿದರೆ ಆಗ ಅದು ಬಸವಣ್ಣನವರ ವಚನ ಅಥವಾ ಅವರದೇ ರಚನೆ ಎಂಬ ಸಂದಿಗ್ಧತೆ ಉಂಟಾಗಬಹುದಲ್ಲವೆ ?

★. 'ಲಿಂಗದೇವ'ವನ್ನು ವಚನಾಂಕಿತವಾಗಿ ಬಸವಣ್ಣನವರ ವಚನಗಳಿಗೆ ಮಾತ್ರ ಕಾಯ್ದಿರಿಸಲಾಗುವುದು; ಕಾಯ್ದಿರಿಸಲೇಬೇಕು. ಸ್ಥಾವರ ಲಿಂಗಕ್ಕೆ ಸಂಬಂಧಿಸಿದಂತೆ ಇರುವ ಮುದ್ರಿಕೆಗಳು-ಮುಖ್ಯ ಗಣಾಧೀಶರಲ್ಲಿ ಮೂರು; ಕೂಡಲ ಸಂಗಮದೇವ, ಚನ್ನಮಲ್ಲಿಕಾರ್ಜುನ, ಕಪಿಲ ಸಿದ್ಧಮಲ್ಲಿಕಾರ್ಜುನ. ಈ ಹೆಸರಿನ ಸ್ಥಾವರ ಲಿಂಗಗಳು ಕೂಡಲ ಸಂಗಮ ಮತ್ತು ಶ್ರೀ ಶೈಲದಲ್ಲಿ ಇವೆ. ಕೂಡಲ ಚನ್ನ ಸಂಗಮದೇವ, ಗುಹೇಶ್ವರ, ಕಲಿದೇವ ಇತ್ಯಾದಿ ಸ್ಥಾವರಲಿಂಗಗಳಿಲ್ಲ. ಇನ್ನು ಕೆಲವು ಶರಣರಲ್ಲಿ ಉದಾ:ಆದಯ್ಯ-ಸೌರಾಷ್ಟ್ರ ಸೋಮೇಶ್ವರ ಮುಂತಾಗಿ ಇದ್ದರೂ ಆ ಶರಣರು ಸಂವಿಧಾನ ಕರ್ತೃ(constitution makers) ಗಳ ಸಾಲಿನಲ್ಲಿ ನಿಲ್ಲರು. ಸಿದ್ಧರಾಮೇಶ್ವರರು ಯೋಗಿನಾಥಾ ಎಂಬ ಇನ್ನೊಂದು ವಚನಾಂಕಿತ ಕೊಟ್ಟು ನಮ್ಮ ಸಮಸ್ಯೆ ನಿವಾರಿಸುತ್ತಾರೆ. ಆದ್ದರಿಂದ ಸಂವಿಧಾನ ಕರ್ತೃಗಳಾದ ಆದಿ ಗುರು ಬಸವಣ್ಣನವರು ಮತ್ತು ದಾರ್ಶನಿಕ ದೇವಗಂಗೆ ಅಕ್ಕಮಹಾದೇವಿಯ ಮುದ್ರಿಕೆಗಳ ಶುದ್ಧಿ ಬಹಳ ಮುಖ್ಯ. "ಮಹಾದೇವಿಯಕ್ಕ ಪ್ರಿಯ ಲಿಂಗದೇವ" ಎಂಬುದನ್ನು ಚನ್ನಮಲ್ಲಿಕಾರ್ಜುನನ ಮುಂದೆ ಸೇರಿಸಿ, ಬಾಲ್ಯದಲ್ಲಿ ಮಹಾದೇವಿಯಕ್ಕ ಜಟಾಮುಕುಟಧಾರಿ ಚನ್ನಮಲ್ಲಿಕಾರ್ಜುನನನ್ನು ಆರಾಧಿಸಿರಬಹುದಾದರೂ ನಂತರ ಆರಾಧಿಸಿರುವುದು ಸಾವು ಕೇಡು ರೂಪು ಇಲ್ಲದ 'ಲಿಂಗದೇವ'ನನ್ನೇ ಎಂಬುದನ್ನು ಸಿದ್ಧಪಡಿಸುತ್ತದೆ.

ಸಾಹಿತಿಗಳು ಈ ಬಗ್ಗೆ ಹಾ ಹೂ ಎಂದು ಹಾಹಾಕಾರ ಎಬ್ಬಿಸುವುದು ಸಹಜ. ಏಕೆಂದರೆ ಅವರಿಗೆ ವಚನ ಸಾಹಿತ್ಯ ಬೇಕಾಗಿರುವುದು ಭಾಷಣ ಮಾಡಲು, ಲೇಖನ ಬರೆಯಲು ಮಾತ್ರ. ಧರ್ಮವಂತರಿಗೆ ವಚನ ಸಾಹಿತ್ಯ ಬೇಕಾಗಿರುವುದು ಆಚರಣೆಗಾಗಿ ; ನಂಬಿಕೆಯನ್ನು ದೃಢಪಡಿಸಲು.

ಇನ್ನು 'ಲಿಂಗದೇವ' ಬೇರೆ ಕಡೆ ಬಳಸಿದರೆ ಜನರಿಗೆ ಅದು ಬಸವಣ್ಣನವರ ರಚನೆ ಎಂಬ ತಪ್ಪುಗ್ರಹಿಕೆ ಉಂಟಾಗುವುದೆಂಬ ಸಂದೇಹಕ್ಕೆ ಹೀಗೆ ಉತ್ತರಿಸಬಹುದು. ವಚನಗಳನ್ನು ಗೀತೆಗಳನ್ನು ಬರೆಯುವುದರಲ್ಲಿ ಅಷ್ಟೇ ಅಲ್ಲ ಪ್ರತಿಯೊಬ್ಬರ ಬರಹ, ಮಾತು ಸಂಭಾಷಣೆಯಲ್ಲಿ ದೇವರನ್ನು ಕುರಿತು ಹೇಳುವಾಗ ಲಿಂಗದೇವ ಎಂದೇ ಬಸವ ಭಕ್ತರು ಬಳಸಬೇಕು. ಮುಸಲೀಮರು ಹೇಗೆ 'ಅಲ್ಲಹ' ಎಂದು ಬಳಸುವರೋ ಹಾಗೆ ನಾವು ಲಿಂಗದೇವ ಬಳಸಬೇಕು. ಪರಮಾತ್ಮ, ಸೃಷ್ಟಿಕರ್ತ, ಭಗವಂತ ಮುಂತಾದುವು ಸಾಮಾನ್ಯ (general, common) ಪದಗಳು ; ಲಿಂಗಾಯತ ಧರ್ಮದ ದೇವರ ಹೆಸರು 'ಲಿಂಗದೇವ'. ಆದ್ದರಿಂದ ಎಲ್ಲರೂ ಲೇಖನ ಸಂಭಾಷಣೆಯಲ್ಲಿ ಬಳಸಬೇಕು.

ವಚನಾಂಕಿತವಾಗಿ ಲಿಂಗದೇವ ಇದ್ದಾಗ ಅದು ಬಸವಣ್ಣನವರ ವಚನ ಎಂದು ತಿಳಿದು, ಬೇರೆ ಕಡೆ ಇದ್ದಾಗ ಅದರ ಕರ್ತೃ ಯಾರೆಂದು ಆಲೋಚಿಸಬೇಕು. ತಿರುಕ್ಕುರಳ್ ಮುಂತಾದವು ಯಾವ ಅಂಕಿತವೂ ಇಲ್ಲದೆ ತಿರುವಳ್ಳುವರ್ ಅವರದು ಎಂದು ಪ್ರಚಾರಗೊಂಡಿಲ್ಲವೆ?.

?. ಗುರು ಬಸವ ಪ್ರಭು, ಬಳ್ಳಾರಿ

ಚಿತ್ರದುರ್ಗ ಬೃಹನ್ಮಠದವರು ಬಸವಣ್ಣನವರು ತ್ರಾಟಕ ಯೋಗ ಮಾಡುವ ಒಂದು ಭಾವಚಿತ್ರ ಬಳಸುತ್ತಾರೆ. ಎಡಗೈ ಅಂಗೈಯಲ್ಲಿ ಇಷ್ಟಲಿಂಗವಿದೆ. ಆದರೆ ಕೊರಳಲ್ಲಿ ಕಾವಿ ಬಟ್ಟೆಯಲ್ಲಿ ಕಟ್ಟಲ್ಪಟ್ಟ ಲಿಂಗವಿದೆ. ಅಂದರೆ ಕಟ್ಟುವ ಲಿಂಗವೇ ಬೇರೆ ತ್ರಾಟಕ ಯೋಗ ಮಾಡುವ ಇಷ್ಟಲಿಂಗವೇ ಬೇರೆ ಎಂದರ್ಥವೇ ?

★ ಇಷ್ಟಲಿಂಗ ಪೂಜೆ, ತ್ರಾಟಕಯೋಗ ಮಾಡುವಾಗ ಅಂಗದ ಮೇಲೆ ಇರುವ ಇಷ್ಟಲಿಂಗವನ್ನು ಲಿಂಗವಸ್ತ್ರ ಬಿಚ್ಚಿ ಹೊರಗೆ ತೆಗೆದು ಅರ್ಚಿಸಲಾಗುವುದು. ಕರುಣೋದಕ ಸ್ವೀಕಾರ ಎಲ್ಲ ಮುಗಿದ ಮೇಲೆ, ಮೊದಲಿನ ಬಟ್ಟೆ ಸ್ನಾನದ ಸಮಯದಲ್ಲಿ ಒದ್ದೆಯಾಗಿರುವುದರಿಂದ, ಈಗ ಮಡಿಯಾದ ಒಣ ಬಟ್ಟೆಯಿಂದ ಕಟ್ಟಿ, ಧರಿಸಲಾಗುವುದು. ಆದ್ದರಿಂದ ಪೂಜೆ-ತ್ರಾಟಕದ ಸಮಯದಲ್ಲಿ ಕೈಯಲ್ಲಿ ಇಷ್ಟಲಿಂಗವಿರುವಾಗ ಕೊರಳಲ್ಲಿ ಲಿಂಗವಸ್ತ್ರವಿರುವುದು ಹಾಸ್ಯಾಸ್ಪದ ಮತ್ತು ಇದು ವ್ಯಕ್ತಿಯು 2 ಲಿಂಗಗಳನ್ನು ಹೊಂದಿದ್ದಾನೆಂಬ ತಪ್ಪು ತಿಳುವಳಿಕೆಗೆ ಕಾರಣವಾಗುವುದು. ಕೆಲವು ಸ್ವಾಮಿಗಳು ಪ್ರಸಾದ ಸ್ವೀಕಾರ ಮಾಡುವಾಗ ಲಿಂಗವಸ್ತ್ರದಲ್ಲಿ ಕಟ್ಟಲ್ಪಟ್ಟ ಇಷ್ಟಲಿಂಗದ ಮೇಲು ಭಾಗ ಕಾಣುವಂತೆ ವಸ್ತ್ರದಲ್ಲಿ ಗುಳಿ ಮಾಡಿ ಇಟ್ಟುಕೊಳ್ಳುತ್ತಾರೆ. ಇದು ಪ್ರಸಾದ ಸ್ವೀಕಾರ ಮಾಡುವಾಗ ಮಾತ್ರ. ಆದ್ದರಿಂದ ಸ್ವತಂತ್ರ ಬುದ್ಧಿ, ಶರಣ ಸಂಸ್ಕೃತಿಯ ಅರಿವು ಇಲ್ಲದ ಕಲಾವಿದರು ಏನೇನೋ ಚಿತ್ರ ಬಿಡಿಸಿದರೆ ಅದನ್ನು ಸರಿಪಡಿಸುವುದು ಸ್ವಾಮಿಗಳ ಕರ್ತವ್ಯವಲ್ಲವೆ ? ತಮಗೇ ಸ್ವತಃ ತಿಳಿಯದಿದ್ದಾಗ ಇನ್ನೊಬ್ಬರು ಎತ್ತಿ ತೋರಿಸಿದಾಗಲಾದರೂ ತಪ್ಪನ್ನು ಸರಿಪಡಿಸುವುದು ವಿವೇಕಿಗಳ ಲಕ್ಷಣ.

?. ಶರಣಪ್ಪ ಗೌಡ ಪಾಟೀಲ್, ಗುಲಬರ್ಗಾ

ಕೆಲವು ಸ್ವಾಮಿಗಳು ಯಾರಾದರೂ ಆಹ್ವಾನಿಸಿದರೆ ಇಂತಿಷ್ಟು ಹಣ(ಕಾಣಿಕೆ) ಕೊಟ್ಟರೆ ಮಾತ್ರ ಬರುತ್ತೇವೆ ಎಂದು ಪಟ್ಟು ಹಿಡಿಯುತ್ತಾರಂತೆ. ಇದು ಸರಿಯೆ ?

★ ಇದು ಸರಿಯಲ್ಲ ನಿಜ ; ಜಂಗಮ-ಭಕ್ತ, ಗುರು-ಶಿಷ್ಯ ಸಂಬಂಧ ಒಂದು ವ್ಯಾಪರವಲ್ಲ ; ಅದು ಕರಾರಿನ ಮೇಲೆ ನಿಂತಿರದೆ ಶ್ರದ್ಧೆ-ಭಕ್ತಿಗಳ ಮೇಲೆ ಇರಬೇಕು. ಆದರೆ ಸಮಾಜದಲ್ಲಿರುವ ಕೆಲವು ಭಕ್ತರ ಭಕ್ತಿಯ ವೈಖರಿ ನೋಡಿದರೆ ಅಂಥ ಗುರುಗಳೇ ಸರಿ ಏನೋ ಎನ್ನಿಸುತ್ತದೆ. ಸಂಕೋಚ ಸ್ವಭಾವದ ಗುರುಗಳಿಗೆ ಶ್ರೀಮಂತ ಭಕ್ತರು ಚೆನ್ನಾಗಿ ಕೈಯಾಡಿಸುತ್ತಾರೆ. ಲಕ್ಷಾಂತರ ರೂಪಾಯಿ ವ್ಯಯಿಸಿ ವೈಭವೋಪೇತ ಬಂಗಲೆ ಕಟ್ಟುತ್ತಾರೆ, ಅದ್ದೂರಿ ಮದುವೆ ಮಾಡುತ್ತಾರೆ ; ಗೃಹ ಪ್ರವೇಶ, ವಿವಾಹ ನಿರ್ವಹಣೆ ಮುಂತಾದ ಕಾರ್ಯಕ್ರಮಕ್ಕೆ ಆಹ್ವಾನಿಸಿ ಗುರುಗಳು ಮಾಡಿಕೊಂಡ ಖರ್ಚು ಸಹ ಪೂರೈಸದಂತೆ ಕಾಣಿಕೆ ಕೊಡುತ್ತಾರೆ. ಹೀಗೆ ಗುರುಗಳು ತಮ್ಮ ಖರ್ಚು ತಾವೇ ಮಾಡಿಕೊಂಡು ಶಿಷ್ಯರನ್ನು ಉದ್ಧರಿಸುವ ಕಾಲ ಬಂದಿದೆ. ಇಂಥ ಕೆಲವು ಕಟು ಅನುಭವಗಳಿಂದ ಮದುವೆ ಮುಂತಾದ ಕಾರ್ಯಕ್ರಮಕ್ಕೆ ಹೋಗಿ ಸಮಯವನ್ನು ಅಪವ್ಯಯ ಮಾಡುವುದಲ್ಲದೆ ಖರ್ಚನ್ನೂ ಭರಿಸುವುದು ದಡ್ಡತನ ಎಂದು ನಮಗೆ ಅನ್ನಿಸುತ್ತಿದೆ. ಆದ್ದರಿಂದ ಕರಾರು ಹಾಕುವ ಗುರುಗಳೇ ಬುದ್ಧಿವಂತರಿದ್ದಂತೆ ತೋರುತ್ತದೆ.

?. ಕೆ.ಎಮ್.ಪಾಟೀಲ್, ಆರ್.ಟಿ.ನಗರ,ಬೆಂಗಳೂರು

1. ನಾವು ಪಂಚಮಸಾಲೆ ಉಪಜಾತಿಯವರು. ಕೆಲವರು ಹೇಳುತ್ತಾರೆ. ಪಂಚಮಸಾಲೆಯವರೆಲ್ಲ ಪಂಚಪೀಠದ ಶಿಷ್ಯರು ಎಂದು. ಇದು ಹೇಗೆ ? ನಮ್ಮ ಹಿರಿಯರ ಕಾಲದಿಂದಲೂ ನಾವು ಬಸವ ಮಾರ್ಗಿಗಳು. ಸಾದರು, ಒಕ್ಕಲಿಗರಂತೆ ಪಂಚಮಸಾಲೆಯವರು ತಮ್ಮ ಉಪಜಾತಿಗೆ ಒಂದು ಪೀಠವನ್ನು ಮಾಡಿಕೊಂಡು, ಒಬ್ಬ ಸ್ವಾಮಿಗಳನ್ನು ಮಾಡಿಕೊಂಡರೆ ಆಗ ಮೂಢರಾದ ಕೆಲವು ಪಂಚಮಸಾಲೆಯವರು ಪಂಚಪೀಠಾಧೀಶರ ಮೂಢ ವರ್ತುಲದಿಂದ ಹೊರಗೆ ಬರಬಹುದೇನೋ ಎನ್ನಿಸುತ್ತಿದೆ. ನಿಮ್ಮ ಸಲಹೆ ಏನು ?

★. 'ಪಂಚ' ಎಂಬ ಎರಡು ಅಕ್ಷರ ಬಿಟ್ಟರೆ ಪಂಚಮಸಾಲೆ ಅವರಿಗೂ ಪಂಚ ಪೀಠದವರಿಗೂ ಯಾವ ಬಾದರಾಯಣ ಸಂಬಂಧವೂ ಇಲ್ಲ. ಪಂಚ ಪದವನ್ನು ಬಳಸಿ ಇವರನ್ನು ಅವರು ಬುಟ್ಟಿಗೆ ಹಾಕಿಕೊಂಡಿದ್ದಾರೆ ಅಷ್ಟೆ! ನಮ್ಮ ಧರ್ಮವು ಜ್ಯೋತಿ ಮುಟ್ಟಿ ಜ್ಯೋತಿ ಆಗುವ, ಗುರು (ಜಂಗಮ) ಮುಟ್ಟಿ ಗುರು (ಜಂಗಮ)ಆಗುವ ತತ್ತ್ವವನ್ನು ಹೇಳುತ್ತದೆ. ಪಂಚ ಪೀಠಾಧೀಶರಿಗೆ ಒಂದು ನೇರವಾದ ಪ್ರಶ್ನೆ ಕೇಳಿರಿ "ಗುರುಗಳೇ ನಾವು ನಿಮ್ಮ ಅನುಯಾಯಿಗಳು ಎನ್ನುತ್ತೀರಿ; ಸಂತೋಷ; ನಾವು ಭಕ್ತಿಯಿಂದ ನಿಮ್ಮ ಅಡ್ಡ ಪಲ್ಲಕ್ಕಿ ಹೊರುತ್ತೇವೆ. ನೀವೇನಾದರೂ ನಿಮ್ಮ ಪೀಠಗಳಿಗೆ ನಮ್ಮ ಪಂಚಮಸಾಲೆ ಜನಾಂಗದ ಯುವಕರನ್ನು ಪೀಠಾಧಿಕಾರಿ ಮಾಡಬಲ್ಲಿರಾ ?" ಅವರು ಮಾಡುತ್ತೇವೆ ಎಂದರೆ ಇನ್ನಷ್ಟು ದಶಕಗಳ ಕಾಲ ಅಡ್ಡಪಲ್ಲಕ್ಕಿ ಹೊರಲು ಅಭ್ಯಂತರವಿಲ್ಲ.

ಎರಡನೆಯ ಸಮಸ್ಯೆಗೆ ಉತ್ತರ ಹೊರಲು ಅಭ್ಯಂತರವಿಲ್ಲ! ಬಾಣಲೆಯಿಂದ ಬೆಂಕಿಗೆ ಹಾರುವ ಅಗತ್ಯವೇನೂ ಇಲ್ಲ. ಒಳಪಂಗಡಗಳನ್ನು ಪ್ರತ್ಯೇಕಗೊಳಿಸಿ, ಗಟ್ಟಿಗೊಳಿಸುವ ದುಸ್ಸಾಹಸಬೇಡ. ಧರ್ಮಗುರು ಬಸವಣ್ಣನವರನ್ನು ನಂಬಿ, ಅಖಂಡ ಸಮಾಜವನ್ನು ಕಟ್ಟಲು ಪ್ರಯತ್ನಿಸಿರಿ. ಜಾತಿ ಆಧಾರಿತ ಪೀಠಗಳಲ್ಲಿ ಹೆಚ್ಚಿನವು ಧಾರ್ಮಿಕ ಕೆಲಸಕ್ಕಿಂತ ರಾಜಕಾರಣದ ವಿಷವರ್ತುಲದಲ್ಲಿ ಸುತ್ತುತ್ತ ಸಾಗಿವೆ. ಆದ್ದರಿಂದ ಜಾತಿ ಸಂಘಟನೆಗಿಂತಲೂ ತತ್ವನಿಷ್ಠ ಸಮಾಜ ಕಟ್ಟುವ ಕೆಲಸ ಮಹತ್ವಪೂರ್ಣವೆನಿಸುತ್ತಿದೆ.

?. 2. ಇತ್ತೀಚೆಗೆ ರಂಭಾಪುರಿ ಶ್ರೀಗಳ ಹೇಳಿಕೆಗಳು, ಕಾರ್ಯಕ್ರಮಗಳು ಸತತವಾಗಿ ಪತ್ರಿಕೆಗಳಲ್ಲಿ ಬರುತ್ತಲೇ ಇರುತ್ತವೆ. ಪಂಚಾಚಾರ್ಯವಾದ ಪುನಃ ಬಲಗೊಳ್ಳುವಂತೆ ಕಾಣುತ್ತದೆ. ನೀವೇಕೆ ಇದಕ್ಕೆ ಪ್ರತಿಕ್ರಿಯೆ ನೀಡುತ್ತಿಲ್ಲ?

★ ಮೈಸೂರಿನ ಕಾಶೀನಾಥ ಶಾಸ್ತ್ರಿಗಳ ಪಂಚಾಚಾರ್ಯಪ್ರಭಾ ಮಾಡಿದ ಕೆಲಸವನ್ನೇ ವಿಶ್ವೇಶ್ವರ ಭಟ್ಟರ ವಿಜಯ ಕರ್ನಾಟಕ ಮಾಡುತ್ತಲಿದೆ, ರಂಭಾಪುರಿ ಶ್ರೀಗಳು ಕುಳಿತರು, ನಿಂತರೂ, ಸೀನಿದರೂ, ಕೆಮ್ಮಿದರೂ ವಿಜಯ ಕರ್ನಾಟಕದಲ್ಲಿ ಪ್ರಕಟಗೊಳ್ಳುತ್ತದೆ. ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರೆ ಅದು ಸೆನ್ಸಾರ್ ಆಗಿ, ಪ್ರಕಟಗೊಳ್ಳುವುದೇ ಇಲ್ಲ. ನೀವು ತಿಳಿದಂತೆ ಪಂಚಾಚಾರ್ಯರ ಕಾಲ್ಪನಿಕ ಕಥೆಗಳು ಬಲಗೊಳ್ಳದೆ ದಿನದಿನಕ್ಕೆ ಜಾಗೃತರಾದ ಜನರ ಮನದಿಂದ ದೂರಸರಿದು ಬಸವ ತತ್ತ್ವವೇ ಬಲಗೊಳ್ಳುತ್ತಲಿದೆ. ಕುಂಬಳಕಾಯಿಗೆ ಕಬ್ಬಿಣದ ಕಟ್ಟುಕೊಟ್ಟು ಬಲಪಡಿಸಲು ಸಾಧ್ಯವೇ ? ಮಿಥ್ಯೆಯ ಮೇಲೆ ನಿಂತ ಪಂಚಾಚಾರ್ಯರ ವಾದ ವಿದ್ಯಾಶಂಕರ್, ಸಾ.ಸಿ.ಮರುಳಯ್ಯ, ಡಾ.ಶಿವಕುಮಾರ ಸ್ವಾಮಿಯಂತಹ ಪಂಡಿತರ ಕೃತಕ ಸಾಹಿತ್ಯ ನಿರ್ಮಾಣದಿಂದ ಬಲಗೊಳ್ಳಲು ಸಾಧ್ಯವೆ?

?. ಸೂರ್ಯಕಾಂತ ಬಿರಾದರ, ಬೀದರ

ಭಾಲ್ಕಿಯಲ್ಲಿ ಒಂದು ಕಾರ್ಯಕ್ರಮ ನಡೆಯಿತು. ಬೆಲ್ದಾಳ ಶರಣರು ಬಸವಣ್ಣನವರು ಕೊಟ್ಟದ್ದು ಒಂದು ತತ್ತ್ವ, ವಿಶಿಷ್ಟ ಧರ್ಮವಲ್ಲ ಎಂದರು. ದಯಾನಂದ ಸ್ವಾಮಿಗಳು ಬಸವಣ್ಣನವರು ಕೊಟ್ಟದ್ದು ಒಂದು ಧರ್ಮ ಎಂದರು. ವೇದಿಕೆಯ ಮೇಲೆ ವಾದ-ವಿವಾದ ನಡೆಯಿತು. ಭಾಲ್ಕಿ ಶ್ರೀಗಳು ವಾದ-ವಿವಾದಕ್ಕೆ ಇದು ಸಮಯವಲ್ಲ ಎಂದು ವಿವಾದವನ್ನು ಮೊಟಕುಗೊಳಿಸಿದರು. ಕೇಳುಗರ ತಲೆಯಲ್ಲಿ ಗೊಂದಲ ಉಂಟಾಯಿತು.?

★ ಬಹುಪಾಲು ಸಭೆಗಳಲ್ಲಿ ಇದೇ ಪರಿಸ್ಥಿತಿ. ಒಬ್ಬರು ಬಿತ್ತುತ್ತಾರೆ; ಇನ್ನೊಬ್ಬರು ಹರಗುತ್ತಾರೆ. ಕ್ರೈಸ್ತ ಮುಸಲೀಮ್, ಸಿಖ್ಖರ ಧಾರ್ಮಿಕ ಸಭೆಗಳು ಜನರಲ್ಲಿ ನಂಬಿಕೆಗಳನ್ನು ಗಟ್ಟಿಗೊಳಿಸುತ್ತ ಹೋಗುತ್ತವೆ. ಲಿಂಗಾಯತರ ಸಭೆಗಳಲ್ಲಿ, ಕೋತಿಗಳು ನೀರು ಹಾಕಲು ಸಸಿಗಳನ್ನು ಕಿತ್ತು ಕಿತ್ತು ನೋಡಿ, ಪುನಃ ನೆಟ್ಟು ನೀರು ಹಾಕುವಂತೆ ಮಾಡುತ್ತಾರೆ. ಅದಕ್ಕಾಗಿಯೇ ಇವರಲ್ಲಿ

ನಂಬಿಕೆ-ಶ್ರದ್ಧೆಗಳು ಕೆಳಗೆ ಬೇರು ಬಿಡುತ್ತಿಲ್ಲ ಮೇಲೆ ಹರಡಿ ಫಲ ಕೊಡುತ್ತಿಲ್ಲ. ಪ್ಲೇಟೋ, ಕಾರ್ಲ್ಸ್ ಮಾರ್ಕ್ಸ್, ಜಯ ಪ್ರಕಾಶ ನಾರಾಯಣ, ವಿನೋಬಾಜಿಯಂತೆ ಬಸವಣ್ಣನವರು ಕೇವಲ ಒಂದು ತತ್ತ್ವ ism ಕೊಟ್ಟು ಹೋಗಿಲ್ಲ. ಪ್ರಾಯೋಗಿಕವಾಗಿ ವಿಚಾರವನ್ನು ಆಚಾರಕ್ಕೆ ಇಳಿಸಿ, ಒಂದು ಸಮುದಾಯವನ್ನು ನಿರ್ಮಾಣ ಮಾಡಿಹೋಗಿದ್ದಾರೆ. ತತ್ತ್ವಜ್ಞಾನವು ಒಂದು ಪರಂಪರೆ (heritage) ಯಾಗಿ ಹರಿದು ಬಂದು, ಆ ಪರಂಪರೆಯ ವಾರಸುದಾರರನ್ನಾಗಿ ಸಮಾಜವನ್ನು ನಿರ್ಮಾಣ ಮಾಡಿದಾಗ ಧರ್ಮ ಎನ್ನಿಸಿಕೊಳ್ಳುತ್ತದೆ. ಆದ್ದರಿಂದ ಬಸವಣ್ಣನವರು ಕೊಟ್ಟುದು ಒಂದು ಧರ್ಮ; ಅದು ಇಷ್ಟಲಿಂಗ ಆಧಾರಿತವಾಗಿರುವುದರಿಂದ ಲಿಂಗಾಯತ ಧರ್ಮ; ಬಸವಣ್ಣನವರು ಅದರ ಜನಕರಾದ ಕಾರಣ ಅದು ಬಸವ ಧರ್ಮ, ಶರಣರೆಲ್ಲರು ಪೋಷಿಸಿಕೊಂಡು ಬಂದಿರುವುದರಿಂದ ಶರಣ ಧರ್ಮ; ವಚನ ವಾಙ್ಮಯವನ್ನು ಸಂವಿಧಾನವಾಗಿ ಹೊಂದಿರುವುದರಿಂದ ವಚನ ಧರ್ಮ.

?. ನಾಗಶೆಟ್ಟಿ ಶೆಟಕಾರ, ಬೀದರ್

ದೊಡ್ಡ ದೊಡ್ಡ ರಾಜಕಾರಣಿಗಳು ಶರಣ ಮೇಳ, ಕಲ್ಯಾಣ ಪರ್ವದಂತಹ ಅರ್ಥಗರ್ಭಿತ ಬೃಹತ್ ಕಾರ್ಯಕ್ರಮಗಳಿಗೆ ಬರಲು ಹಿಂಜರಿಯುವುದೇಕೆ?

★ ವೈಯಕ್ತಿಕವಾಗಿ ತಮ್ಮ ಮಠಗಳನ್ನು ಬೆಳೆಸಿಕೊಳ್ಳಬಯಸುವ ಮತ್ತು ವ್ಯಕ್ತಿಗತ ಕೀರ್ತಿ ಬಯಸುವ ಸ್ವಾಮಿಗಳ ಬಳಿ ಹೋಗಲು ಬಯಸುವರೇ ವಿನಾ ಸಮಾಜ ಕಟ್ಟುವ ಕಾರ್ಯಕ್ರಮಗಳಿಗೆ ಬರಲು ರಾಜಕಾರಣಿಗಳು ಬಯಸುವುದಿಲ್ಲ.

?. ಫ.ಸು.ಬೇವಿನಗಿಡದ,ರಾಷ್ಟ್ರೀಯ ಬಸವ ದಳ, ಧಾರವಾಡ

ಧಾರವಾಡದಲ್ಲಿ ಒಂದು ಪುಸ್ತಕ ಬಿಡುಗಡೆ ಇತ್ತು. ಅಂದು ಡಾ.ಎಂ.ಎಂ.ಕಲುಬುರ್ಗಿಯವರು ಲಿಂಗಾಯತ ಪದವೇ ಎಷ್ಟು ಸೂಕ್ತ ಅರ್ಥಗರ್ಭಿತ ಎಂದು ಬಗೆಬಗೆಯಾಗಿ ವಿವರಿಸಿದರು. ಆಗ ಕಡೆಯಲ್ಲಿ ನಾವು ಬರೆಸುವಾಗ ವೀರಶೈವ ಬಳಸಬೇಕೋ ಲಿಂಗಾಯತ ಎಂದು ಬರೆಸಬೇಕೋ ಎಂದಾಗ ಎರಡರಲ್ಲಿ ಯಾವುದನ್ನಾದರೂ ಬಳಸಿರಿ ಎಂದರು. ನನಗೆ ಕೋಪ ಬಂದಿತು, ಎದ್ದು ನಿಂತು ಹೀಗೆ ಎರಡೆರಡು ಹೇಳಿ ಗೊಂದಲ ಮಾಡಬೇಡಿ. 'ಸ್ಪಷ್ಟವಾಗಿ' ಹೇಳಿ ಎಂದಾಗ 'ಲಿಂಗಾಯತ' ಬರೆಸಿರಿ ಎಂದರು.

ಬೆಳಗಾಂವಿಯಲ್ಲಿ ಇನ್ನೊಂದು ಪುಸ್ತಕ ಬಿಡುಗಡೆಯಾದಾಗ ಲಿಂಗಾಯತ ಕುರಿತೇ ಮಾತನಾಡಿ ಪುನಃ ಯಾರೋ ಕೇಳಿದಾಗ ಮತ್ತೆ ಅಡ್ಡಗೋಡೆ ಮೇಲೆ ದೀಪವಿಟ್ಟರಂತೆ. ಆಗ ಬೆಳಗಾಂವ ರಾಷ್ಟ್ರೀಯ ಬಸವ ದಳದ ಶರಣರು ಸ್ಪಷ್ಟವಾಗಿ ಹೇಳಿ ಎಂದು ಆಗ್ರಹಿಸಿದಾಗ ಲಿಂಗಾಯತವೇ ಸರಿ ಎಂದರಂತೆ. ಏಕೆ ಈ ಹೊಯ್ದಾಟ?

★ ಅದಕ್ಕೆ ಸಾಹಿತಿಗಳು ಎನ್ನುವುದು-ಸಾಹಿತಿಗಳು ಮತ್ತು ದಾರ್ಶನಿಕರ ಮಧ್ಯೆ ಮುಖ್ಯ ಒಂದು ವ್ಯತ್ಯಾಸವಿರುತ್ತದೆ. ಸಾಹಿತಿಗಳು ಸುತ್ತ ಮುತ್ತ ಇರುವವರು, ಅವರ ಪ್ರತಿಕ್ರಿಯೆ, ಮುಂದೆ ಮತ್ತೊಮ್ಮೆ ಸಭೆಗೆ ಆಹ್ವಾನಿಸುವರೋ ಇಲ್ಲವೋ ಎಂಬ ಚಿಂತನೆ ಇವೆಲ್ಲವುಗಳ ಹಿನ್ನೆಲೆಯಲ್ಲೇ ಮಾತನಾಡುವರು. ದಾರ್ಶನಿಕರು ಯಾರು ಒಪ್ಪಲಿ ಬಿಡಲಿ ಸತ್ಯವನ್ನು ನಿರ್ಭಯವಾಗಿ ಹೇಳುವರು. ಸತ್ಯವೇ ಇದ್ದರೂ ಒಂದೊಂದು ಸಂಗತಿಯನ್ನು ಹೇಳಲು ಸಾಹಿತಿಗಳು ಎಷ್ಟೋ ಸಮಯ ತೆಗೆದು ಕೊಳ್ಳುವರು. ನನಗೀಗ ಮನವರಿಕೆಯಾಗುತ್ತಿದೆ. 'ಅವರ ವಿಳಂಬ ಗತಿಗೆ ಹೆಜ್ಜೆ ಹಾಕಲು ನಮಗೆ ಆಗದು; ನಮ್ಮ ವೇಗಕ್ಕೆ ಹೆಜ್ಜೆ ಹಾಕಲು ಅವರಿಗೆ ಆಗದು.' ಎಂದು.

? ಬಸವ ಪ್ರಭು ಹೊಸಮನಿ, ಹುಬ್ಬಳ್ಳಿ

ಕೆಲವರು ಸಂಸ್ಥಾನ ಮಠ ಎಂದು ವಿಶೇಷವಾಗಿ ಬರೆದುಕೊಳ್ಳುತ್ತಾರಲ್ಲ ಏಕೆ?

★. ಅಜ್ಞಾನ ಮತ್ತು ಪ್ರತಿಷ್ಠೆಯಿಂದ. ಮೊದಲು ರಾಜರ ಸಂಸ್ಥಾನಗಳು ಇರುತ್ತಿದ್ದವು. ಅಂಥ

ರಾಜರಿಗೆ ರಾಜಗುರುಗಳು, ರಾಜ ಪುರೋಹಿತರು ಇರುತ್ತಿದ್ದರು. ರಾಜರಿಂದ ಅವರು ಗೌರವಿಸಲ್ಪಡುವವರು ಎಂಬ ಹೆಮ್ಮೆಯಿಂದ ಹಾಗೆ ವಿಶೇಷಣ ಹಚ್ಚಿಕೊಳ್ಳುತ್ತಿದ್ದರು. ಇಂದು ರಾಜರೂ ಇಲ್ಲ, ಸಂಸ್ಥಾನಗಳೂ ಇಲ್ಲ. ಆದರೂ ಸಂಸ್ಥಾನ ಮಠ ಎಂದು ಬರೆದುಕೊಳ್ಳುವುದು ಹಾಸ್ಯಾಸ್ಪದ. ಬಸವ ಧರ್ಮವು ರಾಜರನ್ನು ಹೊಗಳಿ ಬದುಕಿದ ಧರ್ಮವಲ್ಲ, ಜನ ಸಾಮಾನ್ಯರ ಹಿತಕ್ಕಾಗಿ ಹುಟ್ಟಿದ ಧರ್ಮ; ಆದ್ದರಿಂದ ಲಿಂಗಾಯತ, ಶರಣ ಸಂಸ್ಕೃತಿಯವರು ಹಾಗೆ ಬರೆದುಕೊಳ್ಳಲೇ ಬಾರದು.

?. ವನಜಾಕ್ಷಮ್ಮ ತುಮಕೂರು

ಮಗುವು ಹುಟ್ಟಿದಾಗ ಮಾಡುವ ಲಿಂಗಧಾರಣೆಗೆ ಪಂಚಸೂತ್ರಲಿಂಗ ಅಥವಾ ಪೀಟಿಕೆಯನ್ನು ಕಟ್ಟಬೇಕು ಎಂದು ಕೆಲವರು ಅವನ್ನೇ ಕಟ್ಟಿಸುತ್ತಾರೆ. ಇದು ಸರಿಯೆ ?

★ ಸರಿಯಲ್ಲ, ಬಳಪದ ಕಲ್ಲಿನಿಂದ ಪೀಟಿಕೆಗಳನ್ನು ಮಾಡಿರುತ್ತಾರೆ; ಅದನ್ನು ಕಟ್ಟುವುದು ಕಷ್ಟ. ಯಾವಾಗಲಾದರೂ ಪೂಜೆ ಮಾಡುವಾಗ ನೀರು ಬಿದ್ದು ಒಳಸೇರಿದರೆ ಅದು ಕೊಳೆಯುತ್ತದೆ. ನಂತರ ಲಿಂಗದೀಕ್ಷೆ ಕೊಡಿಸುವಾಗ ಪೀಟಿಕೆಗೆ ಕಂತೆ ಇಡಿಸಬೇಕು ಕಂತೆ ಇಡುವವರು ಸಿಗುವುದೇ ಕಡಿಮೆ; ಇಟ್ಟರೂ ಸರಿಯಾಗಿ ಇಡದೆ ಸೊಟ್ಟಾಬಟ್ಟ ಆಗುತ್ತವೆ. ಅದರ ಬದಲು ಕಂತೆಯ ಲಿಂಗಗಳನ್ನೇ ಗರ್ಭ ಲಿಂಗಧಾರಣೆಯ ಸಮಯದಲ್ಲಿ ತಾಯಿಗೆ ಕಟ್ಟಿಸಿದರೆ ಅದೇ ಲಿಂಗಧಾರಣೆ ಲಿಂಗದೀಕ್ಷೆ ಎಲ್ಲ ಕಾಲಕ್ಕೂ, ಹುಟ್ಟಿನಿಂದ ಸಾವಿನವರೆಗೆ ಉಪಯೋಗವಾಗುತ್ತದೆ.

?. ಕುಸುಮ . ಎಮ್.ಎನ್, ಬೆಂಗಳೂರು

ಮಠಗಳಿಗೆ ನಡೆದುಕೊಳ್ಳುವ ಶ್ರೀಮಂತ ಭಕ್ತರು ಏನು ತಪ್ಪು ಮಾಡಿದರೂ ಮಠಾಧಿಕಾರಿಗಳು ಬುದ್ಧಿ ಹೇಳಿ ತಿದ್ದುವುದಿಲ್ಲವೇಕೆ ?

★ ಕಾಲ ಬಹಳ ಬದಲಾಗಿದೆ . ಅಲ್ಲಮ ಪ್ರಭುಗಳೇ ಹೇಳಿಲ್ಲವೆ "ಕಲಿಯುಗದಲ್ಲಿ ಶ್ರೀ ಗುರು ವಂದಿಸಿ ಬುದ್ಧಿ ಹೇಳುವಂತಾಗುತ್ತದೆ" ಎಂದು . ಈಗ ಒಂದು ಹೆಜ್ಜೆ ಮುಂದೆ ಹೋಗಿ ಶ್ರೀಗುರು ಶಿಷ್ಯನಿಗೆ ವಂದಿಸುವುದಷ್ಟೆ ಉಳಿಯುತ್ತದೆ . ಬುದ್ಧಿ ಹೇಳುವ ಕಾಲ ಮುಗಿದು ಹೋಗಿದೆ . ಓರ್ವ ಲಿಂಗಾಯತ ತರುಣ ಹುಡುಗಿಯರನ್ನು ಹುಡುಕಿ ಹುಡುಕಿ ಯಾರನ್ನು ಒಪ್ಪ ಲಿಲ್ಲ .ರೂಪ ವಿದ್ಯೆ ಸಂಪತ್ತು ಇರುವ ಎಷ್ಟು ಜನರು ಇಲ್ಲ ! ಅಮೇರಿಕಾದಲ್ಲಿದ್ದ ಆತ ಇಂಟರ್‌ನೆಟ್‌ನಲ್ಲಿ ಪರಿಚಯವಾದ ಯಾವುದೋ ಐರೋಪ್ಯ ದೇಶದ ಹುಡುಗಿಯನ್ನು ಮದುವೆಯಾಗಲು ನಿರ್ಧರಿಸಿದ . ಅವರ ತಾಯಿಗೆ ಹೇಳಿದೆವು ," ಸಾಂಸ್ಕೃತಿಕವಾಗಿ ಮುಂದೆ ಬಹಳ ತೊಂದರೆಯಾಗುವದು . ವಿದೇಶಿ ಮಹಿಳೆಯರನ್ನು ಮದುವೆಯಾಗಿ ವೃದ್ಧಾಪ್ಯದಲ್ಲಿ ಒಂಟಿತನ,' ಅನಾಥ ಭಾವದಿಂದ ಕಂಗಾಲಾಗಿ "ನಾಯಿಯ ಸಾವು" ಸತ್ತ ಅನೇಕರ ಉದಾಹರಣೆ ಹೇಳಿ"ಬುದ್ಧಿ ಹೇಳಿರಿ ;ಲಿಂಗಾಯತರಲ್ಲದಿದ್ದರೆ ಹೋಗಲಿ ಭಾರತೀಯ (ಹಿಂದು) ಸಂಸ್ಕೃತಿಯ ಯಾವುದಾದರೂ ಕನ್ಯೆಯಿರಲಿ. ಭಾರತದ ಕರುಳು ಬಳ್ಳಿಯನ್ನು ಕಳೆದುಕೊಳ್ಳುವಂತೆ ಆಗಬಾರದು" ಎಂದು ನಾವು ಹಿತೋಪದೇಶ ಮಾಡಿದೆವು. ನಮ್ಮ ಕಳಕಳಿಯನ್ನೂ ಸಹ ಅರ್ಥ ಮಾಡಿಕೊಳ್ಳದೆ ಆ ಮಹಿಳೆ ಪ್ರಾರ್ಥನೆಗೇ ಬರುವುದನ್ನು ಬಿಟ್ಟರು. ಆದಕ್ಕೆ ಮಠಾಧೀಶರು ಜನರು ಏನಾದರೂ ಮಾಡಿಕೊಳ್ಳಲಿ ಎಂದು ತಣ್ಣಗೆ ಇರುತ್ತಾರೆ.

?. ಮರಿಬಸಪ್ಪ ದನದಮನಿ, ಧಾರವಾಡ

ಬಸವ ಸಮಿತಿಯ ಬಸವ ಜಯಂತಿ ವಿಶೇಷ ಸಂಚಿಕೆ ಬಸವ ಪಥದಲ್ಲಿ ಏನೆಂಬೆ, ಏನೆಂಬೆ ಒಂದೆರಡಾದುದ ಎಂಬ ವಚನಕ್ಕೆ ಪುಂಡಲೀಕ ಕಲ್ಲಿಗನೂರು ಚಿತ್ರ ಬರೆದಿದ್ದಾರೆ, ಹೊದ್ದಿಕೆ ಮೇಲೆ ಬೇವಿನ ಬೀಜ ಬಿತ್ತಿ ಇದಕ್ಕೆ ಚಿತ್ರ ಬರೆದಿದ್ದಾರೆ ಏನೇನೂ ಅರ್ಥವಾಗಲಿಲ್ಲ. ಇದರರ್ಥವೇನು ?

★ ನಿಮ್ಮ ಪುಣ್ಯ, ಅರ್ಥವಾಗಿಲ್ಲ! ಮೊದಲ ವಚನದ ಅದ್ಭುತ ತತ್ತ್ವಜ್ಞಾನ ಅರಿತವರಿಗೆ ಪುಂಡಲೀಕರು

ಬರೆದ ಚಿತ್ರ ನೋಡಿ ತುಂಬಾ ವ್ಯಥೆಯಾಗುತ್ತದೆ, ಕೋಪ ಬರುತ್ತದೆ. ಎರಡನೆ ವಚನದ ಚಿತ್ರ ಯಾರಿಗೂ ತಿಳಿಯುವುದಿಲ್ಲ ಮೊದಲ ವಚನದ ಚಿತ್ರ ನಿಜಕ್ಕೂ ಅಪಾರ್ಥಕ್ಕೆ ಎಡೆ ಮಾಡುತ್ತದೆ. Nothing is better than nonsense ಎಂಬುದನ್ನು ಬಸವ ಸಮಿತಿಯವರು ಅರ್ಥ ಮಾಡಿಕೊಂಡರೆ ಒಳ್ಳೆಯದು.

?. ಚಂದ್ರಮೌಳಿ ಲಿಂಗಾಯತ್, ಗಣಾಚಾರ ದಳ, ಬೆಂಗಳೂರು.

ಗಣ ವಾರ್ತೆ ಎನ್ನುವ ಒಂದು ಪತ್ರಿಕೆಯಲ್ಲಿ ಕೆಲವು ಫೋಟೋ ಬಂದಿದ್ದವು ಮತ್ತು ಕಲ್ಯಾಣಪರ್ವಕ್ಕೆ ಹೋಗಿ ಬಂದ ಕೆಲವು ಶರಣರೂ ಹೇಳಿದರು. ಕಲ್ಯಾಣ ಪರ್ವವು ಬಹಳ ಚೆನ್ನಾಗಿ ಆಯಿತು. ಆದರೆ, ಕೆಲವು ಐತಿಹಾಸಿಕ ಸ್ಥಳ, ಅರಿವಿನ ಮನೆ, ಅಕ್ಕನಾಗಲಾಂಬಿಕಾ ಗವಿ ಇವಕ್ಕೆ ಪ್ರವೇಶಕೊಡದೆ ಬೀಗ ಜಡಿದು ಪೋಲಿಸರು ಕಾಯುತ್ತಿದ್ದರು. ಇದರಿಂದ ಸಂದರ್ಶಕರಿಗೆ ನಿರಾಶೆಯಾಯಿತು ಎಂದು ಹೇಳಿದರು. ಹೀಗೇಕೆ ಪೋಲಿಸರು ವರ್ತಿಸುತ್ತಾರೆ?

★ ನಮ್ಮ ಕರ್ನಾಟಕದ ಅದರಲ್ಲಿಯೂ ಬಸವ ಕಲ್ಯಾಣದ ಪೋಲೀಸರ ಧೈರ್ಯ-ಶೌರ್ಯದ ಬಗ್ಗೆ ವಿವರಿಸಲು ಶಬ್ದಗಳು ಸಾಲವು. ವೀರಪ್ಪನ್ ಕಂಡರೆ ಗಡಗಡ ನಡುಗುತ್ತ ನಗರ, ಗ್ರಾಮಗಳಲ್ಲಿ ವಸತಿ ಮಾಡಿ ಮಜವಾಗಿ ಇರುತ್ತ ಪತ್ರಿಕಾ ಹೇಳಿಕೆ ಕೊಡುವುದರಲ್ಲೇ ಕಾಲ ಕಳೆದು ಶರಣ. ನಾಗಪ್ಪನವರನ್ನು ಬಲಿಗೊಟ್ಟರು. ಉದಯರಂಗ ಬಸ್ಸು ಇಳಿದು ಇಲ್ಲೇ ರಸ್ತೆ ಬದಿಯಲ್ಲೇ ವೀರಪ್ಪನ್ ಇದ್ದಾನೆ. ನಾಗಪ್ಪನವರು ಬೇಗ ನಡೆಯಲಾರರು ಎಂದು ಗ್ರಾಮದ ಇಬ್ಬರು ಯುವಕರು ಪೋಲೀಸ್ ಜೀಪಿನವರಿಗೆ ವಿನಂತಿ ಮಾಡಿಕೊಂಡರೆ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಈಗಂತೂ ನಕ್ಸಲೀಯರು ಪೋಲೀಸರ ನಿದ್ದೆಗೆಡಿಸುತ್ತಿದ್ದಾರೆ. ಅವರ ಹೆಸರು ಕೇಳಿದರೇ ಇವರು ನಡುಗುತ್ತಾರೆ. ಇನ್ನು ಸಮವಸ್ತ್ರದ ಗೌರವ ಹೇಗೆ ಕಾಯುವುದು? ಆದಕ್ಕೇ ಐತಿಹಾಸಿಕ ಸ್ಥಳಗಳ ಸಂದರ್ಶನಕ್ಕೆ ಬರುವ ಸಾತ್ವಿಕರು, ಭಕ್ತಿವಂತರು ಆದವರ ಮೇಲೆ ತಮ್ಮ ಶೂರತನ(?) ಪ್ರದರ್ಶಿಸುವಂತೆ ಐತಿಹಾಸಿಕ ಸ್ಥಳಗಳಿಗೆ ಬೀಗ ಜಡಿಯುತ್ತಾರೆ. ಬಸವ ಕಲ್ಯಾಣ ಪೋಲೀಸರನ್ನು ಅಂಜಿಸಲು ಒಂದು ಬ್ರಹ್ಮ ರಾಕ್ಷಸಿ ಬೇರೆ ಸೇರಿಕೊಂಡಿದೆ. ಅದು ನಿಮಿಷಕ್ಕೆ ನಿಮಿಷಕ್ಕೆ ಫೋನ್ ಮಾಡಿತ್ತಿರುತ್ತದೆ. ಹೀಗಾಗಿ ಆರಕ್ಷಕರನ್ನು ನೋಡಿದರೆ ನನಗೆ ಅನುಕಂಪ ಉಂಟಾಗುತ್ತದೆ.

ಆದರೆ ನನಗೆ ಮಾತ್ರ ಇದೆಲ್ಲ ಬಸವಾದಿ ಪ್ರಮಥರ ಸಂಕಲ್ಪ ಎನಿಸುತ್ತಿದೆ. ನಮ್ಮ ಮುದ್ದು ಮಕ್ಕಳೇ ನಾವಿಲ್ಲದ ಜಾಗಕ್ಕೆ ನಮ್ಮ ಚೈತನ್ಯ ತರಂಗಗಳು ಇಲ್ಲದ ಸ್ಥಳಕ್ಕೆ ನೀವೇಕೆ ಬರುತ್ತೀರಿ ? ಎಂದು ಪೋಲೀಸರ ಮೂಲಕ ಆದಿ ಶರಣರು ಸಂದೇಶ ನೀಡುತ್ತಿದ್ದಾರೆ ಎಂದು ನನಗೆ ಅನ್ನಿಸುತ್ತಿದೆ.

ನಾವೊಮ್ಮೆ ಮಥುರಾಕ್ಕೆ ಹೋಗಿದ್ದೆವು. ಐತಿಹಾಸಿಕ ಕೃಷ್ಣ ಮಂದಿರ ಮತ್ತು ಮಸೀದಿ ನಡುವೆ ಒಂದೇ ಒಂದು ಗೋಡೆ ಇದೆ. ಅತ್ಯಂತ ಉದ್ರಿಕ್ತ ವಾತಾವರಣ. ಆದರೂ ಪೋಲೀಸರು ಬೆಳಗಿನ ಜಾವದಿಂದ ರಾತ್ರಿ 10ರವರೆಗೆ ಸಂದರ್ಶಕರನ್ನು ಬಿಡುತ್ತಾರೆ ; ಪೂಜೆ-ಪುರಸ್ಕಾರ-ದರ್ಶನಕ್ಕೆ ಅವಕಾಶ ಮಾಡಿಕೊಡುತ್ತಾರೆ. ಬಸವ ಕಲ್ಯಾಣದಲ್ಲಿ ಮಂದಿರ-ಮಸೀದಿಯಂತಹ ಯಾವುದೇ ಸಮಸ್ಯೆ ಇಲ್ಲದಿದ್ದರೂ ಪೋಲೀಸರು ಪ್ರದರ್ಶಿಸುವ "ಭಯ" ನೋಡಿದರೆ ಅವರ ಧೈರ್ಯ-ಶೌರ್ಯದ ಬಗ್ಗೆ ಜನರೇ ನಾಚಿಕೊಳ್ಳುವಂತೆ ಆಗುತ್ತಿದೆ.

810ನೆಯ ಬಸವ ಲಿಂಗೈಕ್ಯ ಸಂಸ್ಮರಣೆ
ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 810ನೆಯ ಬಸವ ಪಂಚಮಿಯ ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು, ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನಮೇಲೆ ಬಸವ ರಕ್ಷೆ(ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ. ಸರ್ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿ ರಸ್ತೆ ಮತ್ತು ಸಿಟಿ ಮಾರುಕಟ್ಟೆ ರಸ್ತೆ ಕೂಡುವಲ್ಲಿ ಇದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಆತ್ಮತನುವನು ಮುಟ್ಟದ ಮೂಲದ ನಿಷ್ಠಾಪರದಲ್ಲಿ ಮುಟ್ಟರೊ.
ಆ ಪರದಲ್ಲಿ ವಿದ್ಯೆದೊಳಗಣ ಸಹಜವರಿದಂಗಲ್ಲದೆ
ಲಿಂಗವೆನಬಾರದು, ಜಂಗಮವೆನಬಾರದು.
(ಧಾರಾ) ಮಂಟಪದ ಸಹಜವನರಿಯದೆ ನರಕಕ್ಕೆ ಗುರಿಯಾದರು ಕಾಣಾ
ಲಿಂಗಾರ್ಚಕರಾದವರು.
ಜನನ ಮರಣ ತಪ್ಪದೆಂದಿವರನತಿಗಿಗಳೆದು
ಲಿಂಗಾರ್ಚನೆಯ ಮಾಡಿ ತೋರಿ, ತನ್ನವರ
ನಿತ್ಯದೊಳಗಿರಿಸಿದಾತ ಬಸವಣ್ಣ ಕಾಣಾ, ಕಲಿದೇವಯ್ಯ.
-ಮಡಿವಾಳ ಮಾಚಿದೇವರು

ಮಹಿಳಾ ಸ್ವಾತಂತ್ರ್ಯದ ಮೊಟ್ಟ ಮೊದಲನೆಯ ಹೋರಾಟಗಾರ್ತಿ ಅಕ್ಕಮಹಾದೇವಿ

-ಜಗದ್ಗುರು ಮಾತೆ ಮಹಾದೇವಿ

ಮಹಿಳೆಗೆ ಯಾವುದೇ ಸಾಮಾಜಿಕ ಸ್ವಾತಂತ್ರ್ಯ, ಧಾರ್ಮಿಕ ಸಮಾನತೆ ಇಲ್ಲದೆ, ಆಕೆ ಕೇವಲ ಸುಖದ ಸಾಧನ, ಹೆರುವ ಯಂತ್ರ ಎಂಬ ಮನೋಭಾವ ಮತ್ತು ವಾತಾವರಣ ರೂಢಿಗೊಂಡಿದ್ದಾಗ 12ನೆಯ ಶತಮಾನದಲ್ಲಿ ಬಸವಣ್ಣನವರು ಮಹಿಳೆಯರ ಅಂತರಂಗದ ಅಳಲನ್ನು ಅರಿತು ಮಹಿಳೆಯರ ಸ್ವಾತಂತ್ರ್ಯದ ಕಹಳೆ ಮೊಳಗಿದರು. ಅನುಭವ ಮಂಟಪದಲ್ಲಿ ಮುಕ್ತ ಅವಕಾಶ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಮಹಿಳೆಯರಿಗೆ ಒದಗಿಸಿಕೊಟ್ಟರು. ಈ ಸದವಕಾಶವನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ಅಕ್ಕಮಹಾದೇವಿಯು ಜಗತ್ತಿನ ಮೊಟ್ಟಮೊದಲ ಸ್ತ್ರೀ ವಿಮೋಚನಾ ಹೋರಾಟಗಾರ್ತಿಯಾಗಿ ಕಾಣಬರುತ್ತಾಳೆ. ಸ್ತ್ರೀ ಎಂದರೆ ಮಾಯೆ ಎಂಬ ಹಣೆ ಪಟ್ಟಿಯ ಮೆತ್ತಿಕೊಂಡ ಸಮಾಜದಲ್ಲಿ ಮಾಯೆತನ ಇರುವುದು ಹೊರಗೆ ಅಲ್ಲ, ತನ್ನ ಮನದೊಳಗೆ ಎಂದು ದಿಟ್ಟತನದಿಂದ ನುಡಿದು ದುರ್ಬಲ ಮನದ ಪುರುಷರಿಗೆ ಸ್ತ್ರೀಗೆ ಪುರುಷನೂ ಮಾಯೆಯೆ ಎಂದು ದಿಟ್ಟ ತನದ ಸವಾಲನ್ನು ಹಾಕಿದ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ. ಅಕ್ಕನ ಸಂದೇಶಗಳು ಎಂದೆಂದಿಗೂ ಮಾನವ ಕುಲಕ್ಕೆ ದಾರಿದೀಪಗಳು ಎಂದು ಅಕ್ಕಮಹಾದೇವಿ ಅನುಭಾವ ಪೀಠದ 35ನೆಯ ವಾರ್ಷಿಕೋತ್ಸವದ ನಿಮಿತ್ತ ಪೀಠಾರೋಹಣ ಮಾಡಿದ ಜಗದ್ಗುರು ಮಾತೆ ಮಹಾದೇವಿಯವರು ಆಶೀರ್ವಚನ ಸಂದೇಶದಲ್ಲಿ ನುಡಿದರು. ಧಾರವಾಡದ ಉಳವಿ ರಸ್ತೆಯ ರೇಲ್ವೆಗೇಟಿನ ಬಳಿ ಇರುವ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಕಮಹಾದೇವಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮಹಿಳಾ ಜಗದ್ಗುರು ಪೀಠವು 1970ರಲ್ಲಿ ಸ್ಥಾಪನೆಯಾದ್ದರಿಂದ ಇದರ 35ನೆಯ ವಾರ್ಷಿಕೋತ್ಸವವನ್ನು ಸಹ ಆಚರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಕಲಘಟಗಿ ತಾಲೋಕಿನ ಮಲಕಿನಕೊಪ್ಪದ ಬಸವಂತಪ್ಪ ಹುಲಮನಿ ಮತ್ತು ಸಾವಕ್ಕನವರ ಪುತ್ರಿ ಶಂಕರಮ್ಮ ಅವರಿಗೆ ಜಂಗಮ ದೀಕ್ಷೆಯನ್ನು ನೀಡಿ, ಕಾವಿ ವಸ್ತ್ರಗಳನ್ನು ದಯಪಾಲಿಸಿ ಮಾತೆ ಸತ್ಯಾದೇವಿ ಎಂಬ ಆಧ್ಯಾತ್ಮಿಕ ಹೆಸರನ್ನು ದಯಪಾಲಿಸಿದರು. ಪುಷ್ಪವೃಷ್ಟಿ ಮತ್ತು ಆರತಿಯನ್ನು ಮಾಡಿ ಸಮಾವೇಶವಾಗಿದ್ದ ಸದ್ಭಕ್ತರು ಮಾತೆ ಸತ್ಯಾದೇವಿಯವರಿಗೆ ಗೌರವವನ್ನು ಸಲ್ಲಿಸಿದರು. ಜಂಗಮ ದೀಕ್ಷಾ ಪ್ರದಾನದ ನಂತರ ಮಾತನಾಡಿದ ಮಾತೆ ಸತ್ಯಾದೇವಿಯವರು, "ಬಾಲ್ಯದಿಂದಲೂ ಧರ್ಮ-ಅಧ್ಯಾತ್ಮದ ಕಡೆ ನನಗೆ ಒಲವಿತ್ತು ಅದನ್ನು ಗುರುತಿಸಿ ನನ್ನನ್ನು ಪೂಜ್ಯ ಮಾತಾಜಿಯವರು ಪ್ರೋತ್ಸಾಹ ತರಬೇತಿ ನೀಡಿದರು. ತನು-ಮನ-ಧನ ಎಲ್ಲವನ್ನೂ ದೇವರಿಗೆ, ಗುರು ಬಸವಣ್ಣನವರಿಗೆ ಸಮರ್ಪಿಸಿ ಧರ್ಮ ಪ್ರಚಾರ, ಸಮಾಜ ಸೇವೆಯ ಕೈಂಕರ್ಯವನ್ನು ಹೊತ್ತು ನಾನು ನಿಸ್ವಾರ್ಥಿಯಾಗಿ, ಪ್ರಾಮಾಣಿಕವಾಗಿ ದುಡಿಯುವ ಪ್ರತಿಜ್ಞೆಯನ್ನು ಮಾಡುತ್ತೇವೆ." ಎಂದು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಿ.ಜಿ.ಹೊಸಗೌಡರು, " ಸನ್ಯಾಸವನ್ನು ಪಡೆಯುವವರು ಸಮಾಜ ಸೇವೆ, ಧರ್ಮ ಪ್ರಚಾರದ ಉದ್ದೇಶದಿಂದ ತ್ಯಾಗ ಜೀವನಕ್ಕೆ ಬರುವ ಸತ್ಸಂಪ್ರದಾಯವನ್ನು ಬಸವ ಧರ್ಮಪೀಠವು ಬಳಕೆಗೆ ತಂದಿದೆ. ಜಂಗಮತ್ವವು ಜಾತಿಯಿಂದ ಬರದೆ ಸಾಧನೆಯಿಂದ, ಅರಿವು-ಅನುಭಾವಗಳಿಂದ ಬರುತ್ತದೆ ಎಂಬುದನ್ನು ಸಾಧಿಸಿ ತೋರಿಸುವುದೇ ಬಸವ ಸಿದ್ಧಾಂತದ ಮರ್ಮ ನಮ್ಮ ಜಿಲ್ಲೆಯಾದ್ಯಂತ ಸಂಚಾರ ಮಾಡಿ ಮಾತೆ ಸತ್ಯಾದೇವಿಯವರು ಬಸವ ತತ್ತ್ವವನ್ನು ಬೆಳೆಸಬೇಕೆಂಬುದು ನಮ್ಮ ಆಶಯ." ಎಂದು ಮಾತನಾಡಿದರು. ಜೀವ ವಿಮಾ ಅಧಿಕಾರಿಗಳಾದ ಎಸ್.ಬಿ.ಜೋಡಳ್ಳಿಯವರು ಮಾತನಾಡಿ ಬಾಲ್ಯದಿಂದಲೂ ಉತ್ತಮ ಪ್ರತಿಭೆ ತೋರಿಸಿದ್ದ ಸತ್ಯಾದೇವಿಯವರು ಉದಾತ್ತ ಸಾಧನೆಗೆ ಮುಂದಾಗುವರೆಂದು ನಮ್ಮೆಲ್ಲರ ಊಹೆ ಇತ್ತು ಅದು ವೈರಾಗ್ಯ ಜೀವನಕ್ಕೆ ತಿರುವು ಪಡೆದುದು ಸಮಾಜದ ಭಾಗ್ಯ ಎಂದರು.

ಕಾರ್ಯಕ್ರಮದ ದಿವ್ಯ ಸನ್ನಿಧಿ ವಹಿಸಿದ್ದ ಪೂಜ್ಯ ಮಾತೆ ಸಾವಿತ್ರಕ್ಕ ಅವರು, "ಜಗನ್ಮಾತಾ ಅಕ್ಕಮಹಾದೇವಿ

ವೈರಾಗ್ಯ ಜೀವನ ಬಯಸುವವರಿಗೆ ಒಂದು ಪ್ರೇರಕ ಶಕ್ತಿಯಾದಂತೆ, ಅಕ್ಕಮಹಾದೇವಿ ಮಠವು ಅನೇಕ ಮುಮುಕ್ಷುಗಳಿಗೆ ಉತ್ತಮ ಆಶ್ರಯ ಸ್ಥಾನವಾಗಿದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಆಶ್ರಯ ಮತ್ತು ತರಬೇತಿ ಅನೇಕ ಅಧ್ಯಾತ್ಮಿಕ ಸಾಧಕರಿಗೆ ಸುರಕ್ಷಿತ ನೆಲೆಯಾಗಿದೆ. ಅವರ ಜೀವನವನ್ನು ಕೇವಲ ಪಾರಮಾರ್ಥ ಸಾಧನೆಗೆ ಸೀಮಿತಗೊಳಿಸದೆ ಸಮಾಜ ಸೇವೆ ಧರ್ಮಜಾಗೃತಿಯ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಸದವಕಾಶವನ್ನು ಕಲ್ಪಿಸುತ್ತದೆ.'' ಎಂದು ನುಡಿದರು. ನೀಲಾಂಬಿಕಾ ಇಂಗಳ್ಳಿಯವರು ಸಭಾ ನಿರ್ವಹಣೆಯನ್ನು ನೆರವೇರಿಸಿದರು. ಆರಂಭದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು.

ನನ್ನ ಮಾತಾಜಿ ಎಂತಾವರು

ಎಂತಾವರೆಂತಾವರು ಎಂತಾವರೆಂತಾವರು
ನಮ್ಮ ಮಾತಾಜಿಯವರೆಂತಾವರೆಂತಾವರು
ಶರಣರೇ, ನಮ್ಮ ಮಾತಾಜಿಯವರಿಂತಾವರಿಂತಾವರು ॥ಪ॥
ತಾಯಿಯ ಮಮತೆ ತುಂಬಿ ಕೊಂಡಂತಾವರು
ವಚನಾಮೃತ ಸುಧೆಯ ಉಣಿಸುವಂತಾವರು
ತತ್ವಜ್ಞಾನದಲ್ಲಿವರು ಬಸವಾದಿ ಶರಣರಂತಾವರು
ಉಪನಿಷತ್‌ಕಾರರಿಗೆ ಸರಿಸಾಟಿಯಾದಂತಾವರು ॥1॥
ಗಾಯನವ ಮಾಡೆ ಕೋಗಿಲೆಯ ನಾಚಿಸುವಂತಾವರು
ಪ್ರವಚನವ ಮಾಡೆ ಜ್ಞಾನಗಂಗೆಯ ಹರಿಸುವಂತಾವರು
ಅನುಭಾವ ನೋಡೆ ಜಂಗಮರಿಗೆ ಮಾದರಿಯಾದಂತಾವರು
ಪರರ ಗುಣದೋಷಗಳ ನೋಡೆ, ಹಂಸಕ್ಷೀರ ನ್ಯಾಯದಂತಾವರು ॥2॥
ಕವನಗಳ ರಚನೆಯಲ್ಲಿ ಇವರಿಗೆ ಇವರೇ ಸರಿಸಾಟಿಯಾದಂತಾವರು
ವಚನಗಳ ರಚನೆಯಲಿ ಬಸವ ಗುರುವಿನ ಸಮಕಾಲದಂತಾವರು
ಕೃತಿಗಳ ರಚನೆಯಲಿ ಎಲ್ಲ ಪ್ರಶಸ್ತಿಗಳಿಗೆ ಅರ್ಹರಾದಂತಾವರು
ಎಲ್ಲ ಬಲ್ಲವರಾದ ಬಸವ ಗುರುವಿನ ಆದಂತಾವರು ॥3॥
ಬಸವ ಕುಲಕೆ ಹಿರಿಮೆ ಗರಮೆ ತಂದಂತಾವರು
ಯಾರಿಗೆ ಹೋಲಿಸಲು ಉಪಮಾತೀತರಾದಂತಾವರು
ಇವರ ಸಾನಿಧ್ಯ ಸಂಪರ್ಕ ಪಡೆದುಕೊಂಡಂತಾವರು
ಜನ್ಮ ಜನ್ಮಗಳ ಭವ ಕಳೆದುಕೊಂಡಂತಾರೀವರು ॥4॥
ಬಸವ ಕಲ್ಯಾಣವ ನವಕಲ್ಯಾಣ ಮಾಡುವಂತಾವರು
ಬಸವ ಭಕ್ತರನೆಲ್ಲ ಶರಣಮೇಳದಲ್ಲಿ ಕೂಡಿಸಿದಂತಾವರು
ಹನ್ನೆರಡನೆ ಶತಕವ ಇಪ್ಪತ್ತೊಂದಕ್ಕೆ ತಂದಂತಾವರು
ಬಸವ ತತ್ವವ ವಿಶ್ವದೆಲ್ಲೆಡೆ ಬೆಳಗಿದಂತಾವರು ॥5॥
ವರ್ಣಿಸಲು ನೋಡೆ ಎಣೆಯಿಲ್ಲದಂತಾವರು
ಬಸವ ಗುರುವಿನ ಹೃದಯವಾದಂತಾವರು
ಬಸವಾತ್ಮಜೆ ಎಂದೆ ಖ್ಯಾತಿವೆತ್ತಂತಾವರು
ಬಸವ ಗುರುವಿನ ಕೃಪೆಯಿಂದ ಬಸವಕಂದಳಿಗೆ
ಗುರುವಿಗೆ ದೊರೆತಂತಾವರು. ಗುರುವಾಗಿ ದೊರೆತಂತಾವರು ॥6॥

-ಸರೋಜಮ್ಮ ನಾಗರಾಜು
ರಾ.ಬ.ದಳ, ಮೈಸೂರು

ಅನಾಥಾಲಯಗಳಿಗೆ ದಾನ ಮಾಡಲು ದಾನಿಗಳಲ್ಲಿ ಕೋರಿಕೆ

-ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು
ಪ್ರಧಾನ ಸಂಚಾಲಕರು

ಇಂದಿನ ಸಾಮಾಜಿಕ ವಾತಾವರಣ ಭಯಂಕರವಾಗಿ ಹದಗೆಡುತ್ತಿದ್ದು ಬಹುಪಾಲು ಜನರ ಜೀವನ ನಿರಾಶೆಯ ಕೂಪವಾಗುತ್ತಿದೆ. ಹೆಚ್ಚುತ್ತಿರುವ ಬಡತನ, ಏರುತ್ತಿರುವ ಬೆಲೆಗಳು, ದುಡಿದುದನ್ನು ಹೆಂಡತಿ ಮಕ್ಕಳ ಹೊಟ್ಟೆಗೆ ಹಾಕದೆ ಹೆಂಡದ ಅಂಗಡಿಗೆ ಸುರಿಯುವ ಕುಡುಕ ಗಂಡಂದಿರು ; ಸಾರಾಯಿ ಕುಡಿದು ತಂಬಾಕು ತಿಂದು ರೋಗಗ್ರಸ್ತರಾಗಿ ಅಕಾಲಿಕವಾಗಿ ಸಾವನ್ನಪ್ಪುವ ಗಂಡಸರು; ಈ ಎಲ್ಲ ಕಾರಣಗಳಿಂದ ಹೆಣ್ಣು ಮಕ್ಕಳ, ಮಕ್ಕಳ ಜೀವನ ದುರ್ಭರವಾಗುತ್ತಿದೆ. ಬಾಲ ಕಾರ್ಮಿಕ ವೃತ್ತಿ ಬಾಲಾಪರಾಧಿಗಳ ಸಂಖ್ಯೆಯಲ್ಲಿ ಏರುವಿಕೆ, ಇಂಥ ಹತ್ತು ಹಲವಾರು ಕಾರಣಗಳಿವೆ. ಮಹಿಳೆಯರ ಸಂಕಷ್ಟಗಳು ಮಿತಿ ಮೀರಿ ಆಶ್ರಯ ಕೋರುವವರ ಸಂಖ್ಯೆ ವಿಪರೀತವಾಗುತ್ತಿದೆ. ಈವರೆಗೆ ನಾವು ನಮ್ಮ ಸಂಸ್ಥೆಗಳಲ್ಲಿ ಅನೇಕ ನಿಸ್ಸಹಾಯಕ ಮಹಿಳೆಯರಿಗೆ, ಬಡ ಮತ್ತು ಅನಾಥ ಮಕ್ಕಳಿಗೆ, ಮುದುಕರಿಗೆ ಆಶ್ರಯ ಕೊಡುತ್ತಾ ಬಂದಿದ್ದೇವಾದರೂ ಅಧಿಕೃತವಾಗಿ ಅನಾಥಾಲಯ, ವೃದ್ಧಾಶ್ರಮ ಮುಂತಾಗಿ ತೆಗೆದಿರಲಿಲ್ಲ. ಇವು ಸಾಮಾಜಿಕ ಅಗತ್ಯಗಳು ಎಂದು ಮನಗಂಡು ಇವುಗಳನ್ನು ನಡೆಸುವ ನಿರ್ಧಾರಕ್ಕೆ ಬಂದಿದ್ದೇವೆ.

ಸಮಾಜದ ಅಂಗವಾಗಿ ಬೆಳೆಯುವ ವ್ಯಕ್ತಿ ಪುನಃ ತನ್ನ ಸುತ್ತಲಿನ ಪರಿಸರಕ್ಕೆ, ಸಮಾಜಕ್ಕೆ ಕೊಡುಗೆ ನೀಡಬೇಕಾದುದು ಅವಶ್ಯ. ಆದ್ದರಿಂದ ಈ ದಿಶೆಯಲ್ಲಿ ದಾನಿಗಳು ಅನಾಥಾಲಯದ ಮಕ್ಕಳಿಗೆ ಬಟ್ಟೆಗಳನ್ನು, ನೋಟ್ ಬುಕ್ಕ್, ಪೆನ್ನು, ಹಾಸಿಕೊಳ್ಳುವ ಜಮಖಾನ, ಹೊದೆಯುವ ಚಾದರ ಮುಂತಾಗಿ ಕೊಡಬಹುದು. ಹಣ್ಣು ಬ್ರೆಡ್, ಸಿಹಿ ತಿನಿಸು, ಹಾಲು ಮುಂತಾಗಿ ಹಂಚಬಹುದು. ಆಗಾಗ ಪ್ರಸಾದ ದಾಸೋಹ ಮಾಡಿಸಬಹುದು. ದಾನಿಗಳು ಅವರ ಅಥವಾ ಅವರ ಹಿರಿಯರ ಹೆಸರಿನಲ್ಲಿ ಪುದುವಟ್ಟು (F.D) ಇಟ್ಟು ಅದರ ಬಡ್ಡಿಯಲ್ಲಿ ಅನಾಥಾಲಯದಲ್ಲಿ ಪ್ರಸಾದ ದಾಸೋಹ ಪ್ರತಿ ವರ್ಷದಲ್ಲಿ ವಿಶಿಷ್ಟ ದಿವಸ ನಡೆಯುವಂತೆ ಏರ್ಪಡಿಸಬಹುದು. ಅನಾಥಾಲಯದ ಮಕ್ಕಳಲ್ಲಿ ಒಬ್ಬರನ್ನು ಆಯ್ಕೆ ಮಾಡಿ ಅವರ ಪಾಲನೆಗೆ ಕಾಣಿಕೆ ಕೊಡಬಹುದು. ಈ ಪದ್ಧತಿ ವಿದೇಶೀಯರಲ್ಲಿದ್ದು ಕೆಲವರು ಭಾರತದ ಅನಾಥಾಲಯಗಳಲ್ಲಿ ಇರುವ ಮಕ್ಕಳನ್ನು ಆಯ್ದು ಸಹಾಯ ಕಳಿಸುವ ಪರಿಪಾಠ ಹೊಂದಿರುತ್ತಾರೆ.

ವೃದ್ಧಾಶ್ರಮವನ್ನು ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಆರಂಭಿಸುವ ಉದ್ದೇಶವಿದ್ದು ಸಿದ್ಧತೆ ನಡೆಯುತ್ತಿದೆ. ವಿವರಗಳನ್ನು ನಂತರ ಪ್ರಕಟಿಸಲಾಗುವುದು.

ಆದ್ದರಿಂದ ದಾನಿಗಳು ಮಾನವೀಯ ಕಾರ್ಯಕ್ಕೆ ಮುಂದಾಗಬೇಕೆಂದು ಕೋರುತ್ತೇವೆ. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ಗೆ ದೇಣಿಗೆ ಕೊಡುವವರಿಗೆ 80 ಜ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಲಭ್ಯವಿದ್ದು ಆಸಕ್ತರು ಅದರ ಅನುಕೂಲತೆ ಪಡೆಯಬಹುದು

ಬಸವ ಧರ್ಮಪೀಠದ ಅಂಗ ಸಂಸ್ಥೆಗಳಿಂದ ಅನಾಥಾಲಯಗಳ ಪ್ರಾರಂಭ

ಹೆಚ್ಚುತ್ತಿರುವ ಸಾಮಾಜಿಕ ಅಶಾಂತಿ, ಆರ್ಥಿಕ ಸಂಕಷ್ಟ ಮುಂತಾದವುಗಳನ್ನು ಗಮನದಲ್ಲಿ ಇರಿಸಿಕೊಂಡು ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಆಸರೆ-ವಿದ್ಯಾಭ್ಯಾಸ ಒದಗಿಸುವ ಉದಾತ್ತ ಉದ್ದೇಶದಿಂದ ಅನಾಥಾಲಯಗಳನ್ನು ನಡೆಸಲಾಗುತ್ತಿದೆ.

1. ಬಸವ ಗಂಗೋತ್ರಿ, ಅನಾಥಾಲಯ, ಕುಂಬಳಗೋಡು ಗ್ರಾಮ, ಬೆಂಗಳೂರು-ಮೈಸೂರು ಹೆದ್ದಾರಿ 20ನೇ ಕಿಲೋಮೀಟರ್, ಬೆಂಗಳೂರು ದಕ್ಷಿಣ-ತಾ, ದೂರವಾಣಿ : 28481804/ 9845399698, ವ್ಯವಸ್ಥಾಪಕರು : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ.
2. ಅಕ್ಕನಾಗಲಾಂಬಿಕಾ ಅನಾಥಾಲಯ, ಬಸವ ಮಹಾಮನೆ, ಮುಖ್ಯ ರಸ್ತೆ

ಬಸವ ಕಲ್ಯಾಣ-585327, ದೂರವಾಣಿ : 08481-251921/252856,
ವ್ಯವಸ್ಥಾಪಕರು : ಪೂಜ್ಯ ಶ್ರೀ ಮಾತೆ ನೀಲಗಂಗಾದೇವಿ.

3. ಅಕ್ಕಮಹಾದೇವಿ ಆಶ್ರಮದ ಅನಾಥಾಲಯ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಉಳವಿ ರಸ್ತೆ ರೇಲ್ವೆ ಗೇಟ್ ಬಳಿ, ಧಾರವಾಡ-580003, ದೂರವಾಣಿ :0836-2773005/5577965,
ವ್ಯವಸ್ಥಾಪಕರು : ಪೂಜ್ಯ ಶ್ರೀ ಮಾತೆ ಸತ್ಯಾದೇವಿ.

4. ಬಸವ ಕೃಪಾ ಅನಾಥಾಲಯ, ಮಹಾಮನೆ, ಮಹಾಮಠ, ಕೂಡಲ ಸಂಗಮ-587115, ತಾ-ಹುನಗುಂದ, ಜಿಲ್ಲೆ-ಬಾಗಲಕೋಟೆ, ದೂರವಾಣಿ : 08351-268038/268338
ವ್ಯವಸ್ಥಾಪಕರು : ಸೋದರಿ ರಾಜೇಶ್ವರಿ, ಬಸವ ಧರ್ಮಪೀಠ.

ಜೂನ್ 1 ರಿಂದ ಪ್ರಾರಂಭ ; ಅರ್ಜಿ ಸಲ್ಲಿಸಲು ಮೇ 25 ಕಡೆಯ ದಿನಾಂಕ.ಜೂನ್ 15

ಒಂದನೆಯ ತರಗತಿಯಿಂದ 10ನೆಯ (ಎಸ್.ಎಸ್.ಎಲ್.ಸಿ) ತರಗತಿಯವರೆಗೆ ; ಬಾಲಕ-ಬಾಲಕಿಯರು ಉಭಯತರಿಗೂ ಪ್ರವೇಶವಿದೆ. ಊಟ, ವಸತಿ, ಶಿಕ್ಷಣ ಉಚಿತ. ತಾಯಿ ತಂದೆ ಉಭಯತರನ್ನು ಕಳೆದುಕೊಂಡವರು ; ಇಬ್ಬರಲ್ಲಿ ಒಬ್ಬರನ್ನು ಹೊಂದಿದವರು. ಉಭಯತರು ಇದ್ದರೂ ಆರ್ಥಿಕವಾಗಿ ತುಂಬಾ ದುರ್ಬಲರಾದವರು ಇವರುಗಳಿಗೆ ಪ್ರವೇಶ ಲಭ್ಯವಿರುತ್ತದೆ. ಮೇಲೆ ಸೂಚಿಸಿರುವ ನಾಲ್ಕು ಸ್ಥಳಗಳಿಗೆ ಸಮೀಪದಲ್ಲಿರುವ ಜಿಲ್ಲೆ, ಊರುಗಳವರು ಆಯಾ ಸ್ಥಳಗಳ ಸಂಸ್ಥೆಗೆ ಅರ್ಜಿ ಸಲ್ಲಿಸಬಹುದು. ಸೀಮಿತ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವವದರಿಂದ ಲಭ್ಯವಿರುವ ಸೀಟು ಸಂಖ್ಯೆಯ ಆಧಾರದ ಮೇಲೆ ಸಂಸ್ಥೆಗೆ ಅನುಕೂಲವೆನಿಸಿದ ಸ್ಥಳದಲ್ಲಿ ವಿದ್ಯಾರ್ಥಿಯನ್ನು ಇರಿಸಬಹುದು.

ಕೇಂದ್ರ ಕಾರ್ಯಾಲಯದ ವಿಳಾಸ : ಬಸವ ಮಂಟಪ, 2035, 20ನೆಯ ಮೇನ್, 2ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು-560010, ದೂರವಾಣಿ : 080-23325335/23322790.

ಸದ್ಗುರು ಲಿಂಗಾನಂದರ ಉಪಕಾರ

(1995ರ ಜೂನ್ 30ರಂದು ಲಿಂಗೈಕ್ಯರಾದ ಗುರುಗಳ ಸಂಸ್ಮರಣೆಯ ನಿಮಿತ್ತ)

1. ಸದ್ಗುರು ಲಿಂಗಾನಂದರೆ ನಿಮ್ಮ ಉಪಕಾರವನು
ಮರೆಯಲೆಂತು ನಾವು ?
ಬದುಕು ಬರಡಾಗದಿರಲು
ಬಸವ ಮಾರ್ಗವೆ ಭವ್ಯ ದಿವ್ಯವೆಂದ

2. ಬಸವನೆಂದರೆ ಎತ್ತು ಎಂಬ ಜನಕೆ,
ಗುರು ಬಸವರ ವಿಶ್ವರೂಪ ದರ್ಶಿಸಿ
ಲಿಂಗಾಯತ ಕರ್ತೃವೇ ವಿಶ್ವಗುರು ಬಸವರೆಂದ

3. ಲಿಂಗಾಯತವು ಜಾತಿ, ಮತ, ಪಂಥವಲ್ಲ
ಎಲ್ಲರೂ ನಮ್ಮವರೆಂಬ
ವಿಶ್ವ ಧರ್ಮವೆ ಅದು ಎಂದ,

4. ಧರ್ಮವೆಂದರೇನು ? ದೇವರೆಂದರಾರು ?
ಮಾನವನ ಗೊತ್ತು ಗುರಿಗಳೇನು
ಎಂದು ತಿಳಿಹೇಳಿಧ

5. ದೇವರೆಂದರೆ - ಮನುಷ್ಯ, ಪ್ರಾಣಿ, ಪಕ್ಷಿಯಲ್ಲ
ಜಗದಗಲವಾದ ವಿಶ್ವ ವ್ಯಾಪಿ ನಿತ್ಯ, ಸತ್ಯ
ಪರಂಜ್ಯೋತಿ ಎಂಬ
ಗುರು ಬಸವರ ತತ್ತ್ವವ ಸಾರಿದ

6. ನಿರಾಕಾರ ದೇವನಿಗೆ ಆಕಾರವೆ ಇಷ್ಟಲಿಂಗ ಎಂಬ
ಗುರು ಬಸವ ಸಂಶೋಧನೆಯ ಸಾರವೆ
ಮರೆಯದೆ ಅದನು ಧರಿಸಿ, ನಿತ್ಯ ಪೂಜಿಸಿರೆಂದ

7. ಬಸವ ಧರ್ಮ ಸಂಹಿತೆ
ತಾಯಿ ವಚನಾಂಬಿಕೆ
ಎಂದು ನವನೀತ ಪರಿಚಯಿಸಿದ.

8. ಜಂಗಮವು ಜಾತಿಯಲ್ಲ ಎಂದು
ಭವಿಯು -
ಭಕ್ತ, ಜಂಗಮ ನಾಗಬಲ್ಲ ಎಂದು ತೋರಿಸಿದ

9. ಧರ್ಮದ ಧ್ಯೆಯೋದ್ದೇಶಗಳು
ಸಂಸ್ಕಾರ , ಸಂಘಟನೆ, ಸಮಾನತೆ, ಸಹೋದರತೆ
ನವ ಕಲ್ಯಾಣ ರಾಜ್ಯ ನಿರ್ಮಾಣವೆಂದ.

10. ಬಸವನೆಂಬ ನಾಮವು
ನಿತ್ಯ, ಸತ್ಯ ಮಾಡಿದ ಕೀರ್ತಿಗೆ
ಭಾಜನವಾದ, ಬಸವ ಧರ್ಮ ಪುನರುತ್ಥಾನಗೈದ

-ಕೆ.ಬಸವರಾಜ, LIC ಬೆಳಗಾವಿ

ಮಾತೆಯನ್ನು ಕುರಿತು

ಹತ್ತು ಹಡೆಯೋದಕ್ಕಿಂತ ಮುತ್ತೊಂದ
ಹಡೆಯೆಂದು ಹೇಳೋರು ನಮ್ಮ ಹಿರಿಯೋರು
ಅಂಥ ಮುತ್ತೊಂದ್ನ ಹಡೆದಾರೆ ನೋಡು
ಬಸಪ್ಪ-ಗಂಗಮ್ಮ ಶರಣರು ॥ಪ॥
ಆ ಮುತ್ತು ಕಪ್ಪೆ ಚಿಪ್ಪಲಿದ್ದದ್ದನ್ನು ಕಂಡೋರು
ವೀರ-ವೀರಾಗಿ ಲಿಂಗಾನಂದರು।
ದೀಕ್ಷಾ ಸಂಸ್ಕಾರದಿ ಆ ಮುತ್ತನ್ನು
ದೇವನ ಎಡೆಗೆ ಸಲಿಸಿದರು ॥
ಗುರುವಿನ ಇಚ್ಛೆಯ ಅರಿತ ಮಾತಾಜಿ
ಸರ್ವಾಂಗದಲ್ಲೂ ಬಸವನ ತುಂಬಿಕೊಂಡರು।
ಬಸವಣ್ಣನ ಆದರ್ಶ ತಾವ್ ಅರಿತು
ಬಸವಾತ್ಮಜೆಯೇ ಆದರು ॥
ತನ್ನಂತೆ ನೂರಾರು ಜ್ಯೋತಿಯ ಬೆಳಗಿಸಿ
ಸಾರ್ಥಕ ಜನ್ಮ ಪಡೆದಿಹರು।
ಎಲ್ಲರು ಪರಮನ ಸೇರಲಿ ಎಂಬ
ಉದಾತ್ತ ಧ್ಯೇಯ ಹೊಂದಿಹರು ॥
ಕೂಡಲ ಸಂಗಮ ಶರಣ ಮೇಳದ
ರೂಹಾರಿ ಮಾತಾಜಿ ಎನಿಸಿದರು।
ನಾಡಿನ ಮೂಲೆ ಮೂಲೆಯಿಂದ
ಶರಣರು ಧಾವಿಸಿ ಬಂದಿಹರು ॥
ಬಸವ ಕಲ್ಯಾಣದಿ ಕಲ್ಯಾಣ ಪರ್ವವ
ನಡೆಸಲು ಶ್ರಮ ವಹಿಸಿದರು।
ಕಲ್ಯಾಣ ಪರ್ವದ ಯಶಸ್ಸಿಗಾಗಿ
ಹಗಲು ರಾತ್ರಿ ದುಡಿದಿಹರು ॥
ಜನ ಬದುಕಲಿ ಜಗ ಬದುಕಲಿ ಎಂದು
ತತ್ವ ಪ್ರಸಾರವ ಮಾಡಿದರು।
ಯಾರೇನೆಂದರು ಓರಂತಿರುತ
ಗುರುವಿನ ಧ್ಯೇಯದಿ ನಡೆದಿಹರು ॥
ಇಂಥ ಗುರುಗಳ ಕಾಲದಲ್ಲಿ ಬಂದಂಥ
ನಾವೆಲ್ಲ ಎಷ್ಟೊಂದು ಪುಣ್ಯವಂತರು।
ಬೇಡೋಣ ದೇವನಲ್ಲಿ ಆಗಲೆಂದು
ಮಾತಾಜಿ ಆಯುಷ್ಯ ಆರೋಗ್ಯವಂತರು ॥

-ಶರಣ ವಿಜಯ ರಾಜು, ರಾ.ಬ.ದಳ,ಭದ್ರಾವತಿ.

ನೀತಿ

ಪ್ರತಿ ಕಥೆ, ಕವನದಲ್ಲಿರಬೇಕು ಒಂದು ನೀತಿ
ಸಾಮಾನ್ಯ ಓದುಗನಿಗೂ ಅರ್ಥವಾಗುವ ರೀತಿ
ಸಾಹಿತ್ಯ ಆಗಬಾರದು ಮನರಂಜನೆಗೆ ಸೀಮಿತ
ವಚನ ಸಾಹಿತ್ಯದಂತೆ
ಹಾಸು ಹೊಕ್ಕಾಗಬೇಕು ಅನವರತ,

-ವಿ.ನಿರ್ಮಲಾ ಪ್ರಭಾಕರ

ಎಂತಿರಬೇಕು !
ಬಸವ ಧರ್ಮೀಯರಂತಿರಬೇಕು

ಎಂತಿರಬೇಕು ಎಂತಿರಬೇಕು
ಬಸವ ಧರ್ಮೀಯರು ಎಂತಿರಬೇಕು
ನಮ್ಮ ರಾಷ್ಟ್ರೀಯ ಬಸವ ದಳದವರಂತಿರಬೇಕು ॥
ಬಸವಣ್ಣ ಧರ್ಮಗುರುವೆಂದು ನಂಬಿರಬೇಕು
ವಚನ ಸಾಹಿತ್ಯ ಧರ್ಮ ಸಂಹಿತೆಯೆಂದು
ಅರಿದಿರಬೇಕು
ಇಷ್ಟಲಿಂಗದಲ್ಲಿ ನಿಷ್ಠೆ ಹೊಂದಿರಬೇಕು
ನೊಸಲಲ್ಲಿ ಭಸ್ಮದ ಬೆರಳಚ್ಚು ಮೂಡಿರಬೇಕು॥
ಇವನಾರವ ಇವನಾರವ ಎನ್ನದಿರಬೇಕು
ಇವನಮ್ಮವ ಇವನಮ್ಮವ ಎಂಬಂತಿರಬೇಕು
ಮೇಲು ಕೀಳೆಂಬ ಭಾವನೆ ತೊರೆದಿರಬೇಕು
ಜಾತಿ ಭೇದದ ಸೋಂಕು ತಗುಲದಿರಬೇಕು ॥
ಬಡವ ಬಲ್ಲಿದರೆಂಬ ಭೇದ ಅಳಿದಿರಬೇಕು
ಹೆಣ್ಣು ಗಂಡೆಂಬ ತಾರತಮ್ಯ ಇರದಿರಬೇಕು
ಮನದಲ್ಲಿ ಪ್ರೀತಿ ಪ್ರೇಮ ತುಂಬಿರಬೇಕು
ನಡೆ ನುಡಿಯಲ್ಲಿ ಭೇದ ಇರದಿರಬೇಕು॥
ಸತ್ಯ ಶುದ್ಧ ಕಾಯಕ ಮಾಡಲೇಬೇಕು
ಗುರು ಜಂಗಮರಿಗೆ ದಾಸೋಹ ನೀಡುತಲಿರಬೇಕು
ಬಸವ ಧರ್ಮಪೀಠದಲ್ಲಿ ನಿಷ್ಠೆ ಹೊಂದಿರಬೇಕು
ಬಸವಾತ್ಮಜೆಯ ಆದೇಶ ಪಾಲಿಸಲೇಬೇಕು॥
ಬಸವ ತತ್ವದಂತೆ ಆಚರಣೆ ಇರಬೇಕು
ಶರಣ ಮೇಳಕ್ಕಾಗಿ ಶ್ರಮಿಸಲೇಬೇಕು
ನವಕಲ್ಯಾಣ ನಿರ್ಮಾಣಕ್ಕೆ ಸಹಕರಿಸಬೇಕು
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವು
ಮೆಚ್ಚುವಂತಿರಬೇಕು ॥

- ಸರೋಜಮ್ಮ ನಾಗರಾಜು
ರಾ.ಬ.ದಳ, ಮೈಸೂರ್

ನಿನ್ನ ಚೈತನ್ಯ

ಬದುಕು ಬರಡೆಂದು ಕೊರಗದಿರು ಮನವೆ
ಕಲೆಯ ಕಣ್ಣರಲು ಬದುಕೆಲ್ಲ ನಲಿವೆ
ದಿನದ ದುಡಿತದಲಿ ಮನದ ಮಿಡಿತದಲಿ
ಮೂಡುವ ದಿನಕರ ನಿನ್ನ ಚೈತನ್ಯವಾಗಲಿ
ಕಷ್ಟದ ಕುಲುಮೆಯಲಿ ನಷ್ಟದ ಬದುಕಿನಲಿ
ಇಷ್ಟ ದೇವರ ಧ್ಯಾನ ನಿನ್ನ ಚೈತನ್ಯವಾಗಲಿ

★ ವಿ. ನಿರ್ಮಲಾ ಪ್ರಭಾಕರ, ಗನ್ನಾಯಕನಹಳ್ಳಿ

ಯಶಸ್ವಿ ನಾಲ್ಕನೆಯ ಕಲ್ಯಾಣ ಪರ್ವ

ವಿಶ್ವದಾದ್ಯಂತ ಬಸವ ಧರ್ಮ ಪ್ರಚಾರವೇ ಕಲ್ಯಾಣ ಪರ್ವದ ಉದ್ದೇಶ

ಬಸವ ಕಲ್ಯಾಣ :- ಇಂದು ನಮ್ಮ ಭಾರತದ ಸಂವಿಧಾನವು ಹೇಳುವ ಎಲ್ಲಾ ವಿಚಾರಗಳು 12ನೇ ಶತಮಾನದಲ್ಲಿ ಶ್ರೀ ಗುರು ಬಸವಣ್ಣನವರು ಪ್ರತಿಪಾದಿಸಿದ್ದು. ಭಾರತದೇಶದಲ್ಲಿ ಸಮಾನತೆಯ ಧ್ವಜವನ್ನು ಹಾರಿಸಿದ ಮೊದಲ ಪ್ರವಾದಿ ಬಸವಣ್ಣನವರು. ಒಂದೊಂದು ಕ್ಷೇತ್ರದಲ್ಲಿ ಒಬ್ಬೊಬ್ಬ ಮಹಾತ್ಮರು ಆಗಿ ಹೋದರೆ ಈ ಶರಣ ಭೂಮಿಯಲ್ಲಿ 770 ಅಮರಗಣಂಗಳು ಆಗಿ ಹೋಗಿದ್ದಾರೆ. ಏಕ ಕಾಲಕ್ಕೆ ಇಷ್ಟೊಂದು ಜನ ಮಹಾತ್ಮರನ್ನು ತಯಾರಿಸಿದ ಮಹಾಗುರು ಬಸವಣ್ಣನವರು 36 ವರ್ಷಗಳ ಕಾಲ ನಡೆಸಿದ ಪವಿತ್ರ ಭೂಮಿ ಬಸವ ಕಲ್ಯಾಣ. ವಿಶ್ವದಾದ್ಯಂತ ಬಸವ ಧರ್ಮವನ್ನು ಪ್ರಚಾರಗೊಳಿಸುವದು ಈ ಕಲ್ಯಾಣ ಪರ್ವದ ಮುಖ್ಯ ಉದ್ದೇಶವಾಗಿದೆ ಎಂದು ಬಸವಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಅವರು ಬೀದರ್ ಜಿಲ್ಲೆಯ ಬಸವಕಲ್ಯಾಣದ ಬಸವ ಮಹಾಮನೆಯ ಆವರಣದಲ್ಲಿ ಈಚೆಗೆ ಸಂಪನ್ನಗೊಂಡ ಐತಿಹಾಸಿಕ 4ನೇ ಕಲ್ಯಾಣ ಪರ್ವದ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಪ್ರಾಸ್ತಾವಿಕ ಆಶೀರ್ವಚನ ನೀಡುತ್ತಿದ್ದರು.

ಮಾನವರೆಲ್ಲರೂ ಒಂದೆ, ದೇವನೊಬ್ಬನೇ ತಂದೆ, ಎಂಬ ಸಂದೇಶವನ್ನು ಇಂದು ಜಗತ್ತಿಗೆ ನೀಡಬೇಕಾಗಿದೆ. ಕಲ್ಯಾಣದ ಹಬ್ಬ(ಪರ್ವ)ದಲ್ಲಿ ಭಾಗವಹಿಸುವದು ತಮ್ಮ ಆದ್ಯ ಕರ್ತವ್ಯವೆಂದು ಬಸವ ಭಕ್ತರೆಲ್ಲರೂ ಭಾಗವಹಿಸಬೇಕು ಎಂದರಲ್ಲದೆ ಪ್ರತಿ ವರ್ಷವೂ ಕಲ್ಯಾಣ ಪರ್ವದಲ್ಲಿ ಭಾಗವಹಿಸುವಂತೆ ಬಸವ ಭಕ್ತರಿಗೆ ಕಳಕಳಿಯ ಕರೆ ಕೊಟ್ಟರು.

ವಿಶ್ವಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಸಂಸ್ಥಾಪರು ವಚನ ಸಾಹಿತ್ಯವೇ ಲಿಂಗಾಯತರ ಧರ್ಮ ಸಂಹಿತೆ ಈ ಬಗ್ಗೆ ಐತಿಹಾಸಿಕ ಸಾಕ್ಷಾಧಾರ ದಾಖಲೆಗಳಿವೆ, ನಾವು ಇದನ್ನು ನಂಬಿದ್ದೇವೆ. ಇನ್ನು ಮುಂದೆ ಯಾರೂ ವಿಚಲಿತಗೊಳಿಸಲು ಸಾಧ್ಯವಿಲ್ಲ ಎಂದು ಪರಮ ಪೂಜ್ಯ ಮಾತಾಜಿಯವರು ದೃಢವಾಗಿ ಪ್ರತಿಪಾದಿಸಿದರು.

ಜ್ಯೋತಿ ಪ್ರಜ್ವಲನಗೊಳಿಸುವುದರ ಮೂಲಕ ಪರ್ವವನ್ನು ಉದ್ಘಾಟಿಸಿದ ಅಮೇರಿಕಾದ ಶರಣೆ ಯೋಗಿಶ್ವರಿಯವರು ಮಾತನಾಡಿ "12ನೇ ಶತಮಾನದಲ್ಲಿ ವಿಶ್ವಗುರು ಬಸವೇಶ್ವರ ಹಾಗೂ ಅವರ ಸಮಕಾಲೀನ ಶರಣರು ತಮ್ಮ ಪರುಷಪಾದಗಳಿಂದ ಮೆಟ್ಟಿ ಈ ನೆಲವನ್ನು ದೈವೀಕರಿಸಿದ್ದಾರೆ, ಕಲ್ಯಾಣ ಕ್ರಾಂತಿಯ ನಂತರ 800 ವರ್ಷಗಳವರೆಗೆ ನಮಗಿದು ಗೊತ್ತಾಗಲಿಲ್ಲ. ಈಗ ಪರಮಪೂಜ್ಯ ಲಿಂಗೈಕ್ಯ ಲಿಂಗಾನಂದ ಮಹಾಸ್ವಾಮೀಜಿಯವರು ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ಗೊತ್ತಾಗಿದೆ, ತೋರಿಸಿಕೊಟ್ಟಿದ್ದಾರೆ. ಪೂಜ್ಯ ಮಾತಾಜಿಯವರ ಮಾರ್ಗದರ್ಶನದಲ್ಲಿ ನಡೆದು ಮುಕ್ತಾತ್ಮರಾಗೋಣ" ಎಂದು ಕರೆಕೊಟ್ಟರು.

ಬಸವ ಕಲ್ಯಾಣದ ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಚರಮೂರ್ತಿಗಳಾದ ಚನ್ನಬಸವಾನಂದ ಸ್ವಾಮೀಜಿ, ಸಿದ್ಧರಾಮೇಶ್ವರ ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ, ವಿಧಾನ ಪರಿಷತ್ ಮಾಜಿ ಉಪಸಭಾಪತಿ ಡೇವಿಡ್ ಸಿಮೇಯೋನ್ ದಾಲ್ ಮಿಲ್ ಸಂಘದ ಅಧ್ಯಕ್ಷ ಬಿ.ಜಿ.ಪಾಟೀಲ್ ಸೇರಿದಂತೆ ವಿವಿಧ ಗಣ್ಯರು ಪಾಲ್ಗೊಂಡಿರು.

ವಿಶ್ವ ಕಾಯಕದಿನ-ಶರಣರ ಸ್ಮರಣೆ

ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಜರುಗಿದ ಸಮಾನತೆಯ ಕ್ರಾಂತಿಯಲ್ಲಿ ಭಾಗಿಗಳಾದ ಎಲ್ಲಾ ಆದಿ ಶರಣರ ಚೇತನಗಳನ್ನು ಹೃತ್ಪೂರ್ವಕವಾಗಿ ಸ್ಮರಿಸಿಕೊಂಡು ಆ ಚೇತನಗಳನ್ನೆಲ್ಲ ಕಲ್ಯಾಣಕ್ಕೆ ಆಹ್ವಾನಿಸಿ ದೈವೀ ಬೆಳಕನ್ನು ಮತ್ತೊಮ್ಮೆ ಎಲ್ಲೆಡೆ ಪಸರಿಸುವುದು ಶರಣವಂದನೆ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಬಸವ ಧರ್ಮಪೀಠಾಧ್ಯಕ್ಷೆ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಬಸವಕಲ್ಯಾಣದ ಬಸವ ಮಹಾಮನೆಯ ಆವರಣದಲ್ಲಿ ಜರುಗಿದ ಐತಿಹಾಸಿಕ 4ನೆಯ ಕಲ್ಯಾಣ ಪರ್ವದ ಅಂಗವಾಗಿ ಏರ್ಪಟ್ಟ 2ನೆಯ ದಿವಸದ ಶರಣವಂದನೆ ಕಾರ್ಯಕ್ರಮದ ದಿವ್ಯ ಸನ್ನಿಧಿ ವಹಿಸಿ ಆಶೀರ್ವಚನ ನೀಡಿದ ಪೂಜ್ಯ ಮಾತಾಜಿಯವರು ಬಸವ ಭಕ್ತರು ಜಗತ್ತಿನ ಯಾವುದೇ ಭಾಗದಲ್ಲಿದ್ದರೂ ಕೂಡಲ ಸಂಗಮದ ಶರಣ ಮೇಳ ಮತ್ತು ಕಲ್ಯಾಣ ಪರ್ವದಲ್ಲಿ ಭಾಗವಹಿಸುವುದು ತಮ್ಮ ಕರ್ತವ್ಯವೆಂದು ಭಾವಿಸಿ ಪಾಲ್ಗೊಳ್ಳಬೇಕೆಂದು ಕರೆ ಕೊಟ್ಟರು.

ಸಮ್ಮುಖ ವಹಿಸಿದ್ದ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಮಾತನಾಡಿ ಮೂರು ಕಲ್ಯಾಣ ಪರ್ವಗಳು ಆಗುವವರೆಗೆ ಕೆಲವು ಜಾತಿ ವಾದಿಗಳು, ಪುರೋಹಿತಶಾಹಿಗಳು ಎಡುರು ತೊಡರುಗಳನ್ನು ಒಡ್ಡಿದವರು ಅಡ್ಡಿ ಆತಂಕ ನೀಡಿದರು. ಆದರೆ ಶ್ರೀ ಗುರು ಬಸವೇಶ್ವರರ ದಿವ್ಯ ಅನುಗ್ರಹದಿಂದ ಕಾರ್ಮೋಡ ಸರಿದು ಬಸವ ಭಾಸ್ಕರನು ತನ್ನ ಪ್ರತಿಭೆಯನ್ನು ಬೀರುತ್ತಿದ್ದಾನೆ. ಕಲ್ಯಾಣ ಪರ್ವವನ್ನು ತಡೆಯಲು ಯಾವ ದುಷ್ಟ ಶಕ್ತಿಯಿಂದಲೂ ಸಾಧ್ಯವಿಲ್ಲ. ಶ್ರೀಗುರು ಬಸವೇಶ್ವರರ ತತ್ವದ ಜ್ಯೋತಿಯನ್ನು ಪೂಜ್ಯ ಮಾತಾಜಿಯವರು ಇಂದು ಬಸವ ಕಲ್ಯಾಣಕ್ಕೆ ತಂದಿದ್ದಾರೆ. ಲಕ್ಷಾಂತರ ಶರಣರು ಈ ಕಲ್ಯಾಣ ಪರ್ವದಲ್ಲಿ ಭಾಗವಹಿಸಿದ್ದು ಆದಿ ಶ್ರೀ ಗುರು ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ಸಂಕಲ್ಪವಾಗಿದೆ ಎಂದರು.

ಲಭ್ಯವಿರುವ 468 ಶರಣರ ಹೆಸರುಗಳನ್ನು ಸೇರಿಸಿ ಶರಣು ಶರಣಾರ್ಥಿ ಹೇಳುವ ಕಾರ್ಯಕ್ರಮ ಅತ್ಯಂತ ವಿಶೇಷವಾಗಿತ್ತು. ಪೂಜ್ಯ ಮಾತಾಜಿ, ಪೂಜ್ಯ ಗಂಗಾಮಾತಾಜಿ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ ಅವರುಗಳು ಆದಿಶರಣರ ಹೆಸರುಗಳನ್ನು ಸ್ಮರಿಸುತ್ತಿದ್ದಂತೆ ಸಮಾವೇಶಗೊಂಡಿದ್ದ ಲಕ್ಷಾಂತರ ಶರಣ-ಶರಣೆಯರು ಶರಣು ಶರಣಾರ್ಥಿ ಹೇಳಿದುದು ರೋಮಾಂಚಕಾರಿಯಾಗಿತ್ತು.

ವೀರಗಣಾಚಾರಿ ಮಡಿವಾಳ ಮಾಚಿದೇವರ ಜಯಂತಿ

ಯಜ್ಞಯಾಗಾದಿಗಳನ್ನು ಪ್ರೋತ್ಸಾಹಿಸುವ ಅಗ್ನಿಗೆ ಅಪ್ಯಾಯನ ಪ್ರಸಾದವ ಹಾಕುವ ಚಾತುರ್ವರ್ಣವನ್ನು ಒಪ್ಪುವ, ಸಮಯದಲ್ಲಿ ಶುಭಾಅಶುಭ ಎಂದು ವಿಂಗಡಿಸುವ ಕುಲಶ್ರೇಷ್ಟತೆಯನ್ನು ಮನ್ನಿಸುವ ವೈದಿಕ ಆಚರಣೆಗಳಿಂದೊಡಗೂಡಿದ 'ಹಿಂದೂ' ನಮ್ಮದಲ್ಲವೇಅಲ್ಲ, ನಾವೆಲ್ಲರೂ ಲಿಂಗಾಯತರು, ಹಿಂದೂಗಳಲ್ಲ. ಪ್ರಗತಿಪರ ವೈಚಾರಿಕ ಚಿಂತನೆಗಳನ್ನು ಹೊಂದಿದ ಲಿಂಗಾಯತ ಧರ್ಮವು ಸ್ವತಂತ್ರ್ಯ ಪರಿಪೂರ್ಣವಾದ ಧರ್ಮವಾಗಿದೆ ಎಂದು ಕೂಡಲ ಸಂಗಮ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸ್ಪಷ್ಟವಾಗಿ ಪ್ರತಿಪಾದಿಸಿದರು.

ಐತಿಹಾಸಿಕ ಕಲ್ಯಾಣ ಪರ್ವ ಕಾರ್ಯಕ್ರಮದ 2ನೇಯ ದಿನದ ಸಾಯಂಕಾಲ ಏರ್ಪಟ್ಟಿದ್ದ ವೀರಗಣಾಚಾರಿ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡುತ್ತಿದ್ದರು.

ದೇವನ ಪಿತೃತ್ವ-ಮಾನವರ ಭ್ರಾತೃತ್ವ ಸಂದೇಶ ಸಾರುವ ಲಿಂಗಾಯತ ಧರ್ಮವು ವಿಶ್ವಕ್ಕೆ ಶ್ರೇಷ್ಠ ಕೊಡುಗೆಯಾಗಿದೆ. ಈ ಧರ್ಮವು ಪುರುಷಸೂಕ್ತವನ್ನು ಮನ್ನಿಸುವುದಿಲ್ಲಾ ಯಜ್ಞ-ಯಾಗಾದಿಗಳನ್ನು ವಿರೋಧಿಸುತ್ತದೆ .ಚಾತುವರ್ಣ ಪದ್ದತಿಯನ್ನು ನಿರಾಕರಿಸುತ್ತದೆ. ಎಲ್ಲ ಸಮಯವೂ ಶ್ರೇಷ್ಠವೆ ಎಂದು ಹೇಳುತ್ತದೆ. ಪಶುಬಲಿ ಮರಗಿಡ ಸುತ್ತುವದು ಹುತ್ತ ಪೂಜೆಯಂತಹ ಆಚರಣೆಗಳಿಗೆ ನಮ್ಮ ಲಿಂಗಾಯತ ಧರ್ಮದಲ್ಲಿ ಸ್ಥಾನವಿಲ್ಲ ಎಂದೂ ನುಡಿದ ಮಾತೆ ಮಹಾದೇವಿಯವರು ಲಿಂಗಾಯತ ಧರ್ಮವು ಹಿಂದು ಧರ್ಮದೊಡನೆ ತಾತ್ವಿಕವಾಗಿ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲಾ ಎಂದು ಮತ್ತೊಮ್ಮೆ ಸ್ಪಷ್ಟ ಪಡಿಸಿದರು. ನಾವು ಹಾಗಂತ ಸಂಸ್ಕೃತಿಯ ವಿರೋಧಿಗಳಲ್ಲ. ಬಟ್ಟೆ ಬರೆ ನಡೆ-ನುಡಿಗಳಲ್ಲಿ ಭಾರತೀಯ ಸಂಸ್ಕೃತಿ ಹಾಸುಹೊಕ್ಕಿದೆ ಎಂದೂ ಮಾತಾಜಿ ನುಡಿದರು.

ಹಿಂದೂ ಸಂಸ್ಕೃತಿಯಲ್ಲಿ ಹೊರ ಹೋಗಲು ಆಸ್ಪದವಿದೆಯೇ ಹೊರತು ಒಳಬರಲು ಆಸ್ಪದವಿರುವುದಿಲ್ಲ. ಇದು ಕಂದಾಚಾರಗಳಿಂದ ಜಡಗಟ್ಟಿ ಹೋಗಿದೆ. ಇಂತಹ ವ್ಯವಸ್ಥೆಯ ಮಡುವಿನಿಂದ ಪಾರಾಗಿ 770 ಜನ ಅಮರ ಗಣಂಗಳು ನಮಗೆ 'ಲಿಂಗಾಯತ' ಎಂಬ ಸರ್ವಾಂಗ ಸುಂದರ ಪರಿಪೂರ್ಣ ಧರ್ಮವನ್ನು ರೂಪಿಸಿಕೊಟ್ಟದ್ದಾರೆ-ಇವನಾರವ-ಎನ್ನದೇ ಇವ ನಮ್ಮವ ಎಂದು ಸರ್ವರನ್ನೂ ಇಂಬಿಟ್ಟುಕೊಳ್ಳುವ ಈ ಧರ್ಮವೂ ಸಹಿತ ಸಿಖ್, ಬೌದ್ಧ ಜೈನ ಧರ್ಮಗಳಂತೆ ಸ್ವತಂತ್ರ ಧರ್ಮವೆಂದು ಮಾನ್ಯತೆ ಪಡೆಯಬೇಕು, 'ಸಂವಿಧಾನಾತ್ಮಕ ಮಾನ್ಯತೆ ದೊರೆಯಲೇಬೇಕು' ಆ ದಿಶೆಯಲ್ಲಿ ನಾವಿಂದು ಹಗಲಿರುಳೂ ದುಡಿಯಬೇಕಾಗಿದೆ. ಈ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ ದೊರೆತಾಗ ಇಡೀ ಸಮಾಜ ಧೈರ್ಯದಿಂದ ತಲೆಯತ್ತಿ ಓಡಾಡಬಹುದು. ಅದಕ್ಕೆ ನಾವು ನೀವೆಲ್ಲ ಶ್ರದ್ಧೆಯಿಂದ ದುಡಿಯೋಣ ಎಂದು ಪೂಜ್ಯ ಶ್ರೀ ಮಾತಾಜಿಯವರು ಕರೆ ಕೊಟ್ಟರು.

ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ವಿಧಾನ ಪರಿಷತ್ ಸದಸ್ಯ ಶರಣ ವಿಠ್ಠಲ ಹೆರೂರು ಅವರು ಮಾತನಾಡಿ ಪೂಜ್ಯ ಶ್ರೀ ಮಾತಾಜಿಯವರ ಕಾರ್ಯಕ್ರಮಗಳನ್ನು ಗಮನಿಸಿದಾಗ ಅವರಿಂದ ರಾಷ್ಟ್ರ ಕಟ್ಟುವ ಕಾರ್ಯ ನಡೆಯುತ್ತಲಿದೆ. ಅವರನ್ನು ನಾವೇಕೆ 'ದೈವೀಪುರುಷರೆಂದು ಕರೆಯಬಾರದು ?ಎಂದು ಪ್ರಶ್ನಿಸಿದ ಅವರು ಕಲ್ಯಾಣಪರ್ವಕ್ಕೆ ಕರ್ನಾಟಕದ ಎಲ್ಲಾ ಭಾಗಗಳಿಂದ ಮಾತ್ರವಲ್ಲ ನೆರೆಯ ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡುಗಳಿಂದ ಲಕ್ಷಾಂತರ ಶರಣ-ಶರಣೆಯರು ಆಗಮಿಸಿದ್ದೀರಿ ನೀವೆಲ್ಲ ಅಧಿಕಾರಕ್ಕಾಗಿ, ಹಣಕ್ಕಾಗಿ ಯಾವುದೋ ರೀತಿಯ ಸಹಾಯಕ್ಕಾಗಿ ಬಂದವರಲ್ಲ, ಮಾನಸಿಕ ಶಾಂತಿಗಾಗಿ, ಮುಕ್ತಿಯ ಹಂಬಲದಿಂದ ಬಂದಿದ್ದೀರಿ-ನಿಮ್ಮನ್ನು ನೋಡಿದಾಗ ಪೂಜ್ಯ ಮಾತಾಜಿಯವರ ಘನವಾದ ವ್ಯಕ್ತಿತ್ವದ ದರ್ಶನವಾಗುತ್ತದೆ ಎಂದು ಅವರು ಹೇಳಿದರು.

ಕಲ್ಯಾಣದಲ್ಲಿ ಅಂದು ಎಲ್ಲಾ ಜಾತಿಜನಾಂಗದಿಂದ ಬಂದ ಅವರೆಲ್ಲರ ಗುರಿ ಒಂದೇ ಆಗಿತ್ತು. ಮನುಕುಲದ ಕಲ್ಯಾಣವೇ ಅವರ ಧ್ಯೇಯವಾಗಿತ್ತು. ಅವರ ವಿಚಾರಗಳು ಆಚರಣೆಗೆ ಬಂದಾಗ ನಾಡು ನಿಜವಾದ ಕಲ್ಯಾಣ ರಾಜ್ಯವಾಗುವುದು. ಇಂದು ನಮಗೆ ಕೇವಲ ಕೆಲವಾರು ಶರಣರ ವಚನಗಳು ಮಾತ್ರ ಲಭ್ಯವಿದೆ, ಬೇರೆ ಬೇರೆ ಶರಣರ ವಚನಗಳ ಬಗ್ಗೆ ಸಂಶೋಧನೆಯ ಇನ್ನೂ ನಡೆಯಬೇಕಾಗಿದೆ ಎಂದರಲ್ಲದೇ ವಚನ ಸಾಹಿತ್ಯವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಂಪೂರ್ಣ ಪ್ರಕಟಣೆಗೊಂಡಿಲ್ಲ ಎಂದು ಅಸಮಧಾನ ವ್ಯಕ್ತ ಪಡಿಸಿದರಲ್ಲದೇ ದೇಶದಲ್ಲಿನ ಅಸಮಾನತೆ ದೊಂಬಿಗಳನ್ನು ಹೊಡೆದೋಡಿಸಲು ವಚನ ಸಾಹಿತ್ಯವೇ ದಿವ್ಯ ಅಸ್ತ್ರವಾಗಿದೆ ಎಂದೂ ಅವರು ಹೇಳಿದರು.

ವಿಧಾನ ಪರಿಷತ್ ಅಧಿವೇಶನ ನಡೆದ ಸಂದರ್ಭದಲ್ಲಿ ನಿಯಮ 330ರ ಅಡಿಯಲ್ಲಿ ಸದನದಲ್ಲಿ ಮಾತನಾಡಿ ಸದಸ್ಯರೆಲ್ಲರ ಒಲವು ಗಳಿಸಿಕೊಂಡು ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ 'ಅಂಬಿಗರ ಚೌಡಯ್ಯ ಅಧ್ಯಯನ ಪೀಠ' ಸ್ಥಾಪನೆಗೆ 50 ಲಕ್ಷರೂಪಾಯಿಗಳ ಅನುಧಾನ ಮಂಜೂರು ಮಾಡಿಸಿರುವುದನ್ನು ಅವರು ಆ ಸಂಧರ್ಭದಲ್ಲಿ ಸಭೆಗೆ ತಿಳಿಯಪಡಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ 'ಬಸವಧರ್ಮ ತಿಳಿದಿದ್ದರೆ ಖಂಡಿತ ಅವರು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಿರಲಿಲ್ಲ ಬದಲಾಗಿ ಬಸವಧರ್ಮವನ್ನು ಸ್ವೀಕರಿಸುತ್ತಿದ್ದರು' ಎಂಬುದಾಗಿಯೂ ವಿಠ್ಠಲ್ ಹೆರೂರು ಅಭಿಪ್ರಾಯಪಟ್ಟರು.

''ಉಪನ್ಯಾಸ ನೀಡಿದ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ ಎಸ್.ದಿವಾಕರ್ ಜಾತಿ ಪದ್ಧತಿ ಕಂದಾಚಾರ , ಗುಡಿಸಂಸ್ಕೃತಿ ಹೋಗಲಾಡಿಸಲು ಯತ್ನಿಸಿದ ಪ್ರಥಮ ಪ್ರವಾದಿ ವಿಶ್ವಗುರು ಬಸವಣ್ಣನವರು. ಅವರು ತಮ್ಮ ಪರಿಕಲ್ಪನೆಯ ಕಲ್ಯಾಣ ರಾಜ್ಯವನ್ನು ರಚಿಸಿ ತೋರಿಸಿದರು. ಭಾರತದ ಇತಿಹಾಸದಲ್ಲಿ ಬಸವಣ್ಣನವರ ವ್ಯಕ್ತಿತ್ವಕ್ಕೆ ಸರಿಸಾಟಿ ಬಸವಣ್ಣನವರೊಬ್ಬರೇ'' ಎಂದು ಹೇಳಿದರು.

ಕಲಬುರ್ಗಿ ವಿಶ್ವ ವಿದ್ಯಾಲಯದ ಬಸವೇಶ್ವರ ಅಧ್ಯಯನ ಪೀಠದ ಶರಣೆ ನಾಗಾಬಾಯಿ ಬುಳ್ಳಾ ಅವರು 'ತರಂಗಿಣಿ' ಗ್ರಂಥದ ಬಗೆಗೆ ವಿಶ್ಲೇಶಿಸಿದರಲ್ಲದೇ ''ವೈದಿಕ-ಬೌದ್ಧ ಧರ್ಮಗಳಲ್ಲಿ ಇಲ್ಲದ ಸ್ತ್ರೀ ಸಮಾನತೆಯನ್ನು ಸ್ತ್ರೀಯರಿಗೆ ಕೊಟ್ಟವರು ಗುರು ಬಸವೇಶ್ವರರು ಎಂದು ಅಭಿಪ್ರಾಯಪಟ್ಟರು.

ಪೀಠಾರೋಹಣ-ಗುರುವಂದನೆ

ದಿ.3-5-2005ರಂದು ಬೆಳಿಗ್ಗೆ 10-30ಕ್ಕೆ ಸಭಾಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರ ಶೂನ್ಯ ಪೀಠಾರೋಹಣ 4ನೇ ವಾರ್ಷಿಕೋತ್ಸವ ಸಡಗರ ಸಂಭ್ರಮದಿಂದ ನೆರವೇರಿತು.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರು ಅಸಂಖ್ಯ ಬಸವ ಭಕ್ತರ ಹರ್ಷೋದ್ಗಾರಗಳ ಮಧ್ಯ ಶೂನ್ಯ ಪೀಠಾರೋಹಣ ಗೈದರು.

ಈ ಸಂಧರ್ಭದಲ್ಲಿ ಸಹಸ್ರಾರು ಶರಣ-ಶರಣೆಯರು ಪೂಜ್ಯ ಶ್ರೀಗಳಿಗೆ ಭಕ್ತಿ ಭಾವಗಳಿಂದ ಗುರುಕಾಣಿಕೆ ನೀಡಿ ಆಶೀರ್ವಾದ ಪಡೆದು ಕೊಂಡರು, ನಾಡಿನ ಹರಗುರು ಚರ ಮೂರ್ತಿಗಳು-ರಾಜಕೀಯ ನೇತಾರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸಮಾರಂಭದ ನೇತೃತ್ವ ವಹಿಸಿದ್ದ ಧಾರವಾಡದ ಜಗನ್ಮಾತಾ ಅಕ್ಕ ಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದೇಶ ನೀಡುತ್ತ ಜಗದ್ಗುರುಗಳ ಕಿರು ಪರಿಚಯವನ್ನು ಸಾಂಕೇತಿಕವಾಗಿ ನೀಡಿದರು.

ಸ್ತ್ರೀಯು ಪಾಪಯೋನಿಜಳು ಧರ್ಮಸಂಸ್ಕಾರಕ್ಕೆ ಅನರ್ಹಳು ಎಂಬ ಕೆಟ್ಟ ಆಚರಣೆ ನಂಬಿಕೆ ರೂಢಿಗೊಂಡಿದ್ದ ಕಾಲದಲ್ಲಿ ಸ್ತ್ರೀಯರಿಗೂ ಧರ್ಮ ಸಂಸ್ಕಾರ ನೀಡಿ ಸಮಾನತೆಯನ್ನು ಒದಗಿಸಿಕೊಟ್ಟ ಗುರು ಬಸವಣ್ಣನವರಿಗೆ ಸಮಸ್ತ ಸ್ತ್ರೀ ಸಂಕುಲವೇ ಚಿರಋಣಿಯಾಗಿರಬೇಕು. ಸ್ತ್ರೀಯರ ಉದ್ಧಾರಕ್ಕಾಗಿಯೇ 8 ವರ್ಷದ ಬಾಲಕ ಬಸವರಸ, ಮನೆಬಿಟ್ಟು ಹೊರ ಹೋಗುತ್ತಾರೆ. ವಿಶ್ವದ ಇತಿಹಾಸದಲ್ಲಿಯೇ ಸ್ತ್ರೀಯರ ಉದ್ಧಾರಕ್ಕಾಗಿ ಮಹಾತ್ಯಾಗ ಮಾಡಿದ ವ್ಯಕ್ತಿ ಯಾರಾದರೂ ಇದ್ದರೆ ಅವರು ಬಸವೇಶ್ವರರು ಮಾತ್ರ.

ನಟುವರ ಜಾತಿಯಲ್ಲಿ ಜನಿಸಿದ ಶ್ರೀಅಲ್ಲಮ ಪ್ರಭುದೇವರನ್ನು ಶೂನ್ಯ ಪೀಠದ
ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ಬಸವೇಶ್ವರರು ಜಾತಿ ನಿರ್ಮೂಲನಾ ಕ್ರಾಂತಿಗೆ ನಾಂದಿ
ಹಾಡುತ್ತಾರೆ. ಪ್ರಗತಿಪರವಾದ ಹೆಜ್ಜೆ ಇಡುವಾಗ ಆತ್ಮ ವಿಶ್ವಾಸ ಧೈರ್ಯ ಅತ್ಯಂತ ಮುಖ್ಯವಾಗಿದೆ
ಎಂದರಲ್ಲದೇ ಕಲ್ಯಾಣ ಕ್ರಾಂತಿಯ ಘಟನಾವಳಿಗಳನ್ನು ಹೃದಯ ಸ್ಪರ್ಶಿಯಾಗಿ ವಿವರಿಸಿದರು.

ಸಾಯಂಕಾಲದ ಸಮಾರಂಭದಲ್ಲಿ ಪೀಠಾರೋಹಣದ ಸಂದೇಶ ನೀಡಿದ ಪೀಠಾಧ್ಯಕ್ಷ
ಪೂಜ್ಯ ಶ್ರೀ ಅಲ್ಲಮಪ್ರಭು ಮಹಾಸ್ವಾಮಿಗಳವರು ಶ್ರೀಗುರು ಬಸವೇಶ್ವರರ ಕಾಯಕ ಮುಖಿಯಾದ
ಸಂಘಜೀವನ-ಸರಳಜೀವನವನ್ನು ಬಾಳಲು ಕಲಿಸಿದ್ದಾರೆ. ಕಾಯಕದಲ್ಲಿ ಸತತವಾಗಿ ತನ್ನನ್ನೂ ತಾನು
ಸಮರ್ಪಿಸಿಕೊಂಡ ವ್ಯಕ್ತಿಗೆ ಎಂದೆದಿಗೂ ದಾರಿದ್ರ್ಯ ಬರುವುದಿಲ್ಲ. ನಾವು ಬಡತನದಲ್ಲಿ ಬದುಕುತ್ತಿದ್ದರೆ
ಅದಕ್ಕೆ ಕಾರಣ ಬೇರೆಯವರಲ್ಲ ಬದಲಾಗಿ ನಾವೇ ಆಗಿದ್ದೇವೆ ಆದ್ದರಿಂದ ನಮ್ಮ ಧರ್ಮದ ಮೂಲ
ತತ್ತ್ವವಾದ ಕಾಯಕ ತತ್ವವನ್ನು ನಾವೆಲ್ಲ ಅಳವಡಿಸಿಕೊಂಡು ಬಸವ ಪಥದಲ್ಲಿ ಸಾಗಬೇಕು.

ಬಸವೇಶ್ವರರು ಕಲ್ಯಾಣ ರಾಜ್ಯದ ಮಹಾಮಂತ್ರಿಗಳಾಗಿದ್ದರು ಆ ಸಂಧರ್ಭದಲ್ಲಿ ಅನುಭವ
ಮಂಟಪದಲ್ಲಿ ಎಲ್ಲಾ ಸ್ತರದ ಎಲ್ಲಾ ಕಾಯಕದ ಶರಣರೂ ಪಾಲ್ಗೊಂಡಿದ್ದರು ಆದರೆ ಯಾರೊಬ್ಬರೂ
ಮಂತ್ರಿ ಬಸವೇಶ್ವರರನ್ನು ಆರ್ಥಿಕವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ಸಹಾಯ ಬೇಡಿದ
ದಾಖಲೆಗಳಿಲ್ಲ ಏಕೆಂದರೆ ಪ್ರತಿಯೊಬ್ಬರೂ ಸದಾ ಕಾಯಕದಲ್ಲಿ ನಿರತರಾಗಿರುತ್ತಿದ್ದರು.
ಸತ್ಯ-ಶುದ್ಧ-ಪ್ರಾಮಾಣಿಕ ಕಾಯಕ ಜೀವಿಗಳಾಗಿದ್ದ ಶರಣರಿಗೆ ಎಂದೂ ಯಾರನ್ನು ಬೇಡುವ ಅಗತ್ಯ
ಬರಲಿಲ್ಲ ಇದಕ್ಕೆ ಕಾರಣ ಅವರ ಸತತ ಕಾಯಕ ನಿಷ್ಠೆ ಕಲ್ಯಾಣರಾಜ್ಯವು ಬೇಡುವವರೇ ಇಲ್ಲದ
ನೀಡುವವರೇ ತುಂಬಿದ ಆದರ್ಶ ಶರಣ ಸಮಾಜವನ್ನು ಹೊಂದಿತ್ತು, ಇದಕ್ಕೆ ಕಾರಣ
ಗುರುಬಸವೇಶ್ವರರು ನೀಡಿದ ಕಾಯಕ ತತ್ವ ಎಂದೂ ಪೂಜ್ಯ ಸ್ವಾಮೀಜಿ ಹೇಳಿದರು.

ಮಾನವ ಆಶಾಜೀವಿಯಾಗಬೇಕು ನಿಜ ಆದರೆ ದುರಾಸೆ ಪಡಬಾರದು. ದುರಾಸೆ
ಹೊಂದಿದ ವ್ಯಕ್ತಿ ಸದಾಕಾಲ ಪರರ ದಾಸ್ಯತ್ವದಲ್ಲಿಯೇ ಬಾಳಬೇಕಾಗುತ್ತದೆ. ಆದ್ದರಿಂದ ಆಸೆಯೇ
ದಾಸತ್ವ ನಿರಾಸೆಯೇ ಈಶತ್ವ ಎಂದೂ ಪೂಜ್ಯ ಶ್ರೀಗಳು ಅಭಿಪ್ರಾಯಪಟ್ಟರು.

ಲಿಂಗಾಯತ ಧರ್ಮವು ವಿಶ್ವದಲ್ಲೇ ಅತ್ಯಂತ ವೈಚಾರಿಕ ಧರ್ಮವಾಗಿದ್ದರೂ
ವೈದಿಕಾಚರಣೆಗಳೇ ತುಂಬಿಕೊಂಡಿದೆ, ಇದಕ್ಕೆ ಕಾರಣ ಜನರ ಅಜ್ಞಾನವೇ ಆಗಿದೆ. ಆದ್ದರಿಂದ ಈ
ಪರಿಸ್ಥಿತಿಯನ್ನು ಸುಧಾರಿಸುವತ್ತ ನಾವಿಂದು ತೀವ್ರ ಗಮನ ಹರಿಸಬೇಕಾಗಿದೆ ಎಂದೂ ಸ್ವಾಮೀಜಿ
ಹೇಳಿದರು.

ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ ದೊರೆತು ಸ್ವತಂತ್ರ ಧರ್ಮ ಎಂದು
ಗುರುತಿಸಲ್ಪಡಬೇಕಾದರೆ ಪ್ರತಿಯೊಬ್ಬರೂ ಧರ್ಮ ಗುರು ಬಸವೇಶ್ವರರ ಮೇಲೆ ಭಕ್ತಿವಚನ ಸಾಹಿತ್ಯದ
ಮೇಲೆ ನಿಷ್ಠೆ,ಅಳವಡಿಸಿಕೊಳ್ಳಬೇಕು ಎಂದು ಪರಮ ಪೂಜ್ಯ ಸ್ವಾಮೀಜಿಯವರು ಕರೆ ನೀಡಿದರು.

ಸಮಾರಂಭದಲ್ಲಿ ಆಶೀರ್ವಚನ ನೀಡಿದ ಕೂಡಲಸಂಗಮದ ಬಸವಧರ್ಮ ಪೀಠಾಧ್ಯಕ್ಷೆ
ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು " ಧರ್ಮಕ್ಕೆ ದಯೆಯೇ ಜೀವಾಳ"
ದಯವಿಲ್ಲದ್ದು ಎಂದೂ ಧರ್ಮವೆಂದು ಕರೆಯಲ್ಪಡುವುದಿಲ್ಲ ಆದ್ದರಿಂದ ಆ ಕಾಲದಲ್ಲಿ ದೇವರು
ಧರ್ಮಗಳ ಹೆಸರಿನಲ್ಲಿ ಆಚರಣೆಯಲ್ಲಿದ್ದ ಪಶುಬಲಿ ಕಂದಾಚಾರಗಳನ್ನು ವಿರೋಧಿಸಿ ದಯೆ ಕರುಣೆ
ಕಾಯಕಗಳ ತಳಹದಿಯ ಆದರ್ಶ ಹೊಸ ಧರ್ಮವನ್ನು ರೂಪಿಸಿರುವ ಬಸವಣ್ಣನವರು ಈ ವಿಶ್ವಕಂಡ
ಮಹಾಪ್ರವಾದಿಯಾಗಿದ್ದಾರೆ ಎಂದರಲ್ಲದೇ ಸಮಾವೇಶದ ನಿರ್ಣಯಗಳನ್ನು ಘೋಷಿಸಿದರು.

ಸಮಾವೇಶದ ನಿರ್ಣಯಗಳು :

1. ಲಿಂಗಾಯತ ಧರ್ಮವು ಹಿಂದು ಧರ್ಮದ ಅಂಗವಲ್ಲ:

ಇತ್ತೀಚಿಗೆ ಹುಬ್ಬಳ್ಳಿಯಲ್ಲಿ ನಡೆದ (10-04-2005) ಹಿಂದೂ ಭವನ ಉದ್ಘಾಟನೆಯ
ಸಮಯದಲ್ಲಿ ಶ್ರೀ ವಿಜಯ ಸಂಕೇಶ್ವರ ಅವರು ಲಿಂಗಾಯತ ಧರ್ಮವು ಹಿಂದು ಧರ್ಮದ ಅಂಗ
ಎಂದು ಹೇಳಿದ್ದಾರೆ. ಅದನ್ನು ಖಂಡಿಸಿ, ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು.

ಹಿಂದೂ ಜನಾಂಗ ವಾಚಕ ಪದ; ಇದು ಕೇವಲ ಒಂದು ಸಂಸ್ಕೃತಿ ಜೀವನ ವಿಧಾನ;
ಆದರೆ ವೇದ ಶೃತಿ, ಸ್ಮೃತಿ ಆಧಾರಿತ ವೈದಿಕ ವಿಚಾರಧಾರೆಯನ್ನೇ ಹಿಂದು ಧರ್ಮ ಎಂದು ಕರೆದು
ಚತುರ್ವರ್ಣಾಶ್ರಮ, ಸಾಮಾಜಿಕ ವ್ಯವಸ್ಥೆ ಯಜ್ಞ-ಯಾಗಾದಿಗಳ ಆಚರಣೆ
ಬಹುದೇವೋಪಾಸನೆಯಿಂದ ಕೂಡಿದ ವೈದಿಕ-ಹಿಂದೂ ನಂಬಿಕೆಗಳನ್ನು ಹಿಂದೂ ಧರ್ಮ ಎಂದೇ
ಕರೆಯುವ ಕಾರಣ, ಗಿಡಮರ , ಬೆಂಕಿ, ಹಾವು, ಹಸು ಮುಂತಾದವನ್ನು ಪೂಜಿಸದೆ ಏಕ
ದೇವೋಪಾಸಕ ಆಚರಣೆಯ ಮಾನವ ಮಾನವರಲ್ಲಿ ಶ್ರೇಷ್ಠ, ಕನಿಷ್ಠ ಎಂದು ಭೇದ ಮಾಡದೆ ಎಲ್ಲರ
ಸಮಾನತೆಯನ್ನು ಒಪ್ಪುವ, ಹೋಮ-ಹವನ, ಯಜ್ಞ-ಯಾಗಾದಿ, ಜೋತಿಷ್ಯ ಪಂಚಾಂಗ
ಮಹೂರ್ತಗಳನ್ನು ನಂಬದೆ ಇರುವ ಧರ್ಮವು ಹಿಂದೂ ಧರ್ಮದ ಅಂಗವಾಗಲು ಹೇಗೆ ಸಾಧ್ಯ ?
ಆದರೆ ಲಿಂಗಾಯತ ಧರ್ಮವು ಹಿಂದೂ ಕೆಲವೊಂದು ಸೌಮ್ಯ ಆಚರಣೆ, ಶಿಷ್ಟಾಚಾರ ಇವೆ.
ಧಾರ್ಮಿಕ ನಂಬಿಕೆ. ಕೆಲವೊಂದು ಸೌಮ್ಯ ಆಚರಣೆ, ಧಾರ್ಮಿಕ ನಂಬಿಕೆ, ಶಿಷ್ಟಾಚಾರ ಇವೆ. ಆಚರಣೆ
ಪ್ರಕಾರ ಲಿಂಗಾಯತವು ಒಂದು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ . ಆದ್ದರಿಂದ ಯಾವ
ನಂಬಿಕೆ, ಆಚರಣೆ, ಮೌಲ್ಯಗಳ ದೃಷ್ಟಿಯಿಂದ ಜೈನ, ಬೌದ್ಧ ಮತ್ತು ಸಿಖ್ ಧರ್ಮಗಳು ಪ್ರತ್ಯೇಕ ಮತ್ತು
ಸ್ವತಂತ್ರ ಧರ್ಮಗಳೋ ಅದೇ ಕಾರಣಗಳಿಗಾಗಿ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾಗಿದೆ.
ಈ ವಿಚಾರವನ್ನು ಜನ ಸಾಮಾನ್ಯರಿಗೂ ತಿಳಿಸುವ ವ್ಯವಸ್ಥೆ ಮಾಡಬೇಕಲ್ಲದೆ, ಕೇಂದ್ರ ಸರ್ಕಾರದಿಂದ
ಸಂವಿಧಾನಾತ್ಮಕ ಮಾನ್ಯತೆಯನ್ನು ಪಡೆಯಲು ಚಳುವಳಿಯನ್ನು ಹಂತಹಂತವಾಗಿ ಪ್ರಾರಂಭಿಸಬೇಕು.

2. ಲಿಂಗಾಯತ ಮತ್ತು ವೀರಶೈವ ಸ್ಪಷವಾಗಿ ಬೇರೆ ಬೇರೆ:-

ಶ್ರೀ ವಿಜಯ ಸಂಕೇಶ್ವರ ಅವರು (ದಿ.11.04.2004, ವಿಜಯ ಕರ್ನಾಟಕ) ಮತ್ತು
ಪಂಚಪೀಠಾಧೀಶರು ಲಿಂಗಾಯತ ಧರ್ಮ ಮತ್ತು ವೀರಶೈವ ಎರಡೂ ಒಂದೇ ಎಂದು
ಪ್ರತಿಪಾದಿಸುವುದು ಖಂಡನಾರ್ಹ. ಏಕೆಂದರೆ ಆಗಮೋಕ್ತ ವೀರಶೈವವೇ ಬೇರೆ ವಚನೋಕ್ತ
ಲಿಂಗಾಯತವೆ ಬೇರೆ. ಎರಡರ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ವೀರಶೈವವು
ಬಹುದೇವತೋಪಾಸಕ ಮತವಾದರೆ ಲಿಂಗಾಯತವು ಏಕದೇವೋಪಾಸಕ ಧರ್ಮ, ವೀರಶೈವವು
ಸಾಮಾಜಿಕವಾಗಿ ವರ್ಣಾಶ್ರಮ ವ್ಯವಸ್ಥೆಗೆ ಬದ್ಧವಾಗಿದೆ. ಲಿಂಗಾಯತವು ಸಮತಾವಾದದ ಮೇಲೆ
ನಿಂತು ಹುಟ್ಟಿನಿಂದ ಯಾರನ್ನು ಶ್ರೇಷ್ಠ ಕನಿಷ್ಠ ಎಂದು ವಿಂಗಡಿಸದೆ ವ್ಯಕ್ತಿಯ ಸಾಧನೆಯಿಂದ
ಅರ್ಹತೆಯಿಂದ ಶ್ರೇಷ್ಠ ಕನಿಷ್ಠ ಆಗುವನು ಎಂದು ಹೇಳುವ ಕಾರಣ ಲಿಂಗಾಯತವನ್ನು ವೀರಶೈವ
ಮತದೊಡನೆ ಸಮೀಕರಿಸಿ ಮಾತನಾಡುವದು ಖಂಡನಾರ್ಹ. ಕರ್ನಾಟಕ ,ಮಹಾರಾಷ್ಟ್ರ ,
ಆಂಧ್ರಪ್ರದೇಶ, ತಮಿಳುನಾಡಿನಲ್ಲಿ ಇರುವ ಇಷ್ಟಲಿಂಗಧಾರಿಗಳೆಲ್ಲರೂ ಲಿಂಗಾಯತರೇ ವಿನಾ
ವೀರಶೈವರಲ್ಲ ಅಜ್ಞಾನದಿಂದ ಕೆಲವರು ಮುಗ್ಧತೆಯಿಂದ ಮತ್ತೆ ಕೆಲವರು ,ಧೂರ್ತತನದಿಂದ ಮತ್ತೆ
ಕೆಲವರು ಲಿಂಗಾಯತರನ್ನು ವೀರಶೈವರೆಂದು ಕರೆಯುವ ಪರಿಪಾಠವನ್ನು ತಂದರು .
ಧೂರ್ತತನದಿಂದ ಕರೆಯುವವರ ಸಂಚನ್ನು ಬಯಲು ಮಾಡುತ್ತ ಅಜ್ಞಾನಿಗಳನ್ನು,ಮುಗ್ಧರನ್ನು
ಎಚ್ಚರಿಸಬೇಕಾಗಿದೆ. ಕರ್ನಾಟಕದಲ್ಲಿರುವ ಇಷ್ಟಲಿಂಗಧಾರಿಗಳೆಲ್ಲರೂ ಲಿಂಗಾಯತರೇ ವಿನಾ ,

ವೀರಶೈವರಲ್ಲ ಎಂಬುದನ್ನು ಜನರಿಗೆ ಮನದಟ್ಟು ಮಾಡಬೇಕು .

3. ಆಚಾರ್ಯ ಸಂಸ್ಕೃತಿ ಮತ್ತು ಶರಣ ಸಂಸ್ಕೃತಿ ಬೇರೆ ಬೇರೆ :-

ರಾಯಚೂರಿನಲ್ಲಿ ಎಪ್ರಿಲ್ 16 ರಂದು ಭಾಷಣ ಮಾಡುತ್ತ ರಂಭಾಪುರಿ ಶ್ರೀ ಗಳು ಶಿವಾಗಮೋಕ್ತ ವೀರಶೈವ ಮತ್ತು ವಚನೋಕ್ತ ಶರಣರ ಚಿಂತನೆಗಳನ್ನು ಸಮನ್ವಯಗೊಳಿಸಿ ಸಾಹಿತ್ಯ ವಚಿಸುವ ,ಪ್ರಕಟಿಸುವ ಯೋಜನೆಯನ್ನು ಹೊಂದಿರುವದಾಗಿ ಹೇಳಿದ್ದಾರೆ. ಇದು ಧೂರ್ತರಸಂಚು ಕೃತ್ರಿಮ ಸಾಹಿತ್ಯ ಎಂದು ಶರಣರ ಸಭೆಯು ತೀವ್ರವಾಗಿ ಖಂಡಿಸಿದೆ . ಏಕೆಂದರೆ ಪಂಚ ಆಚಾರ್ಯ ಸಂಸ್ಕೃತಿಯು ಬಹುದೇವತೋಪಾಸನೆ, ವೈಭವ, ಅಡ್ಡಪಲ್ಲಕ್ಕಿ ಕಿರೀಟದಾರಣೆ ಮುಂತಾದ ಆಡಂಬರ ಮೂಢ ನಂಬಿಕೆ ಮುಂತಾದವುಗಳಿಂದ ಕೂಡಿದುದು ಬಸವಾದಿಶರಣರ ವಿಚಾರಧಾರೆಯು ಸರಳತೆ ಸಮಾನತೆ ಏಕದೇವೋಪಾಸನೆ, ವೈಚಾರಿಕತೆಯಿಂದ ಕೂಡಿದ ಕಾರಣ ಇವೆರಡು ಎರಡು ಧೃವಗಳಂತೆ, ಆದ್ದರಿಂದ ಪಂಚಪೀಠಾಧಿಶರು ಆಗಮೋಕ್ತವಾದ ತಮ್ಮ ವಿಚಾರಧಾರೆ ಹೇಳಿಕೊಳ್ಳಲಿ. ಆದರೆ ವಚನೋಕ್ತ ಲಿಂಗಾಯತ ಧರ್ಮವನ್ನು ಕಲುಷಿತಗೊಳಿಸುವುದು ಸಲ್ಲದು. ಅವರ ಇಂತಹ ಪ್ರಯತ್ನವನ್ನು ಬಸವತತ್ವಾನುಯಾಯಿಗಳು ತೀವ್ರವಾಗಿ ಪ್ರತಿಭಟಿಸಬೇಕು.

4. ಬಸವ ಜಯಂತಿಯಂದು ಸಾರ್ವಜನಿಕ ಅನ್ನ ದಾಸೋಹ :-

ಗುರು ಬಸವಣ್ಣನವರು ಗಳಿಕೆಗೆ ಸೂತ್ರವಾಗಿ ಕಾಯಕವನ್ನು ವಿತರಣೆಯ ಸೂತ್ರವಾಗಿ ದಾಸೋಹವನ್ನು ಕೊಟ್ಟರು . ಆದ್ದರಿಂದ ಬಸವ ಜಯಂತಿಯ ದಿನ ಸಾರ್ವಜನಿಕರಿಗೆ ಅನ್ನ ದಾಸೋಹವನ್ನು ರಾಷ್ಟ್ರೀಯ ಬಸವದಳ ಮತ್ತು ಇನ್ನಿತರ ಬಸವಾಭಿಮಾನಿ ಸಂಘ ಸಂಸ್ಥೆಗಳು ಏರ್ಪಡಿಸಬೇಕು .

5. ಬಸವ ಕಲ್ಯಾಣ ಮತ್ತು ಕೂಡಲಸಂಗಮಕ್ಕೆ ರೈಲು ಸಂಪರ್ಕ :-

ರೈಲು ಸಂಪರ್ಕವು ಕ್ಷೇತ್ರಗಳ ಸಂದರ್ಶನ ಮತ್ತು ಬೆಳವಣಿಗೆಗೆ ಅತ್ಯಂತ ಅವಶ್ಯಕ ಅದಕ್ಕಾಗಿ ರೈಲು ಸಂಪರ್ಕ ಕಟ್ಟಿಸಲು ಕೇಂದ್ರಸರಕಾರವನ್ನು ಆಗ್ರಹಿಸಬೇಕೆಂದು ನಿರ್ಣಯಿಸಲಾಯಿತಲ್ಲದೇ ರೈಲು ಸಚಿವರನ್ನು ಭೆಟ್ಟಿಯಾಗಲು ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಲಾಗಿದೆ.

6. ಬಸವ ಜಯಂತಿಯಂದು ಪ್ರಾಣಿ ದಿನಾಚರಣೆ ಆಕ್ಷೇಪಾರ್ಹ :-

ಬಸವ ಜಯಂತಿ ದಿನದಂದು ಸರ್ಕಾರವು ಪ್ರಾಣಿಗಳ ದಿನಾಚರಣೆಯೆಂದು ಘೋಷಿಸಲು ಆಲೋಚಿಸುತ್ತಿದೆ. ಎಂಬ ವಿಚಾರ ತೀವ್ರವಾದ ಆಕ್ಷೇಪಾರ್ಹ. ದುಯೆ, ಅಹಿಂಸೆಗಳ ಪ್ರತಿಪಾದನೆಯೇ ಬಸವ ತತ್ವದ ಜೀವಾಳ. ಬಸವಣ್ಣನವರು ಕೇವಲ ಮಾನವರ ಹಿತವನ್ನು ಬಯಸದೇ ಸಕಲ ಜೀವಾತ್ಮರ ಲೇಸನ್ನು ಬಯಸಿದರು. ಆದರೆ ಆಧ್ಯಾತ್ಮಿಕ ಚೇತನವಾದ ಬಸವಣ್ಣನವರ ಹೆಸರಿನಲ್ಲಿ ಬಸವ ಜಯಂತಿ ನಡೆಯಬೇಕೆ ವಿನಃ ಬೇರೆ ಯಾವ ದಿನಾಚರಣೆ ಆಗಲಿ ಆಚರಿಸಬಾರದು .ಮೊದಲೇ ಅಜ್ಞಾನಿಗಳಾದ ಕೆಲವು ಜನರು ಬಸವಣ್ಣನವರನ್ನು ಈಗಲೂ ಎತ್ತು ಎಂದೇ ಪೂಜಿಸುವಾಗ ಈಗೀಗ ಅವರ ವ್ಯಕ್ತಿತ್ವ ಬೆಳಕಿಗೆ ಬರುತ್ತಿರುವಾಗ ಪುನಃ ಪ್ರಾಣಿಗಳ ದಿನಾಚರಣೆ ಎಂದು ಬಸವ ಜಯಂತಿ ಆಚರಿಸುವದು ತಪ್ಪು ತಿಳುವಳಿಕೆಗೆ ಕಾರಣವಾಗುತ್ತದೆ. ಎಂದು ಸರಕಾರಕ್ಕೆ ಆಕ್ಷೇಪ ಸಲ್ಲಿಸಬೇಕು.'

7. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಅಗತ್ಯ :-

ಕನ್ನಡ ಭಾಷೆಯು ಅತ್ಯಂತ ಪುರಾತನ ಹಾಗೂ ಮೌಲ್ಯಯುತವಾದ ಭಾಷೆ . ತಮಿಳು, ತೆಲುಗು, ಮಲಯಾಳಂಗಳಂತೆ ಪ್ರಾಚೀನತೆ ಮತ್ತು ಶ್ರೀಮಂತಿಕೆ ಹೊಂದಿರುತ್ತದೆ. ಆದ್ದರಿಂದ ಕನ್ನಡವನ್ನು ಶಾಸ್ತ್ರೀಯ ಭಾಷೆಯನ್ನಾಗಿ ಘೋಷಣೆ ಮಾಡಿ ಮಾನ್ಯತೆ ನೀಡಬೇಕು.

ರಾಜ್ಯದ ಗೌರವಾನ್ವಿತ ಮುಖ್ಯ ಮಂತ್ರಿಗಳು ಈ ಬಗ್ಗೆ ಕೇಂದ್ರ ಸರಕಾರದ ಮೇಲೆ ಒತ್ತಡ ತರಬೇಕು ಎಂದು ಕಲ್ಯಾಣ ಪರ್ವದ ನಿರ್ಣಯಗಳನ್ನು ಪೂಜ್ಯ ಮಾತಾಜಿಯವರು ಪ್ರಕಟಿಸಿದರು.

ಸಾನ್ನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳವರು ಆರ್ಶೀವಚನ ನೀಡಿ "ಅಖಿಲ ಭಾರತ ವೀರಶೈವ ಮಹಾಸಭೆಯು ಸಮಾಜವನ್ನು ದಿಕ್ಕು ತಪ್ಪಿಸುವ ಕಾರ್ಯವನ್ನು ನಿಲ್ಲಿಸಬೇಕು. ಲಿಂಗಾಯತ-ವೀರಶೈವ ಬೇರೆ ಬೇರೆಯಾಗಿದ್ದರೂ . ಅವರೆಡೂ ಒಂದೇ ಎಂದು ಪ್ರಚಾರ ಮಾಡುತ್ತಿರುವ ಮಹಾಸಭೆಯು ತನ್ನ ತಪ್ಪನ್ನು ಬೇಗನೆ ಸರಿ ಪಡಿಸಿಕೊಳ್ಳಬೇಕು, ಎಂದು ಒತ್ತಾಯಿಸಿದರು.

ಗುಲ್ಬರ್ಗಾದ ಪ್ರಾಧ್ಯಾಪಕಿ ಶರಣೆ ಇಂಧುಮತಿ ದಿವಾಕರ ಚಿತ್ರದುರ್ಗದ ಪ್ರೋ. ಶರಣೆ ವಿಜಯ ನಂಜುಂಡಪ್ಪ , ಮಹಾರಾಷ್ಟ್ರದ ಉದ್‌ಗೀರ್‌ನ ಪ್ರೋ.ಎಚ್.ಎ.ವರ್ಧಮಾನ ಉಪನ್ಯಾಸ ನೀಡಿದರು.

ಮೂರು ದಿನಗಳವರೆಗೆ ಐತಿಹಾಸಿಕವಾಗಿ ಜರುಗಿದ ಕಲ್ಯಾಣ ಪರ್ವ ಸುಮಾರು ಒಂದು ಲಕ್ಷ ಬಸವ ಭಕ್ತರನ್ನು ತನ್ನತ್ತ ಆಕರ್ಷಿಸಿತು.

ಯಾವುದೇ ಅಹಿತಕರ ಘಟನೆಗಳಲ್ಲದೇ ಜರುಗಿದ ಉತ್ಸವವು ಬಸವ ಭಕ್ತರಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿತು. ಶಿಸ್ತಿನಿಂದ ಕುಳಿತು ಕಾರ್ಯಕ್ರಮ ವೀಕ್ಷಿಸುತ್ತಿದ್ದ , ಪ್ರಸಾದ ಸ್ವೀಕರಿಸುವಾಗ ಕಂಡು ಬಂದ ಶಿಸ್ತು ಸಮಾಧಾನ ಆಗಮಿಸಿದ ಅತಿಥಿ ಮಹೋದಯರಿಗೆ ಆನಂದ ಆಶ್ಚರ್ಯ ಮೂಡಿಸಿತು.

ಮಹಾರಾಷ್ಟ್ರ ತಮಿಳುನಾಡು, ಕರ್ನಾಟಕದ ವಿವಿಧ ಮೂಲೆಗಳಿಂದ ಆಗಮಿಸಿದ ಬಸವ ಭಕ್ತರು ಪರಸ್ಪರ ಪರಿಚಯ ಶರಣು ವಿನಿಮಯ ಮಾಡಿಕೊಳ್ಳುತ್ತಿದ್ದ ದೃಶ್ಯ ಹೃದಯ ಸ್ಪರ್ಶಿಯಾಗಿತ್ತು. ಕಳೆದ ಮೂರು ಕಲ್ಯಾಣ ಪರ್ವಗಳಿಗೆ ಹೋಲಿಸಿದರೆ ಈ ಬಾರಿ ಸ್ಥಳೀಯ ಅಂದರೆ ಬಸವ ಕಲ್ಯಾಣದ ಜನರು ಅತ್ಯಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಬಿಗಿ ಪೋಲಿಸ್ ಪಹರೆ ಏರ್ಪಡಿಸಿತ್ತಾದರೂ ಪೋಲಿಸ್‌ರಿಗೆ ಯಾವುದೇ ಕೆಲಸವಿಲ್ಲದೆ ಅವರೂ ಕೂಡ ಶರಣರೊಂದಿಗೆ ಕಾರ್ಯಕ್ರಮವನ್ನು ವೀಕ್ಷಿಸಿ ಪ್ರಸಾದವನ್ನು ಸರತಿಯಲ್ಲಿ ನಿಂತು ಸ್ವೀಕರಿಸುತ್ತಿದ್ದುದು ಗಮನಾರ್ಹವಾಗಿತ್ತು.

ಪ್ರಸಕ್ತ ಕಲ್ಯಾಣ ಪರ್ವದಲ್ಲಿ ಗಣ್ಯರಾದ ಡಾ. ಜಯರಾಜ ಅಷ್ಟೂರೆ , ಕೃಷಿಕ ಸಮಾಜದ ಮಾಜಿ ಅಧ್ಯಕ್ಷ ಸಿದ್ಧರಾಮಪ್ಪ ದಂಗಾಪೂರ, ಗುಲಬರ್ಗಾ ದಾಲ್‌ಮಿಲ್ ಸಂಘದ ಅಧ್ಯಕ್ಷರಾದ ಬಿ.ಜಿ.ಪಾಟೀಲ್ , ಗುಲಬರ್ಗಾದ ಪೂಜ್ಯ ಮಹಾಪೌರ ಅಮೃತಪ್ಪ ಪಾಟೀಲ್, ಶರಣ ಅಂತೋನಿಯವರು , ಗುಲಬರ್ಗಾ ಜಿ.ಪಂ.ಸದಸ್ಯ ಅರುಣಕುಮಾರ್ ಪಾಟೀಲ್ ಗೊಬ್ಬೂರ, ಮಾಲೂತಾಯಿ ಚಂದ್ರಕಾಂತ ಸ್ವಾಮಿ, ಬೀದರ್‌ನ ಗಂಗಶೆಟ್ಟಿ ಪಾಟೀಲ್, ಹೈದರಾಬಾದನ ಸುಭಾಷ್ ಪಾಟೀಲ್, ಬೀದರ್‌ನ ಶಿವರಾಜ್ ಪಾಟೀಲ್ ಅತಿವಾಳ, ಗುಲಬರ್ಗಾದ ಶರಣ ಮಹಾಂತಗೋಳ, ಬಸವರಾಜ ಯಾಲಕ್ಕಿ ವಕೀಲರು, ಬೀದರ್‌ನ ಶಿವನಾಥ ನೀಲಂಗೆ, ಬೀದರ್‌ನ ಚಂದ್ರಮ್ಮ ಅಣಪ್ಪ ಪಾಟೀಲ್, ರಾಮಲಿಂಗಪ್ಪ ದೇವಣಿ, ಶಿವಶರಣಪ್ಪ ಪಾಟೀಲ್, ಹಾವಶೆಟ್ಟಿ ಪಾಟೀಲ್, ಬಸವರಾಜ ಸಂಗಮದ, ಬಸವ ಕಲ್ಯಾಣದ ಬಸವರಾಜ

ವಲ್ಲೇಪುರೆ, ಶಿವರಾಜ ಚಿವಡೆ. ಬೀದರ್‌ನ ನಾಗಶೆಟ್ಟಿ ಶೆಟಗಾರ್, ಗುಲಬರ್ಗಾದ ಆರ್.ಜಿ.ಶೆಟಗಾರ,ವಿಜಯಪುರದ ಬಸವರಾಜೇಂದ್ರಪ್ಪ ಸಂಕೇಶ್ವರದ ಡಾ.ಶಿವಗೌಡ ಪಾಟೀಲ್, ಚಿಕ್ಕಮಗಳೂರಿನ ಬಾಣೂರ ಚನ್ನಪ್ಪ ಮೈಸೂರಿನ ಸರೋಜಮ್ಮ ನಾಗರಾಜು, ಮಹಾರಾಷ್ಟ್ರದ ಉದ್‌ಗೀರ್‌ನ ಲಕ್ಷ್ಮೀಬಾಯಿ ಪಾಂಡರೆ, ಭೀಮರಾಯನಗುಡಿಯ ಕೃಷಿ ಅಧಿಕಾರಿ ಕೆ.ಬಸವರಾಜ, ಹಿರೆಹೊನ್ನಳ್ಳಿಯ ಎಸ್.ಬಿ.ಜೋಡಳ್ಳಿ, ಧಾರವಾಡ ರಾಷ್ಟ್ರೀಯ ಬಸವದಳದ ರಾಜ್ಯಾಧ್ಯಕ್ಷ ವೀರಣ್ಣ ಕೊರ್ಲಹಳ್ಳಿ, ಲಿಂಗಾಯತ ಮಹಾಸಭಾ ಅಧ್ಯಕ್ಷ ಎನ್.ಪುಟ್ಟರುದ್ರಪ್ಪ ಬಸವಕಲ್ಯಾಣದ ರಾಷ್ಟ್ರೀಯ ಬಸವದಳದ ಅಧ್ಯಕ್ಷ ಬಸವರಾಜ ಪಾಟೀಲ್ ಶಿವಪೂರ ಸೇರಿದಂತೆ ಹಲವಾರು ನೇತಾರರು ಹರಗುರುಚರ ಮೂರ್ತಿಗಳು ಪಾಲ್ಗೊಂಡಿದ್ದರು.

ಭದ್ರಾವತಿಯ ರಾಷ್ಟ್ರೀಯ ಬಸವದಳದ ಶರಣೆ ಗಂಗಾಂಬಿಕಾ ಬಸವರಾಜ, ಧಾರವಾಡದ ಚಂದ್ರಮ್ಮ ಸದಾನಂದ ಸ್ವಾಮಿ ಹಾಗೂ ಧಾರವಾಡದ ಯುವ ನ್ಯಾಯವಾದಿ ಕೆ.ಎಸ್. ಕೋರಿಶೆಟ್ಟರ್ ಅವರಿಂದ ಆಕರ್ಷಕವಾಗಿ ಜರುಗಿದ ಸಭಾ ನಿರ್ವಹಣೆ ಸಮಾರಂಭಕ್ಕೆ ವಿಶೇಷ ಆಕರ್ಷಣೆಯಾಗಿತ್ತು.

ಸಮಗ್ರ ವರದಿ

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಬಸವಕಲ್ಯಾಣ
ಹಾಗೂ ಕೆ.ಎಸ್.ಕೋರಿಶೆಟ್ಟರ್, ನ್ಯಾಯವಾದಿ, ಧಾರವಾಡ

ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ.
ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು!
ಅಣ್ಣಾ ಶಶಿಧರನಟ್ಟದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದ
ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ.
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ
ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷಮೂರ್ತಿ ಬಸವಣ್ಣಾ!
ಬಸವಣ್ಣಪ್ರಿಯ ಚನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ !

-ಅಕ್ಕ ನಾಗಮ್ಮ

ಎಲೆ ಅಯ್ಯಾ ಬಸವಾ, ಕರಸ್ಥಲ ಬಯಲಾಯಿತ್ತೆನಗೆ.
ಕರಸ್ಥಲ ಮನಸ್ಥಲವಾಯಿತ್ತು ಬಸವಾ.
ಸಂಗಯ್ಯಾ, ಬಸವ ಹೋದನತ್ತ
ನಾನಡಗಿದೆನಯ್ಯಾ ನಿಮ್ಮತ್ತಲಿ.

- ನೀಲಮ್ಮ

ಪರಿಪೂರ್ಣ ಪ್ರವಾದಿ ವಿಶ್ವಗುರು ಬಸವಣ್ಣನವರು

ಬಾ ಬಸವ, ಬಾರಯ್ಯ
ನನ್ನನಾವರಿಸಲು ಬಾ
ನೀ ಆವರಿಸಿದಂತೆ
ನಿನ್ನ ವಿರಾಟ ರೂಪ ದರ್ಶನವಾದಂತೆ
ನಿನ್ನಯ ಬಹುಮುಖ ಪ್ರತಿಭೆಯಿಂ
ನಾ ಆಗುವೆ ವಿಶ್ವವಿಜೇತ
ನಾನು ಸಾಧಕ-ನಿನ್ನ ಸತ್ಯ, ಸಹಿಷ್ಣುತೆಗೆ ಸಲ್ಲಲು ತಪಿಸುವೆನಾಗಿ
ನಾನು ವಿಚಾರ ಶೀಲ - ನಿನ್ನಯ ವೀರತ್ವ, ವಿನಯ ಮೇಳೈಸಲು ಮುಂದಾಗುವೆನಾಗಿ
ನಾನು ವಿಜ್ಞಾನಿ-ನಿನ್ನ ಸುವಿಜ್ಞಾನ ಪಥದಲಿ ಮುನ್ನಡೆಯುವೆನಾಗಿ
ನಾನು ಆಧ್ಯಾತ್ಮವೀರ- ನಿನ್ನ ಆರಾಧನೆಯ ಆಧಾರವಿರಲು
ನಾನು ಸಂಸಾರಿ-ನಿನ್ನ ದಿವ್ಯ ಭವ್ಯ ಬದುಕಿನ ಬೆಳಕಿನಿಂದಾಗಿ
ನಾನು ವಿರಕ್ತ-ನಿನ್ನ ಏಕೇಶ್ವರವಾದದಲಿ ಅನುರಕ್ತನಾಗಿರುವೆನಾಗಿ
ನಾನು ಬರಹಗಾರ - ನಿನ್ನ ವಚನಗಳ ಸ್ಫೂರ್ತಿಯ ಸೆಲೆಯಿರಲು
ನಾನು ಸಂಗೀತಗಾರ -ನಿನ್ನ ಸ್ವರ / ವಚನಗಳ ವಚಿಸುವೆನಾಗಿ
ನಾನು ಕಾಯಕ ಯೋಗಿ - ಉತ್ಪನ್ನದ ಉಗಮ ನೀ ತೋರಿಸಿರುವೆಯಾಗಿ
ನಾ ಗುರುವೆನಿಸುವೆ - ನೀ ವಿಶ್ವಗುರುವಾಗಿರಲು
ನಾ ಲಿಂಗವಾಗುವೆ-ನೀ ಇತ್ತ ಇಷ್ಟಲಿಂಗವ ಪೂಜಿಸುವೆನಾಗಿ
ನಾ ಜಂಗಮ -ನಿನ್ನ 'ಶರಣ ತತ್ವ' ಪ್ರಚಾರ ಮಾಡುತ್ತಿರುವೆನಾಗಿ
ನಾನು ಪ್ರವಾದಿಯಯ್ಯಾ - ನಿನ್ನೆಲ್ಲಾ ಪರಮ ಪ್ರಸಾದವ ಕೊಳ್ಳುವೆನಾಗಿ
ನಾನು ಆಚಾರಿಯಯ್ಯಾ -ನಿನ್ನ ಆಚಾರ, ವಿಚಾರಗಳ ಆಚರಣೆಯಲ್ಲಿರಲು
ಹಂಬಲಿಸುವೆನಾಗಿ
ಓ ತಂದೆ,
ನಿನ್ನಯ ಅರಿವು, ಆಚಾರ, ಅನುಭಾವಗಳ ಮಿಶ್ರಣದಲ್ಲಿ
ನಾನೇನಾಗುವೆನೋ ನನಗೆ ತಿಳಿಯದು
ಆದರೆ ಬಸವ ಗುರುವೇ, ಓ ಬಸವ ಭಾಸ್ಕರನೆ,
ನಿನ್ನ ಬದುಕು, ರೀತಿ- ನೀತಿ, ಒಲವು-ಗೆಲುವುಗಳ
ಸಾಕಾರತೆ ಕಾಣಲು ಹವಣಿಸಿದಂತೆ, ಕಣ್ಣು ಅಗಲಿಸಿದಂತೆ
ನಿನ್ನ ವಿಶ್ವದಾಕಾರದ ನಿಲುವುಗಳಿಗೆ ನಿಬ್ಬೆರಗಾಗಿ
ಭಕ್ತಿ, ವಿನಯ, ಸುಜ್ಞಾನ ತುಂಬಿ
ಎನಗಿಂತ ಕಿರಿಯರಿಲ್ಲೆಂಬ ಭಾವ ಬಲಿಯುತಿದೆ!
ಈ ಜೀವನ ನಿನಗಾಗಿ ಮುಡಿಪಾಗಿಸಿ,
ಎಂದೆಂದೂ ಅನ್ವಯಿಸುವ ನಿನ್ನ ಆತ್ಮೀಯ ಆದರ್ಶಗಳ ಆಸ್ವಾದಿಸಲು
ಮೈ ಉಬ್ಬಿ, ಮನ ತುಂಬಿ, ಭಾವ ಒಲಿದು ;
ಬಾ ಬಸವ ಬಾರಯ್ಯಾ
ನನ್ನನಾವರಿಸಲು ಬಾ ಎಂದು
ಮತ್ತೆ ಮತ್ತೆ ಆತ್ಮ ಉಲಿಯುತ್ತಿದೆ

-ಕೆ.ಬಸವರಾಜ, ಅಧ್ಯಕ್ಷರು, ರಾ.ಬ.ದಳ,ಬೆಳಗಾಂವ್

ಮಂಗಳೂರಿನ ಬಿ.ಸಿ ರೋಡ್‌ನ ಅಜ್ಜಿಬೆಟ್ಟುವಿನ
ಬಸವ ಮಂಟಪಕ್ಕೆ ಹೃತ್ಪೂರ್ವಕ ಆಹ್ವಾನ

ಮಂಗಳೂರು ನಗರಕ್ಕೆ ಸಮೀಪದಲ್ಲಿರುವ ಬಿ.ಸಿ.ರೋಡಿನ ಅಜ್ಜಿಬೆಟ್ಟುವಿನಲ್ಲಿ ಶರಣ.ಎ.ಚಂದಪ್ಪನವರು ಮತ್ತು ಅವರ ಕುಟುಂಬದವರು ಬಸವ ಧರ್ಮ ಪೀಠಕ್ಕೆ ನಿವೇಶನವನ್ನು ದಾನವಾಗಿ ಕೊಟ್ಟಿರುವುದು ಅಲ್ಲದೆ ಅದರಲ್ಲಿ ಸುಂದರವಾದ ಬಸವ ಮಂಟಪವನ್ನು ನಿರ್ಮಾಣ ಮಾಡಿದ್ದಾರೆ. ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳಾದ ಪೂಜ್ಯಶ್ರೀ ಬಸವಕುಮಾರ ಸ್ವಾಮಿಗಳು ಬಿ.ಸಿ.ರೋಡ ಬಸವ ಮಂಟಪದ ಉಸ್ತುವಾರಿ ವಹಿಸಿಕೊಂಡಿದ್ದಾರೆ. ದಿ.24-4-2005ರಂದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯನ್ನು ದಿ.11-5-2005ರಂದು ಬಸವ ಜಯಂತಿಯನ್ನು ಆಚರಿಸಲಾಯಿತು.

ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯದ ಬಸವ ಮಂಟಪದಲ್ಲಿ ಪ್ರತಿ ಭಾನುವಾರ ಬೆಳಿಗ್ಗೆ 10:30ರಿಂದ 12:30ರವರೆಗೆ ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಚಿಂತನೆ ನಡೆಯುತ್ತದೆ. ಪ್ರತಿ ತಿಂಗಳಿನ ಮೊದಲನೆಯ ಭಾನುವಾರ ಬೆಳಿಗ್ಗೆ 10:30ರಿಂದ "ಶರಣ ಸಂಗಮ" ಮತ್ತು ಅನ್ನದಾಸೋಹ ನಡೆಸುವ ಉದ್ದೇಶವಿದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬರೆದ ಸಾಹಿತ್ಯವು ಮಾರಾಟಕ್ಕೆ ಲಭ್ಯವಿರುತ್ತದೆ. ಮನೆ ಶಾಂತಿ, ಗೃಹ ಪ್ರವೇಶ ಮುಂತಾದ ಧಾರ್ಮಿಕ ಕ್ರಿಯೆಗಳನ್ನು ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ನಡೆಸಿಕೊಡುತ್ತಾರೆ.

ಸಂಪರ್ಕಿಸುವ ವಿಳಾಸ : ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು,
ಬಸವ ಮಂಟಪ, ಅಜ್ಜಿಬೆಟ್ಟು, ಬಿ.ಸಿ.ರೋಡ್, ಬಂಟ್ವಾಳ ತಾಲ್ಲೂಕು
ದೂರವಾಣಿ: 08255 / 220705, ಮೊಬೈಲ್ : 94480 36038

ವಚನಾಂಕಿತ ಬದಲಾವಣೆ ಪ್ರಕರಣ

- ಪ್ರೊ.ಎಸ್.ಎಂ.ಸಾಬೋಜಿ,
ರಾಣೆಬೆನ್ನೂರು

ಧರ್ಮಪಿತ ಬಸವಣ್ಣನವರ ವಚನಗಳ ಅಂಕಿತವಾದ 'ಕೂಡಲಸಂಗಮದೇವ' ಇದನ್ನು ಬದಲಾಯಿಸಿ 'ಲಿಂಗದೇವ' ಎಂದು ಮಾಡಿ 'ಬಸವ ವಚನ ದೀಪ್ತಿ' ಎಂಬ ಪುಸ್ತಕವನ್ನು ಶ್ರೀ ಮಾತೆ ಮಹಾದೇವಿಯವರು ಬರೆದಿದ್ದಾರೆ. ಬಹುಮತದ ಬಸವ ಭಕ್ತರು ವಿರೋಧಿಸಿ ಸರಕಾರದಿಂದ ಮುಟ್ಟುಗೋಲು ಹಾಕಿಸಿದ್ದಾರೆ. ಈ ನ್ಯಾಯ ಹೈಕೋರ್ಟ್‌ನವರೆಗೆ ಹೋಗಿ ಅದರ ತೀರ್ಪು 'ಸಂಯುಕ್ತ ಕರ್ನಾಟಕ ' ದಿನಪತ್ರಿಕೆಯಲ್ಲಿ ಬಂದಿದೆ. ಅದು ಕೆಳಗಿನಂತೆ ಇದೆ. 'ಬಸವ ವಚನ ದೀಪ್ತಿ' ಮುಟ್ಟುಗೋಲು; ಹೈಕೋರ್ಟ ಅಸ್ತು.

ಬೆಂಗಳೂರು ;ಜೂನ್-27

ಬಸವೇಶ್ವರ ವಚನಗಳ ಅಂಕಿತವಾಗಿರುವ 'ಕೂಡಲ ಸಂಗಮದೇವ ' ಎಂಬುದನ್ನು 'ಲಿಂಗದೇವ ' ಎಂದು ಬದಲಾಯಿಸಿರುವ ಮಾತೆ ಮಹಾದೇವಿಯವರ ' ಬಸವ ವಚನ ದೀಪ್ತಿ' ಪುಸ್ತಕವನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡಿದ್ದನ್ನು, ಹೈಕೋರ್ಟ ಇಂದು ಎತ್ತಿ ಹಿಡಿಯಿತು ಬಸವೇಶ್ವರರು ತಮ್ಮ ವಚನಗಳಲ್ಲಿ 'ಕೂಡಲ ಸಂಗಮದೇವ' ಎಂದು ಹೇಳಿರುವದು ಅರ್ಥಪೂರ್ಣವಾಗಿದೆ . ಜೊತೆಗೆ ಇತರ ಶರಣರ ವಚನಗಳಿಗಿಂತ ವಿಶಿಷ್ಟವಾಗಿದ್ದು ,ಅವುಗಳಲ್ಲಿ ಕೂಡಲ ಸಂಗಮದೇವ ಅಂಕಿತವು ಅನ್ವರ್ಥನಾಮವಾಗಿದೆ ಎಂದು ಪೂರ್ಣಪೀಠ ಅಭಿಪ್ರಾಯ ಪಟ್ಟಿತು. ನ್ಯಾಯ ಮೂರ್ತಿಗಳಾದ ಬಿ.ಪದ್ಮರಾಜ್, ಎ.ಎಮ್.ಫಾರುಕ್ ಮತ್ತು ಎಸ್.ಬಿ ಮಜಗೆ ಅವರಿದ್ದ ಪೂರ್ಣ ಪೀಠವು ವಿಚಾರಣೆ ನಡೆಸಿ ಇಂದು ತೀರ್ಪು ನೀಡಿ ಮಾತೆ ಮಹಾದೇವಿಯವರ ಅರ್ಜಿಯನ್ನು ವಜಾ ಮಾಡಿತು. ಈ ಸಂಬಂಧದಲ್ಲಿ ಸಲ್ಲಿಸಿದ್ದ ಮಧ್ಯಂತರ ಅರ್ಜಿಗಳೂ ವಜಾ ಆದವು, (ಕೃಪೆ : ಸಂಯುಕ್ತ ಕರ್ನಾಟಕ) (ಇದನ್ನು ನಾನು ' ಬಸವ ಬೆಳಗು' ಜುಲೈ, ಆಗಸ್ಟ್

ಸೆಪ್ಟೆಂಬರ್-2003 ಸಂಚಿಕೆ ; 4 ಇದರಿಂದ ತೆಗೆದುಕೊಂಡಿದ್ದೇನೆ.) ಆಮೇಲೆ ಮಾತೆ ಮಹಾದೇವಿಯವರು ದಿಲ್ಲಿ ಸರ್ವೋನ್ನತ ನ್ಯಾಯಾಲಯಕ್ಕೆ ಮೊರೆ ಹೋಗಿದ್ದಾರೆಂದು ಕೇಳಿದ್ದೇನೆ. ನನಗೆ ಗೊತ್ತಿದ್ದಂತೆ ಎಷ್ಟೋ ಕನ್ನಡ ಕವಿಗಳು ತಮ್ಮ ಕಾವ್ಯಗಳಿಗೆ, ತಮ್ಮ ಕಾವ್ಯ ನಾಮಗಳನ್ನು ಇಟ್ಟುಕೊಂಡಿದ್ದಾರೆ . ಉದಾ: ಆನಂದ ಕಂದ, ಕಾವ್ಯನಂದ, ಕುವೆಂಪು ಅಂಬಿಕಾತನಯದತ್ತ, ಬಸವಾತ್ಮಜೆ ಹೀಗೆ ಈ ಕಾವ್ಯನಾಮಗಳನ್ನು ಬೇರೆಯವರು ಬದಲಿಸುತ್ತ ಹೋದರೆ ಮೊದಲಿನ ಕವಿಗಳಿಗೆ ನೋವಾಗುವುದಿಲ್ಲವೇ ? ಕವಿಗಳಿಗೆ ದ್ರೋಹ ಬಗೆದಂತಾಗುವುದಿಲ್ಲವೇ ?

ಹೀಗೆ ವಿಚಾರ ಮಾಡುತ್ತ ಶ್ರೀಮಾತೆ ಮಹಾದೇವಿಯರ ದೀಕ್ಷಾ ಗುರುಗಳಾದ, ಶ್ರೀ ಲಿಂಗಾನಂದ ಜಗದ್ಗುರುಗಳ ಅಭಿಪ್ರಾಯವೇನಿರಬಹುದು ಎಂದು ಅವರು ಬರೆದ ಪುಸ್ತಕಗಳನ್ನು ಓದತೊಡಗಿದ. ಹೀಗೆ ಓದುವಾಗ ಸದ್ಗುರು ಸ್ವಾಮಿ ಲಿಂಗಾನಂದರು ಬರೆದಿರುವ 'ಅಕ್ಕನ ಪ್ರವಚನ ಎಂಬ ಗ್ರಂಥವನ್ನು ಓದುವಾಗ ವಚನಾಂಕಿತದ ಬಗ್ಗೆ ಅವರ ಸ್ಪಷ್ಟ ಅಭಿಪ್ರಾಯ ಸಿಕ್ಕಿತು. ಅದನ್ನು ಅವರ ಎಲ್ಲ ಶಿಷ್ಯರಿಗೆ ತಿಳಿಸಬೇಕೆಂಬ ಹಂಬಲವಾಯಿತು. ಅವರು ಬರೆದ ಈ ಅಕ್ಕನ ಪ್ರವಚನ ಎಂಬ ಗ್ರಂಥವು 'ಸುಯಿಧಾನ ಸುಗ್ರಂಥ ಮಾಲೆಯ 2ನೇ ಬ್ಲಾಕ್, ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು-560010 ಇದ್ದಾರೆ. ಇದು 1986ರಲ್ಲಿ 4ನೇ ಮುದ್ರಣವಾಗಿ ಹೊರಹೊಮ್ಮಿದೆ. ಇದೇ ಪುಸ್ತಕದ 13ನೇ ಪರಿವಿಡಿಯ ಇಷ್ಟಲಿಂಗ-ಸ್ಥಾವರಲಿಂಗಗಳ ಅಂತರ ಎಂಬ ವಿಭಾಗದಲ್ಲಿ 173 ಪುಟದ ಕೆಳಗಿನ ಭಾಗದಲ್ಲಿ ಅವರು ಬರೆದ ಅಭಿಪ್ರಾಯ ಹೀಗಿದೆ.

"ಶರಣರು ತಮ್ಮ ವಚನ ಮುದ್ರಿಕೆಗಳಿಗೆ ಆಯ್ದುಕೊಂಡ ಹೆಸರುಗಳು ಕೆಲವು ಕ್ಷೇತ್ರಗಳಲ್ಲಿರುವ ಸ್ಥಾವರ ಲಿಂಗದ ಸಂಕೇತಗಳೆಂದು ಕೆಲವರಿಗೆ ಭ್ರಾಮಕ ಕಲ್ಪನೆ ಇದ್ದಂತಿದೆ. ಅಕ್ಕಮಹಾದೇವಿಯ "ಚನ್ನಮಲ್ಲಿಕಾರ್ಜುನ", ಬಸವಣ್ಣನವರ "ಕೂಡಲ ಸಂಗಮದೇವ", ಪ್ರಭುದೇವರ "ಗುಹೇಶ್ವರ " ಸಿದ್ದರಾಮೇಶ್ವರರ "ಕಪಿಲಸಿದ್ದ ಮಲ್ಲಿಕಾರ್ಜುನ " ಷಣ್ಮುಖಸ್ವಾಮಿಯ "ಅಖಂಡೇಶ್ವರ", ತೋಂಟದ ಸಿದ್ಧಲಿಂಗ ಶಿವಯೋಗಿಗಳ "ಮಹಾಲಿಂಗ ಗುರುಶಿವ ಸಿದ್ದೇಶ್ವರ ಪ್ರಭುವೇ", ನಿಜಗುಣರ "ಶಂಭುಲಿಂಗ", ಮುಪ್ಪಿನಾಚಾರ್ಯರ "ಷಡಕ್ಷರ ಲಿಂಗ", ಬಸವಲಿಂಗ ಶರಣರ "ಚನ್ನವೀರ" ಇತ್ಯಾದಿ ವಚನ ಮುದ್ರಿಕೆಗಳು ವಿಶಿಷ್ಟ ಸ್ಥಾವರಲಿಂಗದ ಹೆಸರುಗಳಾಗಿವೆ. ಹೆಸರಿನ ಹೆಸರುಗಳಾಗದೇ ಪರಾತ್ಪರ ಪರ ವಸ್ತುವಿಗೆ, ಇವರು ಇಷ್ಟಪಟ್ಟು ಕರೆದ ಹೆಸರುಗಳಾಗಿವೆ. ಅಪೂರ್ವ ಧ್ಯೇಯವು ಪರಮಾತ್ಮನೇ ಅಲ್ಲದೇ ಬೇರೆಯಲ್ಲ ಎಂಬುದನ್ನು ಒಪ್ಪಲು ಔದಾರ್ಯಬೇಕು. "ದೀಕ್ಷಾಗುರು "ಸದ್ಗುರು ಸ್ವಾಮಿ ಲಿಂಗಾನಂದರ" ಉಪದೇಶವನ್ನು ಪಾಲಿಸಲೇಬೇಕು. ಇಲ್ಲವಾದರೆ ಶಿಷ್ಯರು ಗುರುದ್ರೋಹಿಗಳಾಗುವುದಿಲ್ಲವೇ ? ಧರ್ಮಗುರು ಬಸವಣ್ಣನವರು ತಮ್ಮ ಪ್ರಸಿದ್ಧ ವಚನದಲ್ಲಿ ಇದನ್ನೇ ತಿಳಿಸಿದ್ದಾರೆ. ವಚನ ನೋಡಿರಿ :

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ
ಅಗಮ್ಯ ಅಪ್ರಮಾಣ ಅಗೋಚರ ಅಪ್ರತಿಮ ಲಿಂಗವೇ
ಲಿಂಗದೇವಯ್ಯ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ

ಮಹತ್ ರೂಪವಾದ ನಿರಾಕಾರವಾದ ಲಿಂಗವೇ (ದೇವರೇ) ಚುಳುಕಾಗಿ ಇಷ್ಟಲಿಂಗದ ರೂಪದಲ್ಲಿದ್ದು ಅದಕ್ಕೆ 'ಕೂಡಲಸಂಗಮದೇವ' ಎಂದು ಹೆಸರಿಸಿದ್ದಾರೆ.

ಧರ್ಮಗುರು, ಧರ್ಮಪಿತ, ಬಸವಣ್ಣನವರ 'ಕೂಡಲ ಸಂಗಮದೇವ' ಎಂಬ ವಚನಾಂಕಿತವನ್ನು ಬದಲಿಸಿದರೆ ಧರ್ಮಗುರು ದ್ರೋಹಿಗಳಾಗುವುದಿಲ್ಲವೇ?

ಹೀಗೆ ದೀಕ್ಷಾಗುರುದ್ರೋಹಿ ಮತ್ತು ಧರ್ಮಗುರು ದ್ರೋಹಿಗಳಾಗಿ ನಡೆದರೆ ಯಾರಿಗೆ ಒಳ್ಳೆಯದಾಗುತ್ತದೆ?

(ಸಂಯುಕ್ತ ಕರ್ನಾಟಕ)

ಲಿಂಗದೇವ ವಚನಾಂಕಿತ ತತ್ತ್ವಬದ್ಧವಿದೆ

ಪ್ರೊ.ಎಸ್.ಎಂ ಸಾಬೋಜಿ, ರಾಣೆಬೆನ್ನೂರ್ ಇವರು ಬರೆದ 'ವಚನಾಂಕಿತ ಬದಲಾವಣೆ ಪ್ರಕರಣ' ಎಂಬ ಐದು ಲೇಖನವನ್ನು ಚಿತ್ತರಗಿ ಶ್ರೀವಿಜಯ ಮಹಾಂತೇಶ್ವರ ಸಂಸ್ಥಾನ ಮಠ ಇಲಕಲ್ಲದಿಂದ ಹೊರಡುವ 'ಬಸವ ಬೆಳಗು' ಎಂಬ ತ್ರೈಮಾಸಿಕ ಪತ್ರಿಕೆ (ಜನವರಿ-ಜೂನ್-2005)ಯಲ್ಲಿ ನೋಡಿ ಓದಿದ್ದೆ.

ಶರಣರಾದ ಪ್ರೋ.ಎಸ್.ಎಂ.ಸಾಬೋಜಿಯವರ ಈ ಲೇಖನ ಓದಿದ ಕೂಡಲೇ ಧರ್ಮಗುರು ಬಸವಣ್ಣನವರ ವಚನಗಳ ಕುರಿತು ಕೆಲವು ಪ್ರಶ್ನೆಗಳು ಏಳತೊಡಗಿದವು. ಆ ಪ್ರಶ್ನೆಗಳು ಪ್ರಜ್ಞಾವಂತರಾದ, ಬಸವ ತತ್ತ್ವಾಭಿಮಾನಿಗಳಾದವರ ಮುಂದೆ ಇಡುತ್ತೇನೆ.

ಪರಮ ಪೂಜ್ಯ ಮಾತೆಮಹಾದೇವಿಯವರು ಧರ್ಮಗುರು ಬಸವಣ್ಣನವರ ವಚನಾಂಕಿತ 'ಕೂಡಲಸಂಗಮದೇವ' ಬದಲಿಗೆ 'ಲಿಂಗದೇವ' ಎಂದು ಮಾಡಿ 'ಬಸವ ವಚನ ದೀಪ್ತಿ' ಎಂಬ ಒಂದು ಗ್ರಂಥವನ್ನು ಸಂಪಾದಿಸಿ, ಇದಕ್ಕೆ ಬಹುಮತದ ಬಸವ ಭಕ್ತರು ವಿರೋಧಿಸಿದ್ದಾರೆ, ಸರ್ಕಾರದಿಂದ ಮುಟ್ಟುಗೋಲು ಹಾಕಿಸಿದ್ದಾರೆ, ಆದರೂ ಮಾತೆ ಮಹಾದೇವಿಯವರು ತಮ್ಮ ವಿಚಾರವನ್ನು ಬದಲಾಯಿಸಲಾರರು ಎಂಬ ಮಾತುಗಳನ್ನು ನಾವು ಪದೆಪದೆ ಕೇಳುತ್ತಲೇ ಇದ್ದೇವೆ.

ಈ ಲಿಂಗದೇವ ಸಂಶೋಧನೆ ಕುರಿತು ನನ್ನಲ್ಲಿ ಉದ್ಭವಿಸುವ ಪ್ರಶ್ನೆ ಏನೆಂದರೆ ಒಬ್ಬ ತತ್ತ್ವಜ್ಞಾನಿ, ವಿಜ್ಞಾನಿ, ಸಂಶೋಧಕ, ಸಿದ್ಧಾಂತಿ ತಾನು ಕಂಡುಹಿಡಿಯಬೇಕಾದ ವಸ್ತುವಿನ ಪರಿಶೋಧನೆಯಲ್ಲಿ ಮಗ್ನನಾಗಿ, ತಲ್ಲೀನನಾಗಿ ಅದನ್ನು ಕಂಡುಹಿಡಿದು ಆನಂತರ ಅದನ್ನು ಪ್ರಯೋಗಿಸಿ ನೋಡಿ ಸತ್ಯವಾಗಿದೆ ಎಂದು ಕಂಡ ಕೂಡಲೇ ಜಗತ್ತಿಗೆ ತಿಳಿಸುತ್ತಾನೆ. ಅದನ್ನು ಅರ್ಥ ಮಾಡಿಕೊಳ್ಳದ ಜನರು ಅದು ತಪ್ಪು ಎಂದು ಬೇರೆಯವರು ಟೀಕಿಸಿದ ಮಾತ್ರಕ್ಕೆ ಕಂಡುಹಿಡಿದ ಆ ವಸ್ತುವಿನ ಕೈ ಬಿಡುತ್ತಾನೆಯೇ ? ಖಂಡಿತವಾಗಿಯು ಕೈ ಬಿಡುವುದಿಲ್ಲಾ, ಪ್ರಾಣ ಹೋದರೂ ಚಿಂತೆಯಿಲ್ಲ ಆದರೆ ತಾನು ಕಂಡು ಹಿಡಿದ ವಸ್ತುವಿನ ಕೈ ಬಿಡುವುದಿಲ್ಲಾ, ಇದು ಸಿದ್ಧಾಂತಿಗಳ, ವಿಜ್ಞಾನಿಗಳ, ಆಧ್ಯಾತ್ಮಿಗಳ ತತ್ತ್ವ; ಅಂಥವರ ಸಾಲಿನಲ್ಲಿ ಪರಮ ಪೂಜ್ಯ ಮಾತೆ ಮಹಾದೇವಿಯವರೊಬ್ಬರು.

ಧರ್ಮಕರ್ತ ಬಸವಣ್ಣನವರ ವಚನಗಳ ಕುರಿತು ಏಳುವ ಪ್ರಶ್ನೆ ಏನೆಂದರೆ ಗುರು ಬಸವಣ್ಣನವರು ತಮ್ಮ ವಚನಗಳಲ್ಲಿ ದೇವರ ಕಲ್ಪನೆ ಬಗ್ಗೆ ಭಿನ್ನಾಭಿಪ್ರಾಯ ಪಡುತ್ತಾರೆ ಏಕೆ? ಕೆಲವು ವಚನಗಳಲ್ಲಿ (ಯೋಗಿ ಶಿವ) ಪಾರ್ವತಿ ಗಂಡ ಶಿವನಿಗೆ 'ಕೂಡಲಸಂಗಮದೇವ' ಎಂದು ಮತ್ತೆ ಕೆಲವು ವಚನಗಳಲ್ಲಿ ಪರಾತ್ಪರ ಪರವಸ್ತು(ಪರಶಿವ)ನಿಗೆ ಕೂಡಲ ಸಂಗಮದೇವ ಎಂದು ಹೀಗೇಕೆ ದೇವರ ಬಗ್ಗೆ ಭಿನ್ನಾಭಿಪ್ರಾಯ ಪಡುತ್ತಾರೆಂದು ನಾವು ಚಿಂತಿಸಬೇಕಾಗಿದೆ.

ಪರಮ ಪೂಜ್ಯ ಮಾತೆ ಮಹಾದೇವಿಯವರು ಒಬ್ಬ ಧಾರ್ಮಿಕ-ಆಧ್ಯಾತ್ಮಿಕ ಜೀವಿಯಾಗಿ ಶರಣ ಜೀವಿಯಾಗಿ ಪ್ರವಚನಕಾರರಾಗಿ ಸಾಹಿತಿಗಳಾಗಿ ಸಂಶೋಧಕರಾಗಿ ವಚನ ಶಾಸ್ತ್ರ ಸಾಗರದೊಳಕ್ಕಿಳಿದು ಲಿಂಗಾಯತ ಧರ್ಮಕ್ಕೆ ಬೇಕಾಗುವ ವಿಧಿವಿಧಾನಗಳ ಆಚರಣೆ, ಹೊಸಹೊಸ ವಿಚಾರ, ಯೋಜನೆಗಳೆಂಬ ಮುತ್ತು ರತ್ನಗಳನ್ನು ತೆಗೆದು ಕೊಟ್ಟವರಲ್ಲಿ ಇವರು ಅಗ್ರಗಣ್ಯರು. ವಚನ ಶಾಸ್ತ್ರಸಾಗರವನ್ನೇ ಧುಮುಕಿ ಅದರೊಳಗಿಂದ ತೆಗೆದು ಆನಂತರ ಹೊಚ್ಚ ಹೊಸ ಆಚಾರ ವಿಚಾರಗಳು ಎಂಬ ಮುತ್ತು ರತ್ನಗಳಲ್ಲಿ 'ಲಿಂಗದೇವ' ಎಂಬುದೊಂದು ಅತ್ಯಮೂಲ್ಯವಾದ ರತ್ನ, ಇದನ್ನು ಪೂಜ್ಯ ಮಾತಾಜಿಯವರು ಲಿಂಗಾಯತ ಧರ್ಮಿಯರಿಗೆ ಕೊಡುಗೆಯಾಗಿ ಕೊಟ್ಟು ಮಹಾದುಪಕಾರ ಮಾಡಿದ್ದಾರೆ.

ಶರಣರಾದ ಪ್ರೊ.ಎಸ್.ಎಂ. ಸಾಬೋಜಿಯವರು ವಿಚಾರ ಮಾಡಿದ ಪ್ರಕಾರ ಮೊದಲಿನ ಕವಿ ಕಾವ್ಯನಾಮವನ್ನು ಇಂದಿನವರಾದ ನಾವು ಬದಲಾಯಿಸುತ್ತಾ ಹೋದರೆ ಹಿಂದಿನ

ಕವಿಗಳಿಗೆ ನೋವಾಗುವುದಿಲ್ಲವೇ ಎಂದು . ಇದು ಸತ್ಯವಾದ ಮಾತು . ಈಗ ಇಲ್ಲಿಯವರೆಗೆ ಎಷ್ಟೋ ಕವಿಗಳು ಆಗಿ ಹೋಗಿದ್ದಾರೆ, ಇನ್ನು ಎಷ್ಟೋ ಕವಿಗಳು ಇದ್ದಾರೆ. ದೊಡ್ಡ ಸಾಹಿತಿಗಳಿದ್ದಾರೆ, ಆದರೆ ಅವರೆಲ್ಲ ಇಟ್ಟುಕೊಂಡ ತಮ್ಮ ಕಾವ್ಯನಾಮ ಕೇವಲ ಒಂದೇ ಒಂದು ಮಾತ್ರ. ಅದನ್ನೇ ನಾವು ಇಂದಿನವರು ಬದಲಾಯಿಸಿ ಮತ್ತೊಂದು ಕಾವ್ಯ ನಾಮ ಮಾಡಿದರೆ ಹಿಂದಿನ ಕವಿಗಳಿಗೆ ಖಂಡಿತ ನೋವಾಗುತ್ತದೆ.

ಪೂಜ್ಯ ಮಾತೆ ಮಹಾದೇವಿಯವರು ಧರ್ಮಕರ್ತರ (ಕಾವ್ಯನಾಮ) ವಚನಾಂಕಿತ ಬದಲಾಯಿಸಿಲ್ಲ, ಧರ್ಮಕರ್ತರು ಕೆಲವರು ಶರಣರಂತೆ ಎರಡು ವಚನ ಮುದ್ರಿಕೆಯನ್ನಾಗಿ ಬಳಸಿಕೊಂಡಿದ್ದಾರೆ. ಆ ಎರಡನೇ ಮುದ್ರಿಕೆ 'ಲಿಂಗದೇವ ', ಅದನ್ನೇ ಸಂಶೋಧಿಸಿ ಪೂಜ್ಯ ಮಾತಾಜಿಯವರು ನಮಗೆ ತೋರಿಸಿ ಕೊಟ್ಟಿದ್ದಾರೆ.

ಉದಾ : ಸಿದ್ಧರಾಮೇಶ್ವರ ಅಂಕಿತನಾಮ

1.ಕಪಿಲಸಿದ್ಧ ಮಲ್ಲಿಕಾರ್ಜುನ
2.ಯೋಗಿನಾಥ

ಮತ್ತು

ಹಡಪದ ಅಪ್ಪಣ್ಣನವರ ಅಂಕಿತನಾಮ

1.ಬಸವಪ್ರಿಯ ಕೂಡಲ ಚೆನ್ನಬಸವಣ್ಣ
2.ಬಸವಪ್ರಿಯ ಕೂಡಲ ಸಂಗಮದೇವ ಎಂದು

ಹೀಗೆ ಗುರು ಬಸವಣ್ಣನವರು ಕೂಡಾ

1.ಕೂಡಲ ಸಂಗಮದೇವ
2.ಲಿಂಗದೇವ ಎಂದು ಎರಡು ಅಂಕಿತನಾಮಗಳನ್ನು

ಇಟ್ಟುಕೊಂಡು ಸೃಷ್ಟಿಕರ್ತನನ್ನ ಹೆಸರಿಸಿದ್ದಾರೆ.

1. ಗುರು ಬಸವಣ್ಣನವರು ಬಾಲ್ಯ ಜೀವನದಲ್ಲಿ ಯೋಗಿ ಶಿವ (ಪಾರ್ವತಿ ಗಂಡ)ನನ್ನೆ ಇವನೆ ಪರಮಾತ್ಮ ಸಚ್ಚಿದಾನಂದನೆಂದು ಕಲ್ಪಿಸಿಕೊಂಡು ಈ ಶಿವನಿಗೆ ಕೂಡಲಸಂಗಮದೇವ ಎಂದರು.

2. ಧರ್ಮಗುರು ಬಸವಣ್ಣನವರು ಪ್ರೌಢಾವಸ್ಥೆಯಲ್ಲಿದ್ದಾಗ, ಧರ್ಮ ಮತ್ತು ದೇವರ ಬಗ್ಗೆ ಹೆಚ್ಚಿನ ತಿಳುವಳಿಕೆ ಜ್ಞಾನ, ಅರಿವು ಮೂಡಿದಂತೆ ದೇವರ ಕಲ್ಪನೆ ಬಗ್ಗೆ ಹೊಸ ಹೊಸ ವಿಚಾರ ಹೊಳೆಯತೊಡಗಿತು. ಹೇಗೆಂದರೆ ಯೋಗಿ ಶಿವನು ಕೂಡಾ ನಮ್ಮಂತೆ ಹುಟ್ಟಿದವನು, ಯೋಗ ಸಾಧನೆಯಿಂದ ದೊಡ್ಡ ಯೋಗಿಯಾಗಿ ಒಂದು ಧರ್ಮ (ಸ್ಥಾಪಿಸಿದವನು) ಕೊಟ್ಟವನು. ಇವನು ಹೇಗೆ ಪರವಸ್ತುವಾಗಬಲ್ಲ ಎಂದುಕೊಂಡು ಜಗಜ್ಯೋತಿ ಬಸವಣ್ಣನವರು ವಿಚಾರ ಮಾಡುತ್ತ ಹೋದಂತೆ ಅವರಿಗೆ ಜ್ಞಾನಾಭಿವೃದ್ಧಿಯಾಗತೊಡಗಿತು. ಅವರು ದೇವರ ಧ್ಯಾನದಲ್ಲೆ ಮಗ್ನರಾಗಿ ಕುಳಿತಾಗ ಅವರಿಗೆ ದಿವ್ಯ ಬೆಳಕು (ಜ್ಯೋತಿ) ಕಾಣಿಸಿಕೊಂಡಿತು. ಆಗ ಬಸವಣ್ಣನವರಿಗೆ ಪರಾತ್ಪರ ಪರಶಿವನ ಸ್ವರೂಪ ಕುರಿತು ಜ್ಞಾನೋದಯವಾಯಿತು. ನಿರಾಕಾರ ಪರವಸ್ತುವಿನ ಕಲ್ಪನೆ ಹೊಳೆಯಿತು.

ನಿರಾಕಾರ ಪರಮಾತ್ಮನ ಪರಿಕಲ್ಪನೆ ಹೊಳೆದ ಮೇಲೆ ಅದನ್ನು ಪೂಜಿಸುವುದು ಹೇಗೆ ಎಂದು ನಿರಾಕಾರ ಪರಶಿವನ ಸಾಕಾರ ರೂಪವಾದ ಇಷ್ಟಲಿಂಗವನ್ನು ಕಂಡುಹಿಡಿದು ಕೊಟ್ಟರು. ಇಷ್ಟಲಿಂಗವು ಸೃಷ್ಟಿಕರ್ತ ಲಿಂಗದೇವನ ಕುರುಹು ಎಂದು ತಿಳಿಸಿ ಇಷ್ಟಲಿಂಗಕ್ಕೆ ಪೂಜಿಸತೊಡಗಿದರು. ಅಂದಿನಿಂದ ಅವರು ಪರವಸ್ತುವಾದ ಲಿಂಗದೇವನನ್ನೆ ತಮ್ಮ ವಚನ ಮುದ್ರಿಕೆಯನ್ನಾಗಿ ಪರಿವರ್ತಿಸಿಕೊಂಡರು. ಹೀಗೆ ಬಸವಣ್ಣವನರು ತಮ್ಮ ವಚನಗಳಿಗೆ ಎರಡು ನಾಮಾಂಕಿತ ಮಾಡಿಕೊಂಡಿದ್ದಾರೆಂದು ಪೂಜ್ಯ ಮಾತಾಜಿಯವರು ಸಂಶೋಧಿಸಿ ತೋರಿಸಿಕೊಟ್ಟರೆ ವಿನಹ ಅವರು ವಚನಾಂಕಿತ ಬದಲಾಯಿಸಲಿಲ್ಲ.

ಉದಾ : ಧರ್ಮಗುರು ಬಸವಣ್ಣವರು ಹೇಳುವ ಒಂದು ವಚನ ನೋಡೋಣ.

ಹೊನ್ನ ಹಾವುಗೆಯ ಮೆಟ್ಟಿದವನ ।, ಮಿಡಿ ಮುಟ್ಟದ ಕೆಂಜೆಡೆಯವನ ।
ಮೈಯಲ್ಲಿ ವಿಭೂತಿ ಧರಿಸಿದವನ ।, ಕರದಲ್ಲಿ ಕಪಾಲ ಹಿಡಿದವನ ।
ಅರ್ಧನಾರಿಯಾದವನ ।, ಬಾಣನ ಬಾಗಿಲ ಕಾಯ್ದವನ ।
ನಂಬಿಗೆ ಕುಂಟಣೆಯಾದವನ ।, ಚೋಳಂಗೆ ಹೊನ್ನ ಮಳೆಯ ಕರೆದವನ ।
ಎನ್ನ ಮನಕ್ಕೆ ಬಂದವನ ।, ಸದ್ಭಕ್ತರ ಹೃದಯದಲ್ಲಿಪ್ಪವನ ।
ಮಾಡಿದ ಪೂಜೆಯಲೊಪ್ಪವನ ।, ಕೂಡಲಸಂಗಯ್ಯನೆಂಬವನ । ಎಂದು.

ಇಲ್ಲಿ ಗುರು ಬಸವಣ್ಣನವರು ಕೂಡಲಸಂಗಮದೇವ ಎಂದು ಯಾರಿಗೆಂದರು ಎಂದು ನಾವು ಅರ್ಥೈಸಬೇಕು ? ಅರ್ಧನಾರೀಶ್ವರನಾದ ಈಶ್ವರನಿಗೋ ಅಥವಾ ಸಚ್ಚಿದಾನಂದ ಸ್ವರೂಪಿ ಪರವಸ್ತುವಿಗೋ ? ಇಲ್ಲಿ ಧರ್ಮಕರ್ತರು ಪಾರ್ವತಿ ಗಂಡ ಈಶ್ವರನಿಗೆ ಕೂಡಲಸಂಗಮದೇವ ಎಂದರೆಂದು ಅರ್ಥವಾಗುವುದಿಲ್ಲವೆ ? ಧರ್ಮಗುರು ಬಸವಣ್ಣನವರು ಇಲ್ಲಿ 'ಕೂಡಲಸಂಗಮದೇವ' ಎಂದಿದ್ದು ಪರಾತ್ಪರ ಪರವಸ್ತುವಿಗೆ ಸಾಂಕೇತಿಸುವುದಿಲ್ಲ. ಇಂಥ ನೂರಾರು ಮಾತುಗಳನ್ನು ಅವರ ವಚನಗಳಲ್ಲಿ ನಾವು ಕಾಣಬಹುದು.

ಧರ್ಮಗುರು ಬಸವಣ್ಣನವರ ಇನ್ನೊಂದು ವಚನ ಹೀಗಿದೆ.

ಬಿಳಿಯ ಕರಿಕೆ, ಕಣಗಿಲೆಲೆಯ, ತೊರೆಯ ತಡಿಯ ಮಳಲ ತಂದು,
ಗೌರಿಯ ನೋನುವ ಬನ್ನಿರೆ.
ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು
ಅನುಪಮದಾನಿ ಕೂಡಲ ಸಂಗಮದೇವ ಗಂಡನಾಗಬೇಕೆಂದು.

ಈ ಮೇಲಿನ ವಚನದಲ್ಲಿ ಅನುಪಮದಾನಿ 'ಕೂಡಲಸಂಗಮದೇವ' ಎಂದರೆ ಯಾರು? ಪರಾತ್ಪರ ಪನವಸ್ತುವಿಗೆ ಎಂದರೆ ? ಹಾಗಾದರೆ ಗೌರಿವ್ರತ ಮಾಡುವ ಅವಶ್ಯ ಏನಿತ್ತು ? ತೊರೆಯ ತಡಿಯ ಮಳಲು ತಂದು ಶಿವಲಿಂಗವನ್ನು ಗೌರಿಯನ್ನು ಮಾಡಿ ಹೂ ಪತ್ರೆಯಿಂದ ಪೂಜೆ ಸಲ್ಲಿಸಿ ಶಿವನು ಗೌರಿಯ ಗಂಡನಾಗಬೇಕೆಂದು ವ್ರತ ಏಕೆ ಮಾಡಿದರು ? ಚಿಕ್ಕ ಚಿಕ್ಕ ಮಕ್ಕಳನ್ನು ಕರೆದು ಬಸವಣ್ಣನವರು ಈ ಆಟ ಏಕೆ ಆಡಿದರು ? ಇಂಥ (ಯೋಗಿ ಶಿವನ ಸಾಂಕೇತಿಸುವ) ವಚನಗಳಿಗೆಲ್ಲ 'ಕೂಡಲಸಂಗಮದೇವ' ಎಂದು ಪರಾತ್ಪರ ಪರವಸ್ತುವನ್ನು ಕುರಿತು ಹೇಳಿದ ವಚನಕ್ಕೆ 'ಲಿಂಗದೇವ' ಎಂದು ತಮ್ಮ ವಚನಾಂಕಿತದಿಂದ ಕರೆದರು.

ಉದಾ : ಪರವಸ್ತುವನ್ನು ಕುರಿತು ನುಡಿದ ವಚನ ನೋಡೋಣ

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ ।
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ,
ಲಿಂಗದೇವಯ್ಯಾ, ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ ।

ಧರ್ಮಗುರು ಬಸವಣ್ಣನವರು ಪ್ರೌಢಾವಸ್ಥೆಗೆ ಬಂದಂತೆ ದೇವರ ಬಗ್ಗೆ ವಿಶಾಲ ಕಲ್ಪನೆ ಮೂಡಿದಂತೆ ತಮ್ಮ ವಚನಗಳಿಗೆ ಸೃಷ್ಟಿಕರ್ತನ ಸಾಂಕೇತಿಸುವ 'ಲಿಂಗದೇವ' ವಚನ ಮುದ್ರಿಕೆಯನ್ನು ಇಟ್ಟುಕೊಂಡರು. ಹೀಗೆ ಬಸವಣ್ಣನವರು ಅವರ ವಚನಗಳಿಗೆ ಎರಡು ಪ್ರಕಾರದ ವಚನಾಂಕಿತ (ಕಾವ್ಯನಾಮ)ವನ್ನು ಮಾಡಿಕೊಂಡರು.

ಶರಣರಾದ ಪ್ರೊ.ಎಸ್.ಎಂ ಸಾಬೋಜಿಯವರು ಮಾಡಿದ ವಿಚಾರದ ಪ್ರಕಾರ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ತಾವು ಬರೆದ 'ಅಕ್ಕನ ಪ್ರವಚನ' ಎಂಬ ಕೃತಿಯಲ್ಲಿ ಹೀಗೆ ಹೇಳಿದ್ದಾರೆ.

ಶರಣರು ತಮ್ಮ ವಚನ ಮುದ್ರಿಕೆಗಳಿಗೆ ಆಯ್ದುಕೊಂಡ ಹೆಸರುಗಳು ಕೆಲವು ಕ್ಷೇತ್ರಗಳಲ್ಲಿರುವ ಸ್ಥಾವರಲಿಂಗದ ಸಂಕೇತಗಳೆಂದು ಕೆಲವರ ಭ್ರಾಮಕ ಕಲ್ಪನೆ ಇದ್ದಂತಿದೆ, ಇದು ತಪ್ಪು ಕಲ್ಪನೆ, ವಚನ ಮುದ್ರಿಕೆಗಳು ವಿಶಿಷ್ಟ ಸ್ಥಾವರಲಿಂಗದ ಹೆಸರುಗಳಾಗದೇ ಪರಾತ್ಪರ ಪರವಸ್ತುವಿಗೆ ಇವರು ಇಷ್ಟಪಟ್ಟು ಕರೆದ ಹೆಸರುಗಳಾಗಿವೆ. ಹೀಗಿದ್ದರೂ ಮಾತೆ ಮಹಾದೇವಿಯವರು ಗುರುಗಳ ಮಾತಿಗೆ ಗೌರವ ಕೊಡದೆ ಬಸವಣ್ಣನವರ ವಚನ ಮುದ್ರಿಕೆ 'ಕೂಡಲ ಸಂಗಮದೇವ' ಬದಲಿಗೆ 'ಲಿಂಗದೇವ' ಎಂದು ಮಾಡಿದ್ದಾರೆ. ಈ ರೀತಿ ವಚನ ಮುದ್ರಿಕೆ ಬದಲಾಯಿಸಿದರೆ ದೀಕ್ಷಾಗುರು ಮತ್ತು ಧರ್ಮಗುರು ದ್ರೋಹವಾಗುವುದಿಲ್ಲವೆ? ಎಂದು ಪ್ರಶ್ನಿಸುತ್ತಾ, ಹೀಗೆ ಮಾಡಿದರೆ ಯಾರಿಗೆ ತಾನೆ ಒಳ್ಳೆಯದಾಗುತ್ತದೆ ಎಂದು ನುಡಿಯುತ್ತಾರೆ.

ಮೇಲಿನ 'ಜಗದಗಲ ಮುಗಿಲಗಲ ನಿಮ್ಮಗಲ' ಎಂಬ ವಚನ ಪರಾತ್ಪರ ಪರವಸ್ತುವನ್ನು ಕುರಿತು ಹೇಳಿದ ವಚನ. ಈ ವಚನದಲ್ಲಿ ಬರುವ ಪ್ರತಿಯೊಂದು ಸಾಲುಗಳು ಆ ಸಾಲಿನ ಪ್ರತಿಯೊಂದು ಶಬ್ದಗಳು ಪರಾತ್ಪರ ಪರವಸ್ತುವಿಗೆ ಹೋಲಿಕೆಯಾಗುತ್ತದೆ. ಇವು ಹುಟ್ಟು-ಸಾವಿಲ್ಲದ ಲಿಂಗದೇವನಿಗೆ ಹೋಲುವ ಶಬ್ದಗಳಿವೆ.

ಅಪ್ರತಿಮ ಲಿಂಗವೇ ಲಿಂಗದೇವಯ್ಯಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ ಎಂದು ಬಸವಣ್ಣನವರು ಆ ಪರವಸ್ತುವಿಗೆ ಕರೆದಿದ್ದಾರೆ ವಿನಹ ಅಪ್ರತಿಮ ಲಿಂಗವೇ ಕೂಡಲಸಂಗಮದೇವಯ್ಯಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ ಎಂದು ಹೇಳಲಿಲ್ಲ.

ಹೀಗೆ ಧರ್ಮಗುರು ಹೇಳಿದ (ಬರೆದ) ವಚನಾಂಕಿತವನ್ನೆ ಪರಮ ಪೂಜ್ಯ ಮಾತೆಮಹಾದೇವಿಯವರು ಬಸವಣ್ಣನವರ ವಚನ ಶಾಸ್ತ್ರದಿಂದ ಸಂಶೋಧಿಸಿ ಲಿಂಗಾಯತ ಧರ್ಮೀಯರಿಗೆ ಕೊಡುಗೆಯಾಗಿ ಕೊಟ್ಟಿದ್ದಾರೆ ಹೊರತು ಅವರು ವಚನಾಂಕಿತ ಬದಲಾಯಿಸಲಿಲ್ಲ 'ಕೂಡಲಸಂಗಮದೇವ' 'ಲಿಂಗದೇವ' ಎಂದು ಎರಡೂ ವಚನಾಂಕಿತಗಳು ಬಸವಣ್ಣನವರೆ ಹೇಳಿದ್ದಾರೆಂದು ಸಂಶೋಧಿಸಿದ್ದಾರೆ.

ಶರಣರಾದ ಪ್ರೊ.ಎಸ್.ಎಂ.ಸಾಬೋಜಿ, ರಾಜ ಬೆನ್ನೂರ್ ಇವರು ಭಾವಿಸಿಕೊಂಡ ಪ್ರಕಾರ ಬಸವಣ್ಣನವರ ಎರಡು ವಚನಾಂಕಿತಗಳಾದ 'ಕೂಡಲಸಂಗಮದೇವ' (ಯೋಗಿಶಿವನಿಗೆ ಸಂಕೇತಿಸುತ್ತದೆ.) 'ಲಿಂಗದೇವ '(ಪರವಸ್ತುವಿಗೆ ಸಾಂಕೇತಿಸುತ್ತದೆ) ಇವು ಎರಡೂ ವಚನಾಂಕಿತಗಳು ಬಸವಣ್ಣನವರೆ ಹೇಳಿದ್ದಾರೆಂದು ಸಂಶೋಧಿಸಿಕೊಟ್ಟರೆ ಇದು ದೀಕ್ಷಾ ಗುರು ದ್ರೋಹವೇ? ಧರ್ಮಗುರು ದ್ರೋಹವೇ ?

ಬಸವ ತತ್ವಾಭಿಮಾನಿಗಳೆಲ್ಲರು ಲಿಂಗಕಟ್ಟಿಕೊಂಡ ಲಿಂಗಾಯತರೆಲ್ಲರೂ ಬಸವಣ್ಣನವರನ್ನು ನೆನೆಸುವ ಸಕಲ ಮಾನವ ಕುಲಕೋಟಿಯು ಬಸವಣ್ಣನವರ ಈ ಎರಡು ವಚನಾಂಕಿತ ಬಳಸಿ ಹೇಳಿದರೆ, ಬರೆದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ ವಿನಹ ಕೆಡಕಾಗುವುದಿಲ್ಲ.

-ಅಡಿವೆಪ್ಪಾ.ಎಸ್.ಪಟ್ನೆ
ಗಡಿ ಕುಸನೂರ.

ಬಸವಾನುಗ್ರಹ ಧಾಮ

<u>ಬಸವ ಕಲ್ಯಾಣದ ವಿಶೇಷ ಆಕರ್ಷಣೆ :</u> ಬೀದರ್ ಜಿಲ್ಲೆ ಒಂದು ಬಗೆಯ ವಿಶೇಷ ಲಾಟರೈಟ್ ಶಿಲಾಪದರವನ್ನು ಹೊಂದಿದೆ. ಬಸವ ಕಲ್ಯಾಣದಲ್ಲಿ ಬಸವ ಧರ್ಮ ಪೀಠದ ಬಸವ ಮಹಾಮನೆ ಆವರಣದಲ್ಲಿ ಸಹ ವಿಸ್ತಾರವಾದ ಲಾಟರೈಟ್ ಶಿಲಾಪದರಗಳಿವೆ. ಅದರಲ್ಲಿ ಗವಿಯನ್ನು ಕೆತ್ತಿಸುವ ಪೂಜ್ಯ ಮಾತಾಜಿಯವರ ಕನಸು ಎಷ್ಟೋ ವರ್ಷಗಳದ್ದು. ಈ ವರ್ಷ ಅದು ನನಸಾಗುತ್ತ ಬಂದಿದ್ದು, ಗವಿಯ ಒಳಭಾಗದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಶ್ರೀ ಬಸವೇಶ್ವರ ಪೂಜಾವ್ರತವನ್ನು ನೆರವೇರಿಸಿ, ಸಹಸ್ರ ಬಸವಲಿಂಗ ಮಂತ್ರ ಪಠಣವನ್ನು ಪೂರೈಸಿದರು. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು 108 ಮಂತ್ರ ಪಠಣ ಮಾಡಿ, ನಂತರ ಗವಿಯನ್ನು ಕರುಣೋದಕವನ್ನು ಸಿಂಪಡಿಸಿ ದೈವೀಕರಿಸಿ, ಸಾರ್ವಜನಿಕ ವೀಕ್ಷಣೆಗೆ ಅನುವು ಮಾಡಿಕೊಟ್ಟರು.

1. ಶ್ರೀ ಗುರು ಬಸವಣ್ಣನವರ ಅಭಯ ಮುದ್ರೆಯ ಮೂರ್ತಿ
2. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರ ಮೂರ್ತಿ
3. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಮೂರ್ತಿ
4. ಬಸವ ಯೋಗಿ ಸಿದ್ಧರಾಮೇಶ್ವರರ ಮೂರ್ತಿ
5. ವೀರ ವಿರಾಗಿಣಿ ಅಕ್ಕಮಹಾದೇವಿಯ ಮೂರ್ತಿ
6. ವೀರ ಗಣಾಚಾರಿ ಮಡಿವಾಳ ಮಾಚಿದೇವರ ಮೂರ್ತಿ
7. ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯ ಮೂರ್ತಿ

ಇವುಗಳನ್ನು ಬಸವಾನುಗ್ರಹ ಧಾಮ ಎಂಬ ಬೃಹತ್ ಗವಿಯ ಒಳಗೆ ಪುನಃ ತೋಡಲಾಗಿರುವ ಬೇರೆ ಬೇರೆ ಗವಿಗಳಲ್ಲಿ ಕೂರಿಸಲಾಗಿದೆ. ಇಷ್ಟಲಿಂಗಾರ್ಚನೆ, ತ್ರಾಟಕಯೋಗಗಳಲ್ಲಿ ಈ ಶರಣರು ಮಗ್ನರಾಗಿರುವಂತೆ ಮೂರ್ತಿಗಳನ್ನು ನಿರ್ಮಿಸಲಾಗಿದೆ.

<u>ಹವಾನಿಯಂತ್ರಿಕ ಕೋಣೆ :</u> ಹೊರಗಡೆ ಬಿರುಬಿಸಿಲು ಬೆಂಕಿಯಂತೆ ಸುಡುತ್ತಿದ್ದರೆ ಗವಿಯನ್ನು ಪ್ರವೇಶಿಸುತ್ತಲೇ ಹವಾ ನಿಯಂತ್ರಿತ ಕೋಣೆಯನ್ನು ಹೊಕ್ಕಂತೆ ಆಗಿ ಹಾಯೆನಿಸುತ್ತದೆ. ನಿಸರ್ಗದ ಅಚ್ಚರಿ ಎಂಬ ಅನುಭವವಾಗುತ್ತದೆ. ಒಂದು ಕಡೆಯಿಂದ ಪ್ರವೇಶಿಸಿ, ಎಲ್ಲ ಶರಣರ ದರ್ಶನ ಮಾಡಿ, ಮತ್ತೊಂದು ದ್ವಾರದಿಂದ ಹೊರಬರುವಂತೆ ಗವಿಯನ್ನು ನಿರ್ಮಿಸಲಾಗಿದೆ. ಬಸವ ಸಂತಾನವನ್ನು ಬನ್ನಿರೆಂದು ತೆರೆದ ಹೃದಯದಿಂದ ಆಹ್ವಾನಿಸುವ ಬಸವಾನುಗ್ರಹ ಧಾಮವನ್ನು ಕೆತ್ತಿಸುವ ಪೂಜ್ಯ ಶ್ರೀ ಮಾತಾಜಿಯವರ ಅದಮ್ಯ ಆಸೆಯನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಿದ ಶ್ರೇಯಸ್ಸು ಕಾಯಕಯೋಗಿ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳದ್ದು. ನಕ್ಷೆಯ ಚಿಂತನೆಯೂ ಅವರದ್ದೇ. ಗವಿಯ ವೆಚ್ಚಕ್ಕೆಂದು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟವರು ಬೀದರಿನ ಶರಣೆ. ಶೀತಲ್ ಮತ್ತು ಶರಣ. ಕಾಶೀನಾಥ ಸೂರ್ಯವಂಶಿ. ತಮಿಳು ನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯ ಶರಣ. ಗುರುಬಸವಪ್ಪ ಮತ್ತು ಶರಣೆ. ಪುಷ್ಪಾ ಅವರು ಕೊಟ್ಟ ಒಂದು ಲಕ್ಷ ರೂಪಾಯಿಗಳನ್ನು ಸಹ ಗವಿಯ ನಿರ್ಮಾಣಕ್ಕೆ ಬಳಸಲಾಗಿದೆ. ಇನ್ನೂ ಸುಮಾರು 2(ಎರಡು) ಲಕ್ಷ ರೂಪಾಯಿಗಳ ಖರ್ಚು ಬರುವ ಸಾಧ್ಯತೆ ಇದೆ. ಒಂದೊಂದು ಅಡಿ ಕೊರೆಯಲು ಬಹಳ ಪರಿಶ್ರಮ ಪಡಬೇಕಾದ ಸನ್ನಿವೇಶದಲ್ಲಿ ಇಷ್ಟು ದೊಡ್ಡ ಗವಿಯನ್ನು ಇಷ್ಟು ಬೇಗನೆ ಕೊರೆದಿರುವುದು ಆಶ್ಚರ್ಯಕರ ಎಂದು ಜನರು ಉದ್ಗಾರ ತೆಗೆಯುತ್ತಾರೆ. ಪೂಜ್ಯ ಶ್ರೀ ಸಿದ್ಧರಾಮಸ್ವಾಮಿಗಳ ಮನೋವೇಗಕ್ಕೆ ಸ್ಪಂದಿಸಿ ಗವಿಯನ್ನು ಕೊರೆಯುವ ಕಾರ್ಮಿಕರು ಹಗಲಿರುಳು ಶ್ರಮಿಸಿದ್ದಾರೆ.

ಶರಣ ಶೈಲದ ಬಸವಾನುಗ್ರಹ ಮಂಟಪವು ದರ್ಶನಕ್ಕೆ ಶ್ರದ್ಧಾಕೇಂದ್ರವಾಗಿರುವಂತೆ, ಇನ್ನೊಂದು ಆಕರ್ಷಣೆಯ ಕೇಂದ್ರ ಬಿಂದು ಒಕ್ಕಲಿಗ ಮುದ್ದಣ್ಣನವರು ಎರಡು ಸುಂದರ ಎತ್ತು ಮತ್ತು ಬಿತ್ತುವ ಕೂರಿಗೆಯೊಡನೆ ಬೀಜ ಬಿತ್ತುವುದು. ಮುದ್ದಣ್ಣನ ಧರ್ಮಪತ್ನಿ ಬೀಜವನ್ನು ಬಿತ್ತುವ ಶಿಲ್ಪವು

ಇವು ಮೂರ್ತಿಗಳಲ್ಲ ಜೀವಂತವಾಗಿ ನಿಂತಿರುವ ರೈತ ದಂಪತಿಗಳು ಎಂಬ ಭಾವವನ್ನು ಬಿಂಬಿಸುತ್ತವೆ. ಶರಣ ಶೈಲಕ್ಕೆ ಮತ್ತಷ್ಟು ಮೆರುಗು ತಂದಿವೆ, ಗರಿ ಬಿಚ್ಚಿ ನರ್ತಿಸುವ ನವಿಲು, ಜಿಂಕೆಗಳು, ವಿವಿಧ ಪಕ್ಷಿಗಳು ಕಲಾವಿದ ಬಸವರಾಜನ ಕೈಚಳಕದಿಂದ ಇನ್ನೂ ಅನೇಕ ಶರಣ ಶರಣೆ ಆಗಮಿಸಿ ಶರಣ ಶೈಲಕ್ಕೆ ಆಗಮಿಸಲಿದ್ದಾರೆ.

<u>ಪ್ರಾರ್ಥನಾ ಮಂಟಪ ಮತ್ತು ನೀಲಾಂಬಿಕಾ ಶರಣ ಧಾಮ :</u>

ಬಸವ ಧರ್ಮ ಪೀಠದ ಬಸವ ಮಹಾಮನೆ ಆವರಣದಲ್ಲಿ ಬಸವ ಮಂಟಪ-ಪ್ರಾರ್ಥನಾ ಮಂಟಪ ರೂಪುಗೊಂಡಿರುವುದಲ್ಲದೆ ದಾನಿಗಳ ದೇಣಿಗೆಯ ನೆರವಿನಿಂದ ನೀಲಾಂಬಿಕಾ ಶರಣ ಧಾಮ ಎಂಬ ಅತಿಥಿ ಗೃಹದಲ್ಲಿ 20 ಕೋಣೆಗಳು ವಾಸ್ತವ್ಯಕ್ಕೆ ಸಿದ್ಧವಾಗಿವೆ. ಬಂದ ಯಾತ್ರಿಕರಿಗೆ ತಂಗಲು ಇದರಿಂದ ಅನುಕೂಲವಾದಂತಾಗಿದೆ.

108 ಅಡಿಯ ಬಸವಣ್ಣನವರ ಬೃಹತ್ ಪುತ್ಥಳಿಯ ನಿರ್ಮಾಣಕ್ಕೆ ಪೂರ್ವಭಾವಿಯಾಗಿ ಮಣ್ಣಿನ ಪರೀಕ್ಷೆ ನಡೆಯುತ್ತಿದ್ದು ಮಾಸ್ಟರ್ ಪ್ಲಾನ್ ಮಾಡಲು ಹಲವಾರು ತಜ್ಞ ಇಂಜನಿಯರ್ ಶ್ರಮಿಸುತ್ತಿದ್ದಾರೆ. 12ನೆಯ ಶತಮಾನದ ಅಧ್ಯಾತ್ಮಿಕ ವೈಭವವನ್ನು ಹೊಂದಲು ಬಸವ ಮಹಾಮನೆ ಸಜ್ಜಾಗುತ್ತಿದೆ.

ಬಂಟ್ವಾಳ : ಬಸವ ಜಯಂತಿ ಆಚರಣೆ

ಜಾತಿ ಮತ ಪಂಥ ಭೇದ ತೊಡೆದು ಹಾಕುವಂತೆ ಸಾವಿರಾರು ವರ್ಷಗಳ
ಬಂಟ್ವಾಳ, ಮೇ 15 : ಜಾತಿ ಮತ ಪಂಥ ಭೇದ ತೊಡೆದು ಹಾಕುವಂತೆ ಸಾವಿರಾರು ವರ್ಷಗಳ ಹಿಂದೆಯೇ ಕರೆ ನೀಡಿದ್ದ ಬಸವಣ್ಣನವರು ಸ್ತ್ರೀಯರಿಗೆ ಸಾಮಾಜಿಕ ಹಾಗೂ ಧಾರ್ಮಿಕ ಹಕ್ಕು ಒದಗಿಸಲೋಸುಗ ದುಡಿದ ಜಗತ್ತಿನ ಮೊಟ್ಟಮೊದಲ ಮಹಾ ಮಾನವತಾವಾದಿ ಎಂದು ಬಂಟ್ವಾಳ ವಕೀಲರ ಸಂಘದ ಅಧ್ಯಕ್ಷ ಕೆ.ಪಿ.ಸಿ ಸದಸ್ಯ ಅಶ್ವಿನಿ ಕುಮಾರ್ ರೈ ಹೇಳಿದ್ದಾರೆ. ಅವರು ಬಿ.ಸಿ ರೋಡ್ ಅಜ್ಜಿಬೆಟ್ಟು ಬಸವೇಶ್ವರ ದಿವ್ಯ ಜ್ಞಾನ ವಿದ್ಯಾಲಯದಲ್ಲಿ ಬುಧವಾರ ನಡೆದ 872ನೇ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬಸವೇಶ್ವರರ ಕಾಯಕವೇ ಕೈಲಾಸ ಮತ್ತು ಇತರ ತತ್ವಗಳನ್ನು ಪಾಲನೆ ಮಾಡಿದರೆ ಇಡಿಯ ಜಗತ್ತೇ ಉದ್ಧಾರವಾಗುತ್ತಿತ್ತು, 1924ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾಗಾಂಧೀಜಿಯವರು, ಎಲ್ಲರೂ ಬಸವಣ್ಣನವರ ತತ್ವಗಳನ್ನು ಪಾಲಿಸಿದರೆ ಬಸವಣ್ಣ ಅಂದು ಕಟ್ಟಿದ ಕಲ್ಯಾಣ ರಾಜ್ಯವನ್ನು ಮತ್ತೆ ಕಟ್ಟಬಹುದು ಎಂದು ಕರೆ ನೀಡಿದ್ದರು ಎಂದು ಸ್ಮರಿಸಿದರು.

ವೇದಿಕೆಯಿಂದ ಕೂಡಲ ಸಂಗಮ ಬಸವ ಧರ್ಮ ಪೀಠದ ಶ್ರೀ ಬಸವಕುಮಾರ ಸ್ವಾಮೀಜಿ ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಎಚ್.ಎಸ್.ಹೆಬ್ಬಾರ್, ಷಟಸ್ಥಲ ಧ್ವಜಾರೋಹಣ ಮಾಡಿದರು. ಮುಖ್ಯ ಶಿಕ್ಷಕಿ ಶ್ರೀಮತಿ ಕುಶಲಾ ಉಪಸ್ಥಿತರಿದ್ದರು. ಶರಣ ಎ. ಚಂದಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು!
ಅಣ್ಣಾ, ಶಶಿಧರನಟ್ಟಿದ ಮಣಿಹ ಪೂರೈಸಿತೆಂದು ನೀವು ಲಿಂಗೈಕ್ಯವಾದಡೆ
ನಿಮ್ಮೊಡನೆ ಭಕ್ತಿ ಹೋಯಿತಯ್ಯಾ.
ನಿಮ್ಮೊಡನೆ ಸದಾಚಾರ ಹೋಯಿತಯ್ಯಾ.
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ.
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತಲ್ಲಾ ಬಸವಣ್ಣಾ.
ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷಮೂರ್ತಿ ಬಸವಣ್ಣಾ!
ಬಸವಣ್ಣಪ್ರಿಯ ಚನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ!
-ಅಕ್ಕ ನಾಗಮ್ಮ

Path of Sharanas: Concept of Samsara

-Yogishwari

(Editorial Note: Following Vachana is being reprinted due to prior printing error.)

7. *Samsara and Mind (republished in part)*

In Samsara we are constantly subjected to the onslaught of many strong emotions that are beyond our control. These emotions create havoc on us resulting in turbulent mind. *Sharanas* advocate constant vigil against the attack of the emotions and protect our fragile mind. They are aware that it is very difficult for us to guard against the onslaught of the emotions. They advise us to not despair but to seek the help of God. Here is a Vachana that describes the pitiful condition of us in this horrific jungle of Samsara. It implores God to come to our aid and protect us from the onslaughts of the emotions.

Dear Father, please do not let me loose in this jungle of Samsara!
It is indeed horrific! Pray, do be with me and protect vigilantly.
Please let me not fall prey to the hunter named lust,
With his five dogs ready to spot me! O Lord
Kapilasiddhamallikarjuna!

- Siddharameshwara

ಸಂಸಾರವೆಂಬ ಅರಣ್ಯದೊಳಗೆ ಅಸುರವ್ವೊ, ಬಿಡದಿರೆನ್ನ.
ಬೊಪ್ಪ, ಬೆನ್ನಲಿದ್ದು ಸಲುಹುದೆನ್ನ.
ಪಂಚೇಂದ್ರಿಯವೆಂಬ ಐದು ನಾಯ ಬಿಟ್ಟು,
ಕಾಮನೆಂಬ ಬೇಟೆಗಾರನ ಬಾರಿಗೊಪ್ಪಿಸದಿರು,
ಕಪಿಲಸಿದ್ಧಮಲ್ಲಿಕಾರ್ಜುನ.

-ಸಿದ್ಧರಾಮೇಶ್ವರರ ವಚನ

In this Vachana a person is compared to a docile animal like a rabbit or deer. The jungle of Samsara is full of wild animals just waiting to prey on this poor creature. It has to constantly face many dangers lurking behind every tree and near every waterhole in the jungle. It is indeed hard for it to survive. Now, to add to it trepidations, there is a hunter in the forest! This hunter is a cunning person and to make the matters worse, he has five attack dogs with him. Even one dog will be able to spot the deer, and with five of them, the deer stands no chance! It will surely fall prey to the hunter.

The deer here is an individual on his journey. Unfortunately, he is in the middle of the jungle of Samsara. Wild animals in this forest

represent various attractions and attachments one will be subjected to in this life. The hunter is the strong emotion of lust (kama). Five dogs represent the five sensory organs that will spot the objects of lust. Then attacks the hunter, captivating his hapless prey. The poor person will not be able to continue on his journey for he is in the clasp of this hunter - lust. Indeed the grip of lust and desire is very strong. We should be constantly vigilant and avoid it, for it is almost impossible to escape from its stronghold once we fall prey to it.

In this Vachana, the person is aware of the dangers of the jungles of Samsara. Yet, like a deer, he feels helpless and begs God to be his guardian. In the journey towards God, there is no other protection other than God himself. It is the grace of God that can enable this journey and it is the grace of God that will eventually lead us to the final destination. Therefore, it is very important for us to acquire the grace of God. The grace of God will be upon us only when we try sincerely. *Sharanas* believe in self-help that will be rewarded with the divine grace. It is in our hands to make the effort to gain the divine grace. The deer has to make every effort to avoid the hunter and other animals in the forest. It needs to possess a strong desire to survive and escape the perilous jungle. It needs to completely surrender itself and beg for God's protective hand to guide it. We need to prepare our mind, body, and soul ready so that it is fit for receiving the divine grace. *Sharanas'* path shows us how to make ourselves fit so that God's grace will be bestowed on us. *... Continued*

9. *Fruitfulness of Life in Samsara*

Sharanas advocate unwavering faith in God as a crucial tool in escaping the traps of this Samsara. All of the Vachanas we have seen indicate the crucial need for the devotion to God. Following Vachana drives home this point in no uncertain terms! Sharanas, and especially Basavanna, are quite compassionate and generally kind in their approach of delivering messages. The following Vachana is interesting in its delivery of the message.

Waking at the crack of the dawn and not seeking the Lord,
To what avail is his Samsara?
Living corpse and falling corpse, to what avail is his Samsara?
Walking corpse and speaking corpse, to what avail is his Samsara?
O Lord, the Creator,
Not serving you, to what avail is his Samsara?

- Basavanna 159

ಹೊತ್ತಾರೆ ಎದ್ದು ಲಿಂಗದೇವನ
ದೃಷ್ಟಿಯಾರೆ ನೋಡದವನ ಸಂಸಾರವೇನವನ ?
ಬಾಳುವೆಣನ ಬೀಳುವೆಣನ ಸಂಸಾರವೇನವನ?
ನಡೆವೆಣನ ನುಡಿವೆಣನ ಸಂಸಾರವೇನವನ ?
ಕರ್ತೃ ಲಿಂಗದೇವಾ,
ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ ?

-ಬಸವಣ್ಣನವರ ವಚನ

Basavanna is urging us to not waste this life of ours! Right when the day is breaking with the very first hint of dawn, he advises us to pay respects to the Lord with gratitude and humbleness. He says that this entire life is futile unless we invite God into our lives. He proclaims that despite one breathing and moving about, he is as good as dead when one does not live to seek God. Performing worldly tasks and talking about worldly things are like the actions of a corpse, utterly worthless. He declares that unless one leads a life completely surrendering it in all humbleness to God, that life is indeed wasted.

This Vachana speaks to us in two distinct levels. The first level is a whipping to us immersed in this Samsara. When we wakeup in the morning, we are blessed with another day in this wondrous creation. We have passed the darkness of the night with many lurking dangers. The sun is ready to dispel the darkness and ensue another day with so much potential! We have to acknowledge the creator who has given us another day and another opportunity in this life. We should then make use of the day as an opportunity to move closer to Divinity. If not, we are no better than the thankless and ignorant beasts. Basavanna urges us to wakeup early before the crack of the dawn and offer thanks to the Lord in the form of morning worship, prayers, and meditation. We should then accept the day as a blessed 'prasada' from the Lord.

Basavanna is quite emphatic in saying that when one does not do this, his entire life is an absolute waste! Such a life is so futile that it is equivalent to not living. A person might be drawing breaths, but in effect he is dead. He might go about performing his daily routines walking and talking, but he is like cadaver being moved. He might appear to be living, but in fact he is stone dead like a corpse. He might be earning lots of money, gaining fame, and exerting power, but it is still a completely futile life equivalent to not even living! He might think he is doing his duty and enjoying life with family and friends, but in fact he is not even living. Everything we have, the earth that sustains us, the air we breathe, the water we drink, the food we eat -

everything - is indeed a gift from God! It is God who has given us body, health, education, job, wealth, family, and indeed everything. We are indeed ungrateful wretches unless we acknowledge this. We have to consciously accept the ownership of God and lead our lives in servitude towards God.

Even people who say that they believe in God have many excuses for not having God in their lives. Many say that they would like to offer prayers and worship in the mornings, but they just do not have time to do so. They make time for their morning cup of coffee, reading newspapers, cooking & taking care of the family, and getting dressed. But, they have no time to spare for God! If one really wants to, it is very easy to dedicate at least 30 minutes in the morning for worship. If they cannot dedicate a mere half an hour to the Lord who has bestowed the entire creation and 24 hours in a day, they are indeed ungrateful wretches! They are indeed greedy to snatch the day without even setting aside half an hour to the Lord who has given them another 24-hour day! These are the people that Basavanna addresses as corpse, for they have time for other things but none for God. Therefore anything they do on the days that are started without prayers to God is utter waste. Basavanna is emphatic in this Vachana about dedicating the precious first moments of the day to God. Some go through their morning routines of family and work and then make time for worship. Basavanna strongly says that this is not acceptable. The precious early morning moments has to be offered to the Lord.

Many find it hard to wake-up early in the morning. They feel that etting up early will cut into their precious sleep time essential for an active day ahead. It is important to set the priorities in life. When God is really and truly the top priority, one can easily find time for dawn worship and meditation. If necessary, one has to cultivate the habit of going to bed earlier. It is as if people cannot find it in themselves to cut an hour out of their nightly activities such as watching TV, chatting, and such. When one really and truly wants, they will always find a way to make time! If one cannot put God over their mundane activities, then why should one expect God to be benevolent to them? In this Vachana, Basavanna leaves absolutely no room for any justification for not starting the day with worship, prayer, and meditation. He declares that anyone who does not do this is indeed not part of the living world.

After starting out the day with worship, prayer, and meditation, one has to continue to acknowledge God's ownership of the creation. They need to spend the day in servitude of God. They need to learn to be aware of at the magical hand of God behind

everything in the creation. According to Sharana dharma, creation and society is a face of God. We need to spend each day in a fruitful manner doing our bit to enrich the society as a service to God. Samsara and Maya are indeed very powerful and cover the reality of God and his role in this creation from us. This is the reason Basavanna is so emphatic about dedicating the precious morning moments to God inviting Him into our lives. This will gradually help us gain a better understanding of the true nature of life, thus enabling us to deal with Samsara more effectively.

At the second level this Vachana is a hard knock on the people who have started to realize the futility of this life of Samsara. The dawn here is the first rays of realization of the true bliss of Divinity and the transitory nature of Samsara. We are beginning to realize that we, the land animals, are thrown into the middle of the ocean of Bhava. We need to move towards our natural abode – God. The life of Samsara is like a raft adrift on the ocean of Bhava. One needs to make use of the time and try to equip oneself to be rescued from this ocean. Instead of trying to be rescued, if one squanders away the opportunity of their time on the raft, then that entire life is wasted! It is as good as one not even living. There should be urgency in life, for every minute is precious. We need to target every action we perform and every word we utter towards preparing ourselves for the journey towards Divinity. Basavanna urges us to live this life of Samsara aimed towards this goal. An easy way to do this is to completely surrender to God in all humility and live the life in the service of the Creation - a manifestation of God.

Our life of Samsara can only be fruitful if we lead it as an offering to God. At the least, we should acknowledge and thank the Creator who has bestowed us this life. Further, we should make full use of the opportunities provided here and keep moving forward in our journey towards Divinity. For an individual's wholesome growth, Sharana Dharma recognizes three objects of reverences as manifestations of Divinity, the first being the worship of Lord. *Sharanas* also proclaim that the society is indeed a face of the Lord and advocate serving the society as a way of serving God. *Sharanas* also advocate serving the cause of Guru and spiritual movements as a means of serving God. We need to submit our body in the service of Guru who is like the representative of God to us. Our mind should be immersed in the true awareness of God. Our wealth should be dedicated to the service of the society, especially causes promoting the awareness of true divine nature. Basavanna urges us in this Vachana to not waste our lives here and take advantage of our life as an opportunity to move towards Divinity.

... *to be continued*

ಕಟ್ಟಡ ನಿಧಿಗಾಗಿ ಶರಣರುಗಳಾದ :

ಎಂ.ಎಸ್.ಪಿ.ಎಲ್ ಲಿಮಿಟೆಡ್, ಹೊಸಪೇಟೆ 1,00000
ಸೂರ್ಯಕಾಂತ ಶೀಲವಂತ, ಕಲಘಟಗಿ'' ''
ಲಿಂಗದೇವ ಮಿತ್ರ ಮಂಡಳಿ, ಬೀದರ್ 61,000
ಅಲ್ಲಂ ಸುಮಂಗಳಮ್ಮ ಮಹಿಳಾ
ಮಹಾವಿದ್ಯಾಲಯ ಸಿಬ್ಬಂದಿ, ಬಳ್ಳಾರಿ 61,000

108 ಅಡಿ ಪುತ್ಥಳಿಗಾಗಿ ಕಾಣಿಕೆ ಕೊಟ್ಟವರು

ಅಶೋಕ ಶೀಲವಂತರು, ಕಲಘಟಗಿ 1,00008
ತುಳಜಪ್ಪ ಚಂದ್ರಾಮಪ್ಪ ಹರಳಯ್ಯ, ಗೊಬ್ಬೂರ(ಬಿ) 51,000
ವಿಲಾಸಿನಿ ಸಿದ್ರಾಮಪ್ಪ ಲಖಮಣ ಮತ್ತು ಲಕ್ಷ್ಮಿಭಾಯಿ
ಸೋಮಶೇಖರ ಮಲ್ಕಪಗೌಡ ಮತ್ತು
ಚೆನ್ನಮ್ಮ ಸೂಗಣ್ಣ ಯಕಗಟ್ಟ, ಗುಲಬರ್ಗಾ 1,08000
ವನಜಾಕ್ಷಮ್ಮ ಓಂಕಾರಸ್ವಾಮಿ, ಬೆಂಗಳೂರು 50,000

ರೂ 11,111 ಮೇಲೆ ಕೊಟ್ಟವರು ಶರಣರುಗಳಾದ :

ಎಚ್.ರಾಧಾ ಭೀಮಣ್ಣ, ಮುನಿರಾಬಾದ್ 11,111
ಸುಜಾತ.ಜಿ.ಪಂಪಾಪತಿ '' ''
ಸುಜಾತ.ಬಿ.ಎಮ್.ಪಂಪಯ್ಯ ಮತ್ತು ಮಕ್ಕಳು ಬಳ್ಳಾರಿ ''
ಕೆ.ಪ್ರಭು. ಎಮ್.ಎಸ್.ಪಿ.ಎಲ್.ಲಿ, ಹೊಸಪೇಟೆ ''
ಮಲ್ಲಿಕಾರ್ಜುನಪ್ಪ ಶರಣಪ್ಪ ಪಡಶೆಟ್ಟಿ, ಹರಸೂರ್ ''
ಲಕ್ಷ್ಮೀದೇವಿ ಜೆ.ಹನುಮಂತಪ್ಪ ನಿವೃತ್ತ ಶಿಕ್ಷಕ, ಗಂಗಾವತಿ ''
ಬಿ.ಹಂಪಣ್ಣ ಗಂಗಾವತಿ, ರಾ.ಬ.ದಳ, ಗೌರವಾಧ್ಯಕ್ಷರು ''
ಜಿ.ಬಿ.ವೀರಬಸಪ್ಪ, ಗೋಣಿಸೋಮನಹಳ್ಳಿ ''
ಶಾರದಾ ಬಸವರಾಜು, ಭದ್ರಾವತಿ ''
ಮಹಾನಂದ ಪಂಚಯ್ಯ ಸ್ವಾಮಿ, ಉದಗೀರ್ ''
ಚನ್ನಬಸವ ಅಡಿವೆಪ್ಪ ಬಿಜಲಿ, ಗೋಕಾಕ್ ''
ಶಿವಲಿಂಗಪ್ಪ ಮುಂಡಪ್ಪಾ ಸಿರಸಂಗಿ, ಗೋಕಾಕ್ ''
ಅಶೋಕ್ ಮಲ್ಲಪ್ಪ ಬಿರಾದರ ಯಡ್ರಾಮಿ ''
ಬಸರಾಜ ಕರಡಿ, ಗುಲಬರ್ಗಾ ''
ಶಂಕ್ರಮ್ಮ ಗುಂಡಪ್ಪ ಮಹಾಂತಗೋಳ, ಗುಲಬರ್ಗಾ ''
ಬಸಮ್ಮ ಶಿವಬಸವ ವೀರಾಪುರ ಕೊಪ್ಪಳ ''
ಶರಣಮ್ಮ ಬಸವನಗೌಡರು ಪೋಲೀಸ್ ಪಾಟೀಲ, ''
ಚನ್ನಬಸಪ್ಪ ಮಹಾರುದ್ರಪ್ಪ ಉಪ್ಪಿನ '' ''
ರೇಣುಕಾ, ರೇವಣಪ್ಪ ಬೂತಣ್ಣವರ'' ''
ಲಲಿತಮ್ಮ ಬಸವರಾಜಪ್ಪ ಬನಿಕೊಪ್ಪ'' ''
ಸಂಗಮ್ಮ ಶಂಕ್ರಪ್ಪ ಬಂಗಾರಶೆಟ್ಟು'' ''
ಕಮಲಮ್ಮ ಶಂಕ್ರಪ್ಪ ಬಣಗಾರ '' ''
ಶಂಕ್ರಮ್ಮ ಪವಾಡಪ್ಪ ಗಡಾದ'' ''
ವನಜಾಕ್ಷಿ.ಡಿ.ಕೆ.ಬಸವರಾಜ'' ''
ಕೊಟ್ರಪ್ಪ ಶೇಡದ '' ''
ಜಯಮಂಗಳಾ ಫಕೀರಪ್ಪ ಬೇವಿನಗಿಡದ ''
ನಬೀಸಾಬ್ ಮತ್ತು ಮಕ್ಕಳು ಓಜನಹಳ್ಳಿ''
ಕೊಟ್ರಮ್ಮ ಶರಬಣ್ಣವರು'' 11,111
ಈರಮ್ಮ ನಂದಯ್ಯ ಹಿರೇಮಠ ಮಂಗಳಾಪುರ'' ''
ಡಿ.ನಂಜಮ್ಮ ಶಿವಕುಮಾರ್ ಬತ್ತಲಪಲ್ಲಿ'' ''
ಜಿ.ರಾಜಗೋಪಾಲ್ ನಾಯ್ಡು ಹೊಸಪೇಟೆ 5,000
ಎಚ್.ಎಮ್.ಸಿದ್ಧಲಿಂಗಯ್ಯ,'' ''
ಡಾ.ಪುನೀತ್ ಡಾ.ಸಂಗಮೇಶ್, ಇಂಗ್ಲೆಂಡ್ ''
ಗಂಗಾಧರ ಪಾಟೀಲ, ಬೀದರ್ 3,100
ಗಿರಿಜಮ್ಮ ಕಟ್ಟಿ, ಬ್ಯಾಹಟ್ಟಿ, 2,000
ಗಾಯತ್ರಿ ಸೋಮೇಶ್ವರ, ಚಿಕ್ಕಕೋಣತಿ 1,001
ಕನಕಲಕ್ಷ್ಮೀ.ಜಿ.ರಾಮದಾಸ, ಮುನಿರಾಬಾದ್ 1,001
ಎಚ್.ಎಮ್.ಸುಶೀಲ ಮುದ್ದುವೀರಪ್ಪ'' 2,001

ದಾಸೋಹ ನಿಧಿಗೆ 1,200ರೂ ಕೊಟ್ಟವರು ಶರಣರುಗಳಾದ :

ರುದ್ರಮ್ಮ, ರುದ್ದಪ್ಪ.ಎಂ,'' 1,200
ಪುಷ್ಪಾವತಿ, ಶ್ಯಾಮಸುಂದರ ಮಳ್ಳಿ, ಮುನಿರಾಬಾದ್''
ಸುಮಿತ್ರಾಬಾಯಿ, ಶ್ರೀನಿವಾಸ ದೇಸಾಯಿ, '' ''
ಬಿ.ಆನಂದ ಸ್ವಾಮಿ,'' ''
ಎಚ್.ಎಸ್.ಕೆಂಚರೆಡ್ಡಿ, '' ''
ವಿಶಾಲಾಕ್ಷಿ, ಚಂದ್ರಶೇಖರಯ್ಯ ರೋಣದಮಠ, '' ''
ರಾಜೇಶ್ವರಿ ಗಬ್ಬೂರ ಬಸಪ್ಪ '' ''
ವಿ.ಪಿ.ಉದ್ದಿಹಾಳ, ಮುನಿರಾಬಾದ್,'' ''
ಸಾಂಬ ಶಿವರಾಮ್, ಕಂಟ್ರ್ಯಾಕ್ಟರ್,'' ''
ಸುವರ್ಣ ಬಸಪ್ಪ ಸಾಲ್ಮನಿ , '' ''
ಜೆ.ವಿ.ಸುಬ್ರಮಣ್ಯಂ, '' ''
ಶಮಂತ, ರಾಮಮೂರ್ತಿ, '' ''
ವಿ.ಆರ್.ಪಾಟೀಲ್, '' ''
ಬಸವನಗೌಡ ಮಲ್ಲನಗೌಡ ಪಟೀಲ್, '' ''
ಸವಿತಾದುಬೆ, ಮೋಹನ್ ಪ್ರಸಾದ ದುಬೆ, '' ''
ಸಿ.ಬಿ.ವಿವೇಕಿ ಮತ್ತು ಮಕ್ಕಳು, '' ''
ಗಾಯತ್ರಿ, ಗಂಗಾಧರ, '' ''
ಪ್ರಭಾ, ಮೋಹನಕುಮಾರ್,'' ''
ಭಾರತಿ, ದೇವರಾಜ್, '' ''
ಕವಿತಾ.ಯು. ಮಂಜುನಾಥ್, '' ''
ಶಕುಂತಲಾ, ಯಮುನಪ್ಪ '' ''
ನೀಲಾಬಾಯಿ, ಎಲ್.ಎಮ್.ಖಟಾರೆ, '' ''
ವನಜಾಕ್ಷಿ, ಎಸ್.ರಮೇಶ್, '' ''
ಶಂಕರಗೌಡ ಭೀಮನಗೌಡ ಪಾಟೀಲ್, '' ''
ಬೆಟ್ಟದಪ್ಪ, ಮಂತ್ರಪ್ಪ ತಿಪ್ಪಣ್ಣನವರ, '' ''
ವಿರುಪಮ್ಮ ನೀಲಗಲ್ಲು ಅಸ್ಕಿಹಾಳ, '' ''
ಎಂ.ಸಿ.ರಾಜೇಶ್ವರಿ, ಶ್ರೀ ಬೆಟ್ಟಸಿದ್ದ '' ''
ಎಂ.ಜಿ.ಚಿದಾನಂದ ಶಾಸ್ತ್ರಿ ಯಳನಾಡು, '' ''
ಭೀಮಸೇನ ಬಸಪ್ಪ ಲಕ್ಷ್ಮೇಶ್ವರ , '' ''
ಶ್ರೀ ಗಂಗಾಧರ, ಜಟಗೇರಿ, '' ''
ಸುಶೀಲಾಬಾಯಿ ಶಿವಲಿಂಗಪ್ಪ ಮಾಲಿಪಾಟೀಲ, '' ''




1ಎ. ಮುನಿರಾಬಾದನಲ್ಲಿ ದಿ.19-4-2005 ನಡೆದ ವಿಶ್ವಧರ್ಮ ಪ್ರವಚನದ ವಿಶೇಷ ಕಾರ್ಯಕ್ರಮದಲ್ಲಿ ಪೂಜ್ಯ ಮಾತಾಜಿ ಮತ್ತು ಪೂ
ಗಂಗಾಮಾತಾಜಿಯವರಿಗೆ ಗೌರವಾರ್ಪಣೆ.




1ಬಿ.ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಶರಣೆ ಶಂಕರಮ್ಮನಿಗೆ ಅಕ್ಕಮಹಾದೇವಿ ಜಯಂತಿಯ ಶುಭದಿನ 24-4-20
ರಂದು ಜಂಗಮದೀಕ್ಷೆ ನೀಡಿ ಪೂಜ್ಯ ಶ್ರೀ ಮಾತೆ ಸತ್ಯಾದೇವಿ ಎಂದು ನಾಮಕರಣ ಮಾಡಲಾಯಿತು.



2.ಎ. ಬಸವಾನುಗ್ರಹ ಧಾಮ - ಗವಿಯ ಹೊರಭಾಗ.



2.ಬಿ. ಬಸವಾನುಗ್ರಹ ಧಾಮ - ಗವಿಯ ಒಳಭಾಗ.



3.ಎ. ಬಸವಾನುಗ್ರಹ ಧಾಮ ಗವಿಯನ್ನು ದಿ.30-4-2005 ರಂದು ದೈವೀಕರಿಸಿ ಬಸವೇಶ್ವರ ಪೂಜಾವ್ರತ ನೆರವೇರಿಸುತ್ತಿರುವ ಪೂ॰ ಮಾತಾಜಿ.



3.ಬಿ ಗವಿಯ ವಿವಿಧ ಗುಹೆಗಳಲ್ಲಿ ಪ್ರತಿಷ್ಠಾಪಿಸಲಾಗಿರುವ ಚನ್ನಬಸವಣ್ಣ ಮತ್ತು ಅಲ್ಲಮ ಪ್ರಭುದೇವರ ಮೂರ್ತಿಗಳು.



4.ಎ. ಕಲ್ಯಾಣ ಕರೆದಿದೆ ಕಲ್ಯಾಣ ಇದರ ನೃತ್ಯರೂಪಕ ಮಾಡಿದ 5 ವರ್ಷದ ಬಸವ ವಾಣಿ ಎಲ್ಲರ ಮನಗೆದ್ದಳು.



4.ಬಿ. ಬಸವ ವಾಣಿಗೆ ಆಶೀರ್ವಾದ.



5.ಎ. ಧ್ವಜ ವಂದನೆ ಮಾಡುತ್ತಿರುವ ಶರಣೆಯರು.



5.ಬಿ. ಧ್ವಜ ವಂದನೆ ಮಾಡುತ್ತಿರುವ ಶರಣರು.



6.ಎ. ನಾಲ್ಕನೆಯ ಕಲ್ಯಾಣ ಪರ್ವದ ಉದ್ಘಾಟನಾ ಸಭೆ



6.ಬಿ. ದಿ.1-5-2005 ರಂದು ನಾಲ್ಕನೆಯ ಕಲ್ಯಾಣಪರ್ವವನ್ನು ಉದ್ಘಾಟಿಸಿದ ನಂತರ ಮಾತನಾಡುತ್ತಿರುವ ಅಂತರರಾಷ್ಟ್ರೀಯ ಬಸವ ಕೇಂದ್ರದ ಪ್ರಧಾನ ಕಾರ್ಯದರ್ಶಿ ಅಮೇರಿಕಾದ ಯೋಗಿಶ್ವರಿ.



7.ಎ. ಉದ್ಘಾಟನೆ ಗೋಷ್ಠಿಯಲ್ಲಿ ಭಾಗವಹಿಸಿದ ಮಾಜಿ ವಿಧಾನ ಪರಿಷತ್ ಉಪಸಭಾಪತಿ ಡೇವಿಡ್ ಸಿಮೇಯೋನ್ ಮತ್ತು ಗುಲಬರ್ಗಾ ದಾಲ್‌ಮಿಲ್ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಬಿ.ಜಿ.ಪಾಟೀಲ್.




7.ಬಿ. ದಿ.2-5-2005ರಂದು ಚಿಂತನಗೋಷ್ಠಿ ಉದ್ಘಾಟಿಸುತ್ತಿರುವ ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಎನ್ ಪುಟ್ಟರುದ್ರಪ್ಪ.



8.ಎ. ಶೂನ್ಯ ಪೀಠಾರೋಹಣಕ್ಕೆ ಮೊದಲು ಪೂಜ್ಯ ಲಿಂ.ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಿಗೆ ಗೌರವಾರ್ಪಣೆ.




8.ಬಿ. ದಿ-3-5-2005 ರಂದು ಶೂನ್ಯ ಪೀಠಾರೋಹಣ ಮಾಡಿದ ಪೂಜ್ಯ ಅಲ್ಲಮಪ್ರಭು ಸ್ವಾಮಿಗಳಿಗೆ ರುದ್ರಾಕ್ಷಿ ಮುಕುಟಧಾರಣೆ.



9.ಎ. ಪೂಜ್ಯ ಜಗದ್ಗುರು ಮಾತೆ ಗಂಗಾದೇವಿ ಮತ್ತು ಪೂಜ್ಯ ಸಿದ್ಧರಾಮ ಸ್ವಾಮಿಗಳಿಂದ ಬಾಡದ ಮಲ್ಲಿಗೆಯ ಮಾಲಾರ್ಪಣೆ.




9.ಬಿ. ಪೂಜ್ಯ ಸಿದ್ಧರಾಮ ಸ್ವಾಮೀಜಿ, ಪೂಜ್ಯ ಬಸವ ಕುಮಾರ ಸ್ವಾಮೀಜಿ, ಪೂಜ್ಯ ಚನ್ನಬಸವಾನಂದ ಸ್ವಾಮಿಗಳಿಂದ ಗೌರವಾರ್ಪಣೆ.



10.ಎ. ಪೀಠಾರೋಹಣ ಗೋಷ್ಠಿಯಲ್ಲಿ ಉಪನ್ಯಾಸ ಮಾಡುತ್ತಿರುವ ಜಿಲ್ಲಾ ಪಂಚಾಯತನ ಮುಖ್ಯ ಲೆಕ್ಕಾಧಿಕಾರಿ ಎಸ್. ದಿವಾಕರ್.



10.ಬಿ. ಸಮಾರೋಪ ಸಮಾರಂಭದಲ್ಲಿ ಉಪನ್ಯಾಸ ಮಾಡುತ್ತಿರುವ ಇಂದುಮತಿ ದಿವಾಕರ್, ಗುಲಬರ್ಗಾ.



11.ಎ. ಸುಡು ಬೇಸಿಗೆಯ ದಾಹದಲ್ಲಿ ಬಾಯಾರಿದವರನ್ನು ತಣಿಸಲು ಅಗ್ಘವಣಿ ಹಂಪಯ್ಯ ಅರವಟ್ಟಿಗೆಯನ್ನು ಮತ್ತು ಮೋಳಿಗೆ ಮಾಹಾದೇವಿಯಮ್ಮನವರ ಅಂಬಲಿ ಪ್ರಸಾದ ವಿತರಿಸುವ ಕೇಂದ್ರ ಪ್ರಾರಂಭಿಸಲಾಯಿತು.



12.ಎ. ಮಹಾರಾಷ್ಟ್ರದ ಹೇರವಾಡ ರಾಷ್ಟ್ರೀಯ ಬಸವ ದಳದವರು ಬಸವ ಜಯಂತಿಗಾಗಿ , ಬಸವ ಕಲ್ಯಾಣದ ಐತಿಹಾಸಿಕ ಪರುಷ ಕಟ್ಟೆಯಿಂದ ಜ್ಯೋತಿ ಹಚ್ಚಿಕೊಂಡು ಹೊರಟಾಗ ಪೂಜ್ಯ ಮಾತೆ ಗಂಗಾದೇವಿ ದೀವಟಗೆಯನ್ನು ಹಚ್ಚಿಕೊಡುತ್ತಿದ್ದಾರೆ.




11.ಬಿ. ಪೂಜ್ಯ ಮಾತಾಜಿಯವರಿಂದ ಅರವಟ್ಟಿಗೆ ಉದ್ಘಾಟನೆ.



12.ಬಿ. ಕಾರ್ಯಕರ್ತ ದೀವಟಗೆಯೊಡನೆ ಓಡುತ್ತಾ ತಮ್ಮ ಊರಿಗೆ ಹೋಗಲು ಸಿದ್ಧರಾಗಿದ್ದಾರೆ.



13.ಎ. ಬೀದರಿನ ಬಸವ ಜಯಂತಿಯ ಮೆರವಣಿಗೆಯಲ್ಲಿ ಕೋಲಾಟದ ಸಂಭ್ರಮ



13.ಬಿ. ಮಂಗಳೂರಿನ ಬಿ.ಸಿ.ರೋಡಿನ ಬಸವ ಮಂಟಪದಲ್ಲಿ ಬಸವ ಜಯಂತಿ



14.ಎ. ಬೆಂಗಳೂರಿನಲ್ಲಿ ರಾಷ್ಟ್ರೀಯ ಬಸವ ದಳದವರಿಂದ ಪಥ ಸಂಚಲನ



14.ಬಿ. ಬಸವ ಜಯಂತಿ ದಿವಸ ಬಸವ ಮಂಟಪದ ಮುಂದೆ ಧ್ವಜಾರೋಹಣ - ಧ್ವಜವಂದನೆ.



2. ಶರಣ ವಂದನೆ, ದಿ 2-5-2005ರಂದು



15.ಬಿ.ಬೀದರ್ ಬಸವ ಜಯಂತಿ ಉತ್ಸವ ಸಮಾರಂಭದಲ್ಲಿ ಅರಣ್ಯ ಸಚಿವರಾದ ಗುರುಪಾದಪ್ಪ ನಾಗಮಾರಪಳ್ಳಿ, ವಿಜಯಕುಮಾರ ಪಟೇಲ್ ಗಾದಗಿ, ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಚಂದ್ರಮ್ಮ ಪಾಟೀಲ್ ಗಾದಗಿ, ಬೀದರ್ ಶಾಸಕ ಬಂಡೆಪ್ಪ ಖಾಶೆಂಪುರ್, ಲಿಂಗಾಯತ ಸಮಾಜದ ಅಧ್ಯಕ್ಷ ರಾಮಲಿಂಗಪ್ಪ ದೇವಣಿ, ಪಾಂಡುರಂಗ ಸೂರ್ಯವಂಶಿ ಚಿತ್ರದಲ್ಲಿದ್ದಾರೆ.



3.ಪೀಠಾರೋಹಣ ಕಾರ್ಯಕ್ರಮ